ಪ್ರಜಾವಾಣಿ ಶನಿವಾರ • ಜೂನ್ 8, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER

ಕ್ಲಾಸಿಫೈಡ್ಸ್

REAL ESTATE SELLING

Sites

Banashankari

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT Contact: 8050908920/ 9986866661

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BDA SITE FOR SALE @. BSK 6TH STAGE 7TH BLOCK 40x60 NORTH. IN GOOD LOCATION. 98455-55666

BDA SITE for Sale, Residential & Commercial Banashankari 6th stage, Banashankari 5th stage, Uttarahalli, Rajarajeshwarinagara 30x40, 40x60, 50x80, 80% Bank Loan. 9916592400

SALE, 60X40 BDA, NORTH FACING SITE @ BANASHANKARI 6th Stage 10th Block. Good Location. 7411255535

Bannerghatta Road

SITE FOR sale SIMHAPURI LAYOUT, Near Jigani Industrial area, Bengaluru 6100 sq ft. 9591932764

HBR Layout

HBR BEHIND BDA Complex 2nd Block Excellent Location Brand new 4 BHK Spacious Flat 2200 Sft Completion in 2 Months Price 10,000/ Sft: 98451-84220

Hennur

NARAYANPURA Behind Biozen, Excellent Location brand new Architect Designed 3 Separate Units. 2 Carparks Semi-Furnished on 700 sft site Built-up 2100 sft 3 Floors: 98451-84220

GUBBI CROSS Kuvempu Layout behind Decathlon Excellent Semi-Furnished Villa 4 BHK 2 Carparks 2150 Sft Site Built-up 4500 Sft: 98451-84220

Jayanagar

"JAYANAGAR 4TH-BLOCK 45x90 West facing Site with old house, Excellent Location, Brokers Excuse. 9845500019/ 7019314962"

BDA SITE for Sale, Residential & Prime Commercial Jayanagara JP Nagara, BTM Layout, HSR Layout, Koramangala 40x60, 50x80, 100x100, 80% Bank Loan. 9916592400.

40X60 BDA Site Sale Jayanagar 4th Block West Face Cool Joint Opposite Good Location: 9844845864

J P Nagar

JPNAGAR 9TH Phase 3rd Block 40x60 North Facing BDA Commercial Site on 80 Feet Road for Sale @ Rs.14000/ Sft Slightly Nego Call: 8546919133

Kengeri

30X40 CORNER Varahasandra Layout Hemmigepura Ward Opposite Kadalekai Parishe Conversion B Katha 4000/- Negotiable: 8105251219

Kanakapura Road

SITE SALE 30x40 BCMC Layout BDA_Approved Near_Metro_Station Doddakallasandra, 30`Feet Road. 6363726250.

SITES AVAILABLE Near Agara Village Thathaguni Kumbalagodu Road 30x40,East,Good Location,28 Lakhs Contact:9686201071

1256,1700SFT,2/3BHK,OC ,CC,FLATS,11000/- 1600sft Corner Flats1.40Cr30x40 4BHK,Tplx 2Cr, 30X45,12000/- Konanakunte:8904210201

Multiple Locations

BUYING/ SELLING BDA Properties Any Measurements Contact Sunstone Properties: 99804 33004/ 8217392686

Mysore Road

KETHOHALLI BIGBANYAN Tree 30x50 4 Sites, East, 2200/-Sqft. 5 KM- Challaghatta Metro. 9945724472, 7829830333.

SITES AVAILABLE Near K,Gollahalli Mysore Road, 30x50,East,DC Conversion E'Khata Good Location 35Lakhs: 9686201071

Manyata Tech Park

MANYATA RESIDENCY BDA 45x65 East Facing Site Prime location Suitable for Residential & Commercial 60 ft Road, Price 9.25Crs. 9740600199

Nagarabhavi

"NAGARABHAVI BDA Sites Sale 30x40 North, 30x50 East & 50x80 Commercial near BDA Complex. 9845862388"

BDA SITE Nagarabhavi 12th Block, Near Nammura Thindi, W/F 40ft Road 30x42 Owner: 9844009086/ 9343368313

Ombr Layout

OMBR LAYOUT Excellent location, East Facing 30x40 BDA SITE Price Rs. 19,000/ Sft. Call: 98451-84220

Rajajinagar

RAJAJINAGAR 5TH Block 68th Cross 1500 sqft South Facing Rs.25000/- sqft Slightly Negotiable.Contact: 9686469799



Sanjaynagar

SANJAYNAGAR KEB Layout BDA Approved 1050 Sft North West Corner Excellent Location Call 9341260828

RMV BHOOPASANDRA BDA site 29'x57' E/F 40' Rd, 3rd Main, Off Kalpana Chawla Rd @ 21k call 9980555558

Uttarahalli

UTTARAHALLI GATED Layout , A'Khatha Site Sale, 40x61, North Rs.9950/-psft Negotioble : 9740150364, 8884707773

Vishweshwariah Layout

"30X40 WEST facing BDA site Sale 40 feet Road Vishveshwaraiah Layout 7th Block. 9845500019/ 7019314962"

SMV 6TH Block Modern Layout BBMP A Katha 30x40 (East), 2nd Block 40x60 BDA: 9964971895

BDA SITE for Sale, Residential and Commercial Nagarbhavi, Sir M Vishveshwaraiah Layout, Kempegowda Layout 30x40, 40x60, 50x80, 80% Bank Loan. 9916592400

30X40 SITE Sale Vishveshwaraiah Layout 8th Block Corner And 40X60 Site Sale 5th Block: 8310003509

Vidyaranyapura

34X60, 2040 Sqft 40ft Road BBMP B Katha Vidyaranyapura Price 6500/- Psqft Slightly Negotiable: 9916119936

Hegdenagar

MCECHS EXCELLENT location Brand new Architect Designed E/F 4 BHK, 1 Carpark. Independent House Semi-Furnished on 600 Sft site, 1900 Sft Built-up 3 Floors: 98451-84220

MCECHS HEGDE Nagar Excellent location 700 Sft. South Facing 'A' Katha site Price 13,000: 98451-84220

Hejjala

40X60 SOUTH East Corner Site for Sale at Judicial Layout, 3rd Phase, Hejjala, nearby Mysore Road, Contact: 9980163987

Kempegowda Layout

BDA SITE Nadaprabhu Kempegowda Layout, Ist Block, adjacent 300 Feet Road, 30x40 East facing,Call: 9448793428

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms attached bathroom, built with teak wood, Italian Marble Tiles, at BEML Layout, Basaveshwaranagar, Bangalore-560079. Clear Titles & 'A' Katha, Rs.5.10 Crores (slightly negotiable). Party going out of station. Immediate Registration. 9845765559/ 9845043282

J P Nagar

SALE J.P.NAGAR Second Phase, Residential (House Free) Site Price only, West Facing 3.3crores, Reddy: 9880226644.

Nagarabhavi

"INDIVIDUAL HOUSE BDA 1.20 Lakhs Rental income new_building ₹3.80_Crore negotiable, opposite Nammura Thindi, Nagarabhavi. 9945309883"

***NAGARABHAVI* 30X50** E/F 4 BHK Duplex House. 30X40 N/F 4BHK Duplex Beautiful House sale Call.9591013777

R T Nagar

R.T.NAGAR HMT Layout 40X60 5-BHK Duplex House N/W Corner Teak and Italian Marble 4-Carparking 9845378269

Flat

Jayanagar

JAYANAGAR 1ST Block 1233sft 2_BHK Posh_Flat on 1st Floor For-Sale Near Madhavan Park With_Carpark Call:9739393607

Mysore Road

MYSORE ROAD AVILABLE SPACIOUS 3BHK FLAT FOR LEASE RS. 32 LACS WITH CARPARKING NEGOTIABLE: 9738223432

Mysore

LUXURIOUS 2 BHK FURNISHED APARTMENT 1270 SQFT WITH COVERED PATIO AND 2 CAR PARKING SPACES FOR SALE IN PRIME YADAVGIRI, MYSORE. CONTACT: 9845578081 7907061006

Agricultural Land Converted

Devanahalli

REQUIRED/WANTED AGRICULTURE green zone or converted 4 to 50 acres outright purchase & joint venture for MNC Company & NRI Investors in and around Doddaballapura, Devanahalli, Chikkaballpur, Sarjapura Road, Hoskote-Chintamani-Malur surroundings, minimum Road width 40 feet plus. Flexible Payment. 9916592400

Agricultural Land

Doddaballapura

8.5 ACRES Agriculture Land 75kms from Hebbal Beyond Doddaballapura with Yielding Mango, Arecanut, Coconut, Teak and Neem Trees. General Property with Clear Titles: 9008943416

Commercial Land

Banashankari

"40X60 COMMERCIAL property for sale Hosakerehalli 100_feet_Ring Road Banashankari 3rd_Stage. 9845500019/ 7019314962"

Commerical

Bannerghatta Road

SALE EXCELLENT Commercial East Facing Site 50x85 Panduranga Nagar, 60' Road, 10,80,00,000/-, Suraj Realtors- 9845232711

Hebbal

ON BELLARY Main-Road Commercial Property East 25,000sft Converted Near Nandi Upchar Hotel Clear Titles, 9738111222 9341260828

Jayanagar

JAYANAGARA 5TH Block, Commercial Site Sale, 80x120,North Facing, 100 Feet Road, 38 Crores: 9845212877

Ulsoor

COMMERCIAL PROPERTY for sale- RBNMS Grounds Ulsoor 12500 sqft build up area, land area 3420 Sqft ask price 15 Crore. Contact bhavesh 9035770159 for more details

Vidyaranyapura

SITE BBMP A Katha 40x30, 20X30 SEMI COMMERCIAL SF 9200/- THINDLU LAKE SHOW GARDEN: 8296895858

Kempegowda Layout

SEMI-COMMERCIAL SITE SALE, NADAPRABHU KEMPEGOWDA LAYOUT 8th Block 'D' SECTOR 165X100, W/F, ₹.4500/-. Contact: 9686469799

Home Finance

General

INVESTORS REQUIRED with 2- 4 Cr for 15 Acre Layout Development Residentially Converted Land. Good Returns 12 Months Period: 9902604714

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVILWORKS. 9448572697


ALL STUDENTS & PARENTS ARE WELCOME
asianet ಸುವರ್ಣ ನ್ಯೂಸ್
ನೇರ. ದಿಟ್ಟ. ನಿರಂತರ
REVA UNIVERSITY Bengaluru, India
Presents
SUVARNA SHIKSHANA
4th EDITION
ಇಂದಿನಿಂದ ಪ್ರಾರಂಭ
Powered By
RAMAIAH UNIVERSITY OF APPLIED SCIENCES
Beverage Partner
Springs
Association Partner
Minister Presence
Shri Sharanprakash Patil
Minister of Medical Education and Skill Development of Karnataka
GUEST
Shri C. N. Ashwath Narayan
MLA, Malleswaram
Former Deputy Chief Minister of Karnataka
STATE BOARD, CBSE, ICSE, COMEDK, CET & NEET ರಿಸಲ್ಟ್ ಬಂದಿದೆ
CET ರ್‍ಯಾಂಕಿಂಗ್ ಪ್ರಕಾರ ಯಾವ ಕಾಲೇಜು? ಯಾವ ಕೋರ್ಸ್ ಆಯ್ಕೆ ಮಾಡಿಕೊಳ್ಳೋದು?
50 ಕ್ಕೂ ಹೆಚ್ಚು ವಿದ್ಯಾ ಸಂಸ್ಥೆಗಳನ್ನು ಒಂದೇ ಸೂರಿನಲ್ಲಿ ಭೇಟಿ ಮಾಡಬಹುದು
FREE ENTRY
A MEGA EDUCATION EXPO
8&9 JUNE
ಸ್ಥಳ : ಮಲ್ಲೇಶ್ವರಂ ಸರ್ಕಾರಿ ಶಾಲಾ ಮೈದಾನ, ಮಾರ್ಗೋಸಾ ರೋಡ್, ಕೆ.ಸಿ ಜನರಲ್ ಹಾಸ್ಪಿಟಲ್ ಹತ್ತಿರ, ಮಲ್ಲೇಶ್ವರಂ.
Agency Partner
Ad6 advertising
SIDEWAYS 6
Scholarships
Competitions
Surprise Gifts
Spot Admission
Discount on fees
Top Engineering Colleges under one roof
Platinum Sponsors
CAMBRIDGE INSTITUTE OF TECHNOLOGY
CMR UNIVERSITY
Gold Sponsors
EAST POINT GROUP OF INSTITUTIONS
GARDEN CITY UNIVERSITY
SAPTHAGIRI NPS UNIVERSITY
Silver Sponsors
CHANAKYA UNIVERSITY
KLE
NAGARJUNA College of Engineering & Technology
SEA GROUP OF INSTITUTIONS
Stall Partners
Oxford
EAST WEST GROUP OF INSTITUTIONS
ACHARYA INSTITUTE OF TECHNOLOGY
DON BOSCO INSTITUTE OF TECHNOLOGY
CHENNAIS AMRITA
RAJARAJESWARI COLLEGE OF ENGINEERING
KRUPANIDHI GROUP OF INSTITUTIONS
MANIPAL
ADICHUNCHANAGIRI UNIVERSITY
S-VYASA
KLE SOCIETY'S INDEPENDENT PU COLLEGE NAGARABHAVI
LOHIT'S ACADEMY
VEMANA INSTITUTE OF TECHNOLOGY
AAKASH
ST PAULS COLLEGE
AMC INSTITUTIONS
ATRIA
CITY COLLEGE
AIMS INSTITUTES
DR.S.R.CHANDRASEKHAR INSTITUTE OF SPEECH AND HEARING
RV UNIVERSITY
DOCTOR ABROAD MEDICAL EDUCATIONAL SERVICES
MS ENGINEERING COLLEGE
FOR MORE INFORMATION : 90368 09439 | 9829185383 | 81973 89897 | 73537 14196

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಕ್ಲಾಸಿಫೈಡ್ಸ್ WEEKEND CORNER

REAL ESTATE BUYING

Joint Development

Joint Venture

JOINT DEVELOPMENT:BUILDERS AND INVESTORS GROUP WITH MORE THAN 25 YEARS EXPERIENCE LOOKING FOR SITES FROM 2400 SFT TO 25000 SFT IN JAYANAGAR AND BSK 2ND STAGE FOR RESIDENTIAL/COMMERCIAL APARTMENT PROJECT. CALL:+917411382184

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout, Kempegowda Layout & any BDA Katha Sites, immediate settlement. Genuine Sellers Contact: 9972223222, 9606632777

Kanakapura Road

WANTED SITE For INVESTMENT Anjanapura, NarayanNagar, Gubblala, BCMC, BCC Layout, Banashankari 6th Stage, Balaj`Layout, Agent Excuse Contact: 9008259222.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Nagarabhavi

WANTED SITES 30X40 40X60 50X80 NAGARBHAVI RAJAJINAGAR HOUSING Co. OPERATIVE SOCIETY VISHWESHWARAIAH LAYOUT NGEF:8105688602

RENTAL PROPERTIES

Accommodation Available

Commercial

1ST FLOOR Commercial office Dr.Rajkumar Road 3000sqft Fully Furnished with all Good Facilities Ph:9353242472, 9845052222

House

RENT: GIRINAGAR 2BHK DH FF Corporation Water semifurnished and 2BHK GF Hanumanthnagar. Owner: 78925-30410/ 9448809902

JOB OPPORTUNITIES

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

Wanted

REQUIRED SHOWROOM and Field MALE SALES EXECUTIVE. Age Limit 25-45 Years. For Swastik Ceramics Co. Jayanagar 5th Block. Contact: 9741040290

PUBLIC NOTICE

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34.

TENDER NOTICE

Sealed Quotations are invited from reputed firms for supply of following items to KRJS Institutions.

1. **Supply of HP Pro Tower 400 G9 PCI Desktop PC Computers – 141 Nos.**
2. **BPL / TCL Smart LED UHD Smart TVs 65" - 9 Nos.**
3. **BPL / TCL Smart LED UHD Smart TVs 75" – 1 No.**
4. **Furnitures : Computer Chairs, White Boards, Shoe Rack, Book / Bag Rack, Faculty Table, Faculty S - type Chairs.**

Submit your sealed quotations within 7 days from the date of this advertisement to **General Secretary, KRJS**
More details: **www.reddyjanasangha.org**
or Contact: 9945450345 8050733633.

Sd/- President   Sd/- General Secretary

AUTOMOTIVE

Four Wheelers Selling

Others

YELLOW USED School Vans Cost 525000 onwards Year 2012 ForceTT MAZDA Bangalore WhatsApp 98452-28595

PERSONAL

Change of Name

CHANGE OF NAME
I, **BIPIN BOPAIAH** Residing at Halligattu Post & Village, Virajpet, Kodagu District- 571216 have changed my name to **BIPIN BOPAIAH POKACHANDA SUBBAIAH** vide affidavit dated 07.06.2024 before notary Gangaraju. B.N, Bangalore. Henceforth I shall be called **BIPIN BOPAIAH POKACHANDA SUBBAIAH** only.

CHANGE OF NAME
I, **JYOTHI SHAMSUNDER MUTHREJA** residing at Benson Town, Bangalore – 560046, declare that my name was **JYOTHI SHAM MUTHREJA** and vide affidavit dt 04.06.2024 before Notary K V Mani, Bangalore, my name has changed to **JYOTHI SHAMSUNDER MUTHREJA**. Both names pertain to me. Henceforth, I will be called **JYOTHI SHAMSUNDER MUTHREJA** only.

CHANGE OF NAME
I, VIJAYANARASIMHA D V S/o Sundramma Venkat Bhatt, R/at # 767/A, 9th Main Road, 3rd Block, 3rd Stage, Basaveshwaranagar, Bangalore-560079 have changed my name to **VIJAYA NARASIMHA BHATT S/o Venkata Raja Bhatt,** vide affidavit dated 30.05.2024 before notary K.Venkateshan, Bangalore.

ಏಳು ದಿನದಲ್ಲಿ 447 ಮರ ಧರೆಗೆ; 1573 ಸ್ಥಳಗಳಲ್ಲಿ ಕಟ್ಟಡ ತ್ಯಾಜ್ಯ

ಮರಗಳ ತೆರವಿಗೆ ಬೃಹತ್ ಕ್ರೇನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಜೂನ್ 2ರಿಂದ ಭಾರಿ ಗಾತ್ರದ ನೂರಾರು ಮರಗಳು ಧರೆಗುರುಳಿದ್ದು, ಬೃಹತ್ ಕ್ರೇನ್‌ಗಳನ್ನು ಬಳಸಿ, ಬಿಬಿಎಂಪಿ ಅರಣ್ಯ ವಿಭಾಗದ ಸಿಬ್ಬಂದಿ ಅವುಗಳನ್ನು ತೆರವು ಮಾಡುತ್ತಿದ್ದಾರೆ.

ಅರಣ್ಯ ವಿಭಾಗದಿಂದ ಮರ ತೆರವುಗೊಳಿಸುವ 39 ತಂಡಗಳು ಕಾರ್ಯನಿರ್ವಹಿಸುತ್ತಿದ್ದು, ಜೊತೆಗೆ 4 ದ್ವಿಚಕ್ರ ತಂಡಗಳಿಂದಲೂ ಬಿದ್ದಿರುವ ಮರಗಳ ತೆರವು ಕಾರ್ಯ ನಿರಂತರವಾಗಿ ನಡೆಯುತ್ತಿದೆ.

ವಲಯವಾರು ಹೆಚ್ಚುವರಿ ಮರ ತೆರವು ತಂಡಗಳು, ವಾಹನಗಳನ್ನು ನಿಯೋಜಿಸಿಕೊಳ್ಳಲಾಗಿದೆ. ದೊಡ್ಡ ಮರಗಳನ್ನು ತೆರವುಗೊಳಿಸಲು 11 ಕ್ರೇನ್, 2 ಜೆಸಿಬಿ ಹಾಗೂ ಮರ ಕಟಾವು ಯಂತ್ರೋಪಕರಣಗಳನ್ನು ಬಳಸಿಕೊಳ್ಳಲಾಗಿದೆ. ವಾರ್ಡ್‌ಗಳಲ್ಲಿರುವ ಟ್ರ್ಯಾಕ್ಟರ್‌ಗಳಿಂದ ಕಟಾವು ಮಾಡಿರುವ ಮರದ ದಿಮ್ಮಿ, ಕೊಂಬೆಗಳನ್ನು ಡಂಪಿಂಗ್ ಯಾರ್ಡ್‌ಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಟ್ರ್ಯಾಕ್ಟರ್ ಬಳಕೆ: ಮರಗಳು ಧರೆಗುರುಳಿರುವ ಸ್ಥಳದಲ್ಲಿ ಬಿದ್ದಿರುವ ತ್ಯಾಜ್ಯ, ರಸ್ತೆ ಬದಿ, ಪಾದಚಾರಿ ಮಾರ್ಗದಲ್ಲಿರುವ ತ್ಯಾಜ್ಯವನ್ನು ಆಯಾ ವಲಯಗಳಲ್ಲಿ ಟ್ರ್ಯಾಕ್ಟರ್‌ಗಳನ್ನು ಬಳಸಿಕೊಂಡು ತೆರವುಗೊಳಿಸಲಾಗುತ್ತಿದೆ.

ಬೃಹತ್ ಮರಗಳು ಧರೆಗುರುಳಿರುವ ಕಡೆ ಮರ ಕಟಾವು ಯಂತ್ರದ ಮೂಲಕ ಕತ್ತರಿಸಿ, ಚಿಕ್ಕ-ಚಿಕ್ಕ ರೆಂಬೆ, ಎಲೆಗಳು ರಸ್ತೆ ಬದಿ, ಪಾದಚಾರಿ ಮಾರ್ಗ ಅಥವಾ ಸ್ಥಳದಲ್ಲೇ ಇವೆ. ಇದರಿಂದ ನಾಗರಿಕರಿಗೆ ಹಾಗೂ ವಾಹನ ಸವಾರರಿಗೆ ಸಮಸ್ಯೆ ಆಗುತ್ತಿದ್ದರೆ ಪಾಲಿಕೆ ಉಚಿತ ಸಹಾಯವಾಣಿ 1533ಕ್ಕೆ ಕರೆ ಮಾಡಿ ದೂರು ನೀಡಬಹುದು ಎಂದು ತಿಳಿಸಲಾಗಿದೆ.

447 ಮರ ಧರೆಗೆ: ನಗರದಲ್ಲಿ ಜೂನ್ 2ರಿಂದ ಜೂನ್ 7ರವರೆಗೆ 447 ಮರಗಳು ಬಿದ್ದಿವೆ. ಇದರಲ್ಲಿ ಇನ್ನೂ 71 ಮರಗಳನ್ನು ತೆರವು ಮಾಡಬೇಕಿದೆ. ದಕ್ಷಿಣ ವಲಯದಲ್ಲಿ ಅತಿಹೆಚ್ಚು 136 ಮರಗಳು ಧರೆಗುರುಳಿವೆ. ಪಶ್ಚಿಮದಲ್ಲಿ 132, ದಾಸರಹಳ್ಳಿ 47 ಮರಗಳು ಉರುಳಿಬಿದ್ದಿವೆ. 1,126 ಕೊಂಬೆಗಳು ಬಿದ್ದಿದ್ದು, 140 ತೆರವಾಗಬೇಕಿದೆ.

ನಗರದ 1,573 ಸ್ಥಳಗಳಲ್ಲಿ ಕಟ್ಟಡ ತ್ಯಾಜ್ಯ ಬಿದ್ದಿರುವ ಬಗ್ಗೆ ದೂರುಗಳು ಬಂದಿದ್ದು, ಅದರಲ್ಲಿ 905 ಕಡೆಯಿದ್ದ ಕಟ್ಟಡ ತ್ಯಾಜ್ಯವನ್ನು ವಿಲೇವಾರಿ ಮಾಡಲಾಗಿದೆ. ದಕ್ಷಿಣ ವಲಯದಲ್ಲಿ 551, ಪಶ್ಚಿಮದಲ್ಲಿ 456, ಪೂರ್ವದಲ್ಲಿ 138, ಯಲಹಂಕದಲ್ಲಿ 112, ಆರ್.ಆರ್. ನಗರ ವಲಯದ 94 ಪ್ರದೇಶಗಳಲ್ಲಿ ಕಟ್ಟಡ ತ್ಯಾಜ್ಯ ಬಿದ್ದಿದ್ದ ದೂರುಗಳು ಬಂದಿದ್ದವು ಎಂದು ಪ್ರಕಟಣೆ ತಿಳಿಸಿದೆ.



ಬನಶಂಕರಿ 3ನೇ ಹಂತದಲ್ಲಿ ಬಿದ್ದಿದ್ದ ದೊಡ್ಡ ಮರವನ್ನು ಬೃಹತ್ ಕ್ರೇನ್ ಮೂಲಕ ಬಿಬಿಎಂಪಿ ಅರಣ್ಯ ವಿಭಾಗದ ಸಿಬ್ಬಂದಿ ತೆರವುಗೊಳಿಸಿದರು



ಮೈಸೂರು ರಸ್ತೆಯ ಮೇಲ್ಸೇತುವೆ ಮೇಲಿಂದ ಮಳೆನೀರು ಹರಿಯಲು ತೊಡಕಾಗಿದ್ದ ಚರಂಡಿಯನ್ನು ಸಂಚಾರ ಪೊಲೀಸರೊಬ್ಬರು ಶುಕ್ರವಾರ ಸಂಜೆ ಸ್ವಚ್ಛಗೊಳಿಸಿದರು —ಪ್ರಜಾವಾಣಿ ಚಿತ್ರ

ಹಲವೆಡೆ ಸಾಧಾರಣ ಮಳೆ

ನಗರದಲ್ಲಿ ಶುಕ್ರವಾರ ಸಂಜೆ ಹಲವೆಡೆ ಸಾಧಾರಣವಾಗಿ ಮಳೆಯಾಗಿದೆ. ಕಡಿಮೆ ಮಳೆಯಾಗಿದ್ದರೂ ಹಲವು ರಸ್ತೆಗಳು ಎಂದಿನಂತೆ ಜಲಾವೃತಗೊಂಡು ವಾಹನ ಸಂಚಾರಕ್ಕೆ ಸಮಸ್ಯೆಯಾಯಿತು.

ಬೆಳ್ಳಂದೂರು ಕೋಡಿ, ಯಮಲೂರು ರಸ್ತೆ, ಮಾರತ್‌ಹಳ್ಳಿ, ತುಳಸಿ ಜಂಕ್ಷನ್, ಕಾಡುಬೀಸನಹಳ್ಳಿ, ರಾಮಮೂರ್ತಿನಗರ, ಕಸ್ತೂರಿನಗರ, ರಿಚ್ಮಂಡ್ ವೃತ್ತ, ವಿಂಡ್ಸರ್ ಮ್ಯಾನರ್ ಜಂಕ್ಷನ್, ಕ್ವೀನ್ಸ್ ರಸ್ತೆಯಲ್ಲಿ ನೀರು ನಿಂತು ವಾಹನದಟ್ಟಣೆ ಉಂಟಾಗಿತ್ತು.

ಎಚ್. ಗೊಲ್ಲಹಳ್ಳಿಯಲ್ಲಿ 1.5 ಸೆಂ.ಮೀ, ಕೋರಮಂಗಲದಲ್ಲಿ 1.4 ಸೆಂ.ಮೀ, ಹಂಪಿನಗರದಲ್ಲಿ 1.3 ಸೆಂ.ಮೀ, ಚಾಮರಾಜಪೇಟೆಯಲ್ಲಿ 1.2 ಸೆಂ.ಮೀ, ದೊರೆಸಾನಿಪಾಳ್ಯ, ರಾಜರಾಜೇಶ್ವರಿನಗರ, ಕೋನೇನ ಅಗ್ರಹಾರ, ಸಂಪಂಗಿರಾಮನಗರದಲ್ಲಿ ತಲಾ 1 ಸೆಂ.ಮೀಟರ್ ಮಳೆಯಾಗಿದೆ.

ಸಿಎಂ, ಡಿಸಿಎಂ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅಕ್ರಮ ಹಣ ವರ್ಗಾವಣೆ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೇರವಾಗಿ ಭಾಗಿಯಾಗಿದ್ದು, ಅವರು ರಾಜೀನಾಮೆ ನೀಡಬೇಕು' ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಆಗ್ರಹಿಸಿದೆ.

'ಹಣ ಅಕ್ರಮ ವರ್ಗಾವಣೆ ಹಗರಣವು ರಾಜ್ಯ ಸರ್ಕಾರದಲ್ಲಿನ ಭ್ರಷ್ಟಾಚಾರ ಮತ್ತು ದುರಾಡಳಿತವನ್ನು ತೋರಿಸುತ್ತದೆ. ಸಚಿವ ನಾಗೇಂದ್ರ ಅವರ ರಾಜೀನಾಮೆ ಪಡೆಯುವ ಮೂಲಕ ಹಗರಣವನ್ನು ಈ ಹಂತದಲ್ಲಿಯೇ ಮುಚ್ಚಿಹಾಕಲು ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ' ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಎಚ್.ಎಸ್. ಲಿಂಗೇಗೌಡ ಹಾಗೂ ಪ್ರಧಾನ ಕಾರ್ಯದರ್ಶಿ ಸಿ.ಎನ್. ದೀಪಕ್ ಆರೋಪಿಸಿದ್ದಾರೆ.

'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗಾಗಿ ಮೀಸಲಿಡಲಾದ ಹಣವನ್ನು ಸರ್ಕಾರದ ಇತರೆ ಇಲಾಖೆಗಳಿಗೆ ಮತ್ತು ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವ ಪ್ರಯತ್ನ ನಡೆಸಿತ್ತು. ಆದರೆ ಈಗ ಇದೇ ಹಣವನ್ನು ಲೂಟಿ ಮಾಡಲಾಗಿದ್ದು, ಚುನಾವಣೆಗೆ ಬಳಕೆ ಮಾಡಿಕೊಳ್ಳಲಾಗಿದೆ. ದಲಿತ, ಪರಿಶಿಷ್ಟ, ಹಿಂದುಳಿದ, ಅಲ್ಪಸಂಖ್ಯಾತ ಮತ್ತು ದಮನಿತರ ಶ್ರೇಯೋಭಿವೃದ್ಧಿ ಮಾಡಲಾಗುವುದು ಎಂದು ಹೇಳಿದ್ದ ಸರ್ಕಾರ, ಅವರಿಗಾಗಿ ಮೀಸಲಿಟ್ಟಿರುವ ಹಣವನ್ನು ದೋಚುತ್ತಿದೆ' ಎಂದು ದೂರಿದ್ದಾರೆ.

'ಈ ಹಿಂದಿನ ಸರ್ಕಾರದ ಅವಧಿಯಲ್ಲೂ ಇದೇ ರೀತಿ ಅವ್ಯವಹಾರ ನಡೆದಿರುವ ಬಗ್ಗೆ ಮಾತುಗಳು ಕೇಳಿಬರುತ್ತಿವೆ. ಆದ್ದರಿಂದ ಎಲ್ಲ ನಿಗಮಗಳ ಕಳೆದ ಐದು ವರ್ಷಗಳ ಹಣಕಾಸಿನ ವ್ಯವಹಾರಗಳ ತನಿಖೆಗೆ ಪ್ರತ್ಯೇಕ ತನಿಖಾ ತಂಡಗಳನ್ನು ರಚಿಸಬೇಕು' ಎಂದು ಪ್ರಕಟಣೆಯಲ್ಲಿ ಅವರು ಆಗ್ರಹಿಸಿದ್ದಾರೆ.

ಸಚಿವ ಶರಣಪ್ರಕಾಶ್, ದದ್ದಲ್ ಬಂಧನಕ್ಕೆ ಬಿಜೆಪಿ ಆಗ್ರಹ

'ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ₹187 ಕೋಟಿ ಹಗರಣದಲ್ಲಿ ಭಾಗಿ ಆಗಿರುವ ನಿಗಮದ ಅಧ್ಯಕ್ಷ ಬಸವನಗೌಡ ದದ್ದಲ್ ಹಾಗೂ ಹಗರಣದ ಪುರಾವೆಗಳನ್ನು ನಾಶ ಮಾಡಲು ಸಭೆ ನಡೆಸಿದ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ ಅವರನ್ನು ಬಂಧಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಹುಲ್‌ಗಾಂಧಿ ನಿರ್ದೇಶನ ನೀಡುವರೇ' ಎಂದು ಬಿಜೆಪಿ ಶಾಸಕ, ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಪ್ರಶ್ನಿಸಿದ್ದಾರೆ.

'ರಾಹುಲ್ ಗಾಂಧಿ ಸಭೆ ನಡೆಸಿದ್ದು ನೋಡಿದರೆ, ಈ ಹಗರಣವನ್ನು ಮುಚ್ಚಿ ಹಾಕಲೆಂದೇ ಅವರು ಬಂದಂತಿದೆ. ಬಡವರ ಹಣವನ್ನು ಲೂಟಿ ಹೊಡೆದ ನಿಮ್ಮದೇ ಭ್ರಷ್ಟ ಸರ್ಕಾರದ ಸಚಿವರ ರಾಜೀನಾಮೆ ಪಡೆಯಬೇಕು' ಎಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

18ನೇ ಲೋಕಸಭೆ: 15ರಿಂದ ಅಧಿವೇಶನ ಸಾಧ್ಯತೆ

ನವದೆಹಲಿ(ಪಿಟಿಐ): 18ನೇ ಲೋಕಸಭೆಯ ಮೊದಲ ಅಧಿವೇಶನ ಜೂನ್ 15ರಿಂದ ಆರಂಭಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ಶುಕ್ರವಾರ ತಿಳಿಸಿವೆ.

ಲೋಕಸಭಾ ಸದಸ್ಯರಾಗಿ ನೂತನವಾಗಿ ಆಯ್ಕೆ ಆಗಿರುವವರು ಪ್ರಮಾಣವಚನ ಸ್ವೀಕಾರ ಮಾಡುವುದರೊಂದಿಗೆ ಅಧಿವೇಶನ ಆರಂಭವಾಗಲಿದೆ. ಈ ಕಾರ್ಯಕ್ರಮ ಎರಡು ದಿನಗಳ ಕಾಲ ನಡೆಯಲಿದ್ದು, ಆ ಬಳಿಕ ನೂತನ ಸ್ಪೀಕರ್‌ರನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಅಧಿವೇಶನ ನಡೆಯುವ ದಿನಗಳ ಕುರಿತು ನೂತನ ಸಚಿವ ಸಂಪುಟದ ಸಭೆಯಲ್ಲಿ ಅಂತಿಮ ನಿರ್ಣಯ ಕೈಗೊಳ್ಳಲಾಗುತ್ತದೆ. ಭಾನುವಾರ ಸಂಜೆ, ನರೇಂದ್ರ ಮೋದಿ ಅವರು ನೂತನ ಪ್ರಧಾನಿಯಾಗಿ ಪ್ರತಿಜ್ಞಾನಿಧಿ ಸ್ವೀಕರಿಸಿದ ನಂತರ ಸಚಿವ ಸಂಪುಟ ಸಭೆ ನಡೆಯಲಿದೆ.

ಅಧಿವೇಶನವು ಜೂನ್ 22ರಂದು ಮುಕ್ತಾಯಗೊಳ್ಳುವ ಸಾಧ್ಯತೆ ಇದೆ ಎಂದೂ ಮೂಲಗಳು ಹೇಳಿವೆ.

'ಹಮಾರೆ ಬಾರಹ್' ಚಿತ್ರಕ್ಕೆ ನಿಷೇಧ: ಆರ್. ಅಶೋಕ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ 'ಹಮಾರೆ ಬಾರಹ್' ಹಿಂದಿ ಚಲನಚಿತ್ರವನ್ನು ನಿಷೇಧಿಸಲು ತೀರ್ಮಾನಿಸಿದೆ. ಇದು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

ಈ ಕುರಿತು 'ಎಕ್ಸ್' ಮೂಲಕ ಆಕ್ರೋಶ ವ್ಯಕ್ತಪಡಿಸಿರುವ ಅವರು, ಈ ಚಲನಚಿತ್ರವನ್ನು ನಿಷೇಧಿಸುವ ಮೂಲಕ ಯಾರನ್ನು ಓಲೈಸಲು ಮುಂದಾಗಿದೆ ಎಂದು ಅವರು ಪ್ರಶ್ನಿಸಿದ್ದಾರೆ.

'ಈ ಚಲನಚಿತ್ರವು ಎಲ್ಲ ರಾಜ್ಯಗಳಲ್ಲೂ ಬಿಡುಗಡೆಯಾಗಿ ಪ್ರದರ್ಶನಗೊಳ್ಳುತ್ತಿದೆ. ಈ ಚಿತ್ರ ಪ್ರದರ್ಶನ ಮಾಡುವುದರಿಂದ ಕಾನೂನು ಸುವ್ಯವಸ್ಥೆಗೆ ಭಂಗ ಬರುವುದಿಲ್ಲ. ನಾಗರಿಕ ಹಕ್ಕುಗಳು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುವುದರ ಬದಲಿಗೆ ಸಿದ್ದರಾಮಯ್ಯ ಅವರು, ಮೂಲಭೂತ ವಾದಿಗಳ ತಾಳಕ್ಕೆ ಕುಣಿಯುತ್ತಿದ್ದಾರೆ. ಮತ ಬ್ಯಾಂಕ್ ರಾಜಕಾರಣ ಮಾಡುವ ಇವರಿಗೆ ನಾಚಿಕೆ ಆಗಬೇಕು' ಎಂದಿದ್ದಾರೆ.




ನಿಧನ ವಾರ್ತೆ

ಜಯಮ್ಮ



ಬೆಂಗಳೂರು: ತುಮಕೂರು ನಿವಾಸಿ ಜಯಮ್ಮ (78) ಬೆಂಗಳೂರಿನಲ್ಲಿ ಶುಕ್ರವಾರ ನಿಧನ ಹೊಂದಿದರು. ಅವರು ದಿವಂಗತ ಎಂ.ಈಶ್ವರಯ್ಯ ಅವರ ಪತ್ನಿ. ಮೃತರಿಗೆ ಐವರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ. ಅಂತ್ಯಕ್ರಿಯೆ ತುಮಕೂರು ಜಿಲ್ಲೆ ಹೆತ್ತೇನಹಳ್ಳಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.





ಚರಂಡಿ ತಳಭಾಗಕ್ಕೆ ಕಾಂಕ್ರೀಟ್ ಬೇಡ: ಬಿಬಿಎಂಪಿ, ಬಿಡಿಎಗೆ ಮತ್ತೊಮ್ಮೆ ಸೂಚನೆ

ಕಾಲುವೆಗಳಲ್ಲಿ ಇಂಗುಗುಂಡಿ ಕಡ್ಡಾಯ

● ಆರ್. ಮಂಜುನಾಥ್

ಬೆಂಗಳೂರು: ರಸ್ತೆ ಬದಿ ಚರಂಡಿ ಹಾಗೂ ಮಳೆ ನೀರು ಹರಿಯುವ ಬೃಹತ್ ಕಾಲುವೆಗಳ ತಳಭಾಗದಲ್ಲಿ ಕಾಂಕ್ರೀಟ್ ಹಾಕಬಾರದು ಮತ್ತು ಮಳೆನೀರು ಇಂಗಲು ವ್ಯವಸ್ಥೆ ರೂಪಿಸಬೇಕು ಎಂದು ಬಿಬಿಎಂಪಿ ಹಾಗೂ ಬಿಡಿಎಗೆ ಮತ್ತೊಮ್ಮೆ ತಾಕೀತು ಮಾಡಲಾಗಿದೆ.

ಸುವರ್ಣಮುಖಿ ನದಿ ಜಲಾನಯನ ಪುನಶ್ಚೇತನ ಯೋಜನೆಯ ವ್ಯಾಪ್ತಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಪ್ರದೇಶಗಳಿದ್ದು, ಇವು ತಮ್ಮ ಸುಪರ್ದಿಯಲ್ಲಿರುವ ಪ್ರದೇಶಗಳಲ್ಲಿ ಮಳೆ ನೀರು ಇಂಗುವಂತೆ ಚರಂಡಿಗಳಲ್ಲಿ ವ್ಯವಸ್ಥೆ ಮಾಡಬೇಕು ಎಂದು ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್ ಸೂಚಿಸಿದ್ದಾರೆ.

ನಗರದ ದಕ್ಷಿಣ ತಾಲ್ಲೂಕಿನ ಬಹುತೇಕ ಪ್ರದೇಶದ ಮಳೆ ನೀರು ಸುವರ್ಣಮುಖಿ ನದಿಗೆ ಹರಿಯುತ್ತದೆ. ಬಿಬಿಎಂಪಿ ಹಾಗೂ ಬಿಡಿಎ ಪ್ರದೇಶ ಈ ವ್ಯಾಪ್ತಿಯಲ್ಲಿ ಹೆಚ್ಚಿದ್ದು, ನಗರದಲ್ಲಿ ಬೀಳುವ ಮಳೆ ನೀರನ್ನು ಚರಂಡಿಗಳಲ್ಲಿ ಇಂಗಿಸಲು, 'ಇಂಗು ಗುಂಡಿಗಳನ್ನು' ನಿರ್ಮಿಸಬೇಕು. ಇನ್ನು ಮುಂದೆ ಹೊಸದಾಗಿ ಚರಂಡಿಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಕೆಳಭಾಗದಲ್ಲಿ ಕಾಂಕ್ರೀಟ್ ಹಾಕಲೇಬಾರದು ಎಂದು ತಾಕೀತು ಮಾಡಲಾಗಿದೆ.

ಚರಂಡಿಗಳು ಹಾಗೂ ಬೃಹತ್ ಕಾಲುವೆಗಳಿಂದ ಮಳೆ ನೀರು ಜಲಮೂಲಗಳಿಗೆ ಹರಿಯುತ್ತದೆ. ಹೀಗಾಗಿ ಪ್ಲಾಸ್ಟಿಕ್, ಒಳಚರಂಡಿ ನೀರು ಹಾಗೂ ಘನತ್ಯಾಜ್ಯ ವಸ್ತುಗಳು ಚರಂಡಿಗಳಿಗೆ ಸೇರದಂತೆ ಖಚಿತಪಡಿಸಿಕೊಳ್ಳಬೇಕು. ಜಲಮೂಲಗಳಿಗೆ ಅಡ್ಡಿ ಉಂಟು ಮಾಡುವ ಎಲ್ಲ ರೀತಿಯ ನಿರ್ಮಾಣಗಳನ್ನೂ ತೆರವುಗೊಳಿಸಿ, ಮಳೆ ನೀರು ಸಂಗ್ರಹದ ಬಗ್ಗೆ ಜನರಲ್ಲಿ ಹೆಚ್ಚಿನ ಅರಿವು ಮೂಡಿಸಬೇಕು. ಬಿಬಿಎಂಪಿಯ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಅವರು ಜಲಮೂಲಗಳಿಗೆ ಘನತ್ಯಾಜ್ಯ ಬಾರದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಎಸ್‌ಟಿಪಿ ಸ್ಥಾಪನೆ: ಬೆಂಗಳೂರು ಜಲಮಂಡಳಿ ವ್ಯಾಪ್ತಿಯಲ್ಲಿ ಒಳಚರಂಡಿ ನೀರನ್ನು ಪ್ರದೇಶವಾರು ನಿಯಂತ್ರಣ ಮಾಡುವುದು ಅಗತ್ಯವಾಗಿದೆ. ಜನವಸತಿ ಪ್ರದೇಶಗಳಲ್ಲಿ ಎಲ್ಲರೂ ಒಳಚರಂಡಿ ಸಂಪರ್ಕವನ್ನು ಹೊಂದಿರುವ ಬಗ್ಗೆ ಜಲಮಂಡಳಿ ಖಚಿತಪಡಿಸಿಕೊಳ್ಳಬೇಕು. ಒಳಚರಂಡಿ ನೀರನ್ನು ತೆರೆದ ಕಾಲುವೆಗೆ ಹರಿಸುವ ಮುನ್ನ ಅದನ್ನು ಸಂಸ್ಕರಿಸಿಯೇ ಹರಿಸಬೇಕು. ಅದಕ್ಕಾಗಿ ಅಗತ್ಯವಿರುವೆಡೆ ತ್ಯಾಜ್ಯ ನೀರು ಸಂಸ್ಕರಣೆ ಘಟಕಗಳನ್ನು (ಎಸ್‌ಟಿಪಿ) ನಿರ್ಮಿಸಬೇಕು ಎಂದು ಜಲಮಂಡಳಿಗೆ ಆದೇಶಿಸಲಾಗಿದೆ.

ಬಿಬಿಎಂಪಿ, ಬಿಡಿಎ ಹಾಗೂ ಜಲಮಂಡಳಿ ಯಾವುದೇ ರೀತಿಯ ಹೆಚ್ಚಿನ ಅನುದಾನವನ್ನು ನಿರೀಕ್ಷಿಸದೆ, ಲಭ್ಯವಿರುವ ಅನುದಾನದಲ್ಲೇ ಈ ಎಲ್ಲ ಕಾರ್ಯಗಳನ್ನು ಅನುಷ್ಠಾನಗೊಳಿಸಬೇಕು. ಒಂದು ತಿಂಗಳಲ್ಲಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ, ಅನುಷ್ಠಾನ ಕಾರ್ಯ ಆರಂಭಿಸಬೇಕು ಎಂದು ಮೇ 17ರಂದೇ ಆದೇಶಿಸಲಾಗಿದೆ.

ಮುಖ್ಯಾಂಶಗಳು

- 13,873 ಕಿ.ಮೀ; ಬಿಬಿಎಂಪಿ ವ್ಯಾಪ್ತಿಯಲ್ಲಿರುವ ರಸ್ತೆ
- 860 ಕಿ.ಮೀ; ಮಳೆನೀರು ಹರಿಯುವ ಬೃಹತ್ ಕಾಲುವೆ
- 5,500 ಕಿ.ಮೀ; ಬಿಡಿಎ ವ್ಯಾಪ್ತಿಯ ರಸ್ತೆ



ಬಿಬಿಎಂಪಿ ವ್ಯಾಪ್ತಿಯ ರಸ್ತೆಯಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ಚರಂಡಿ

ಕೋಟಿಗೂ ಹೆಚ್ಚು ಇಂಗುಗುಂಡಿ ಸಾಧ್ಯ!

'ಯಡಿಯೂರು ವಾರ್ಡ್‌ನಲ್ಲಿರುವ ರಸ್ತೆ ಚರಂಡಿಗಳಲ್ಲಿ ಇಂಗುಗುಂಡಿಗಳನ್ನು ನಿರ್ಮಾಣ ಮಾಡಲಾಗಿದೆ. ಇದರಿಂದ ಮಳೆ ನೀರು ಹರಿವಿನ ಪ್ರಮಾಣ ಕಡಿತವಾಗುವ ಜೊತೆಗೆ ಅಂತರ್ಜಲ ಕೂಡ ವೃದ್ಧಿಯಾಗಿದೆ. ಇದೇ ರೀತಿ ನಗರದ ಎಲ್ಲೆಡೆಯೂ ಕೋಟ್ಯಂತರ ಇಂಗುಗುಂಡಿಗಳನ್ನು ನಿರ್ಮಿಸಬಹುದು. ಆದರೆ, ಎಲ್ಲೆಡೆ ಇಂತಹ ಕಾಮಗಾರಿ ನಡೆದಿಲ್ಲ. ಸ್ಥಳೀಯ ಜನಪ್ರತಿನಿಧಿಗಳ ಇಚ್ಛಾಶಕ್ತಿಯನುಸಾರ ಕಾಮಗಾರಿ ನಡೆಯುತ್ತದೆ. ಯಾರೂ ಪರಿಶೀಲನೆ ಮಾಡುವುದಿಲ್ಲ' ಎಂದು ಎಂಜಿನಿಯರ್‌ಗಳು ಮಾಹಿತಿ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲೇ ಸುಮಾರು 13 ಸಾವಿರ ಕಿ.ಮೀಗೂ ಹೆಚ್ಚು ಉದ್ದದ ರಸ್ತೆಯಿದ್ದು, ಎರಡೂ ಬದಿ ಸೇರಿದಂತೆ 26 ಸಾವಿರ ಕಿ.ಮೀ ಆಗುತ್ತದೆ. ಪ್ರತಿ ಕಿ.ಮೀಗೆ ಕನಿಷ್ಠ 5 ಇಂಗುಗುಂಡಿಗಳನ್ನು ನಿರ್ಮಿಸಿದರೂ 1 ಕೋಟಿಗೂ ಹೆಚ್ಚು ಇಂಗುಗುಂಡಿಗಳಾಗುತ್ತವೆ. ಇವುಗಳಿಂದ ಪ್ರತಿ ಮಳೆಯಲ್ಲೂ ಕೋಟ್ಯಂತರ ಲೀಟರ್ ನೀರನ್ನು ಭೂಮಿಗೆ ಇಂಗಿಸಬಹುದಾಗಿದೆ. ಇನ್ನು ಬಿಡಿಎ, ಬಿಎಂಆರ್‌ಡಿಎ, ನಗರ ಜಿಲ್ಲೆಯ ರಸ್ತೆ ಬದಿಯ ಚರಂಡಿಗಳಲ್ಲೆಲ್ಲ ಇಂಗುಗುಂಡಿಗಳನ್ನು ನಿರ್ಮಿಸಿದರೆ ಅಂತರ್ಜಲ ಸಮೃದ್ಧಗೊಳ್ಳುತ್ತದೆ.

ಎನ್‌ಜಿಟಿ ಆದೇಶ ಪಾಲನೆಯಾಗುತ್ತಿಲ್ಲ!

'ಮಳೆನೀರು ಹರಿಯುವ ಕಾಲುವೆ ಹಾಗೂ ಚರಂಡಿಗಳಿಗೆ ತಳಭಾಗದಲ್ಲಿ ಕಾಂಕ್ರೀಟ್ ಹಾಕಬಾರದು. ಬಾಕ್ಸ್ ಟೈಪ್ ಅಥವಾ ಯು ಆಕಾರದಲ್ಲಿ ಕಾಂಕ್ರೀಟ್ ಚರಂಡಿಗಳನ್ನು ನಿರ್ಮಾಣ ಮಾಡಬಾರದು ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಆದೇಶ ಹೊರಡಿಸಿದೆ. ಆದರೆ, ನಗರದಲ್ಲಿ ಬಿಬಿಎಂಪಿ, ಬಿಡಿಎ ಸೇರಿದಂತೆ ಯಾವ ಇಲಾಖೆಗಳೂ ಈ ಆದೇಶವನ್ನು ಪಾಲಿಸುತ್ತಿಲ್ಲ. ಎರಡು ಬದಿ ವಾಲ್‌ಗಳನ್ನು ನಿರ್ಮಿಸಿದರೆ, ಕಾಮಗಾರಿಗೆ ಹೆಚ್ಚಿನ ಕಾಳಜಿ ಅಗತ್ಯವಿರುತ್ತದೆ. ಚರಂಡಿಗಳನ್ನು ಬಾಕ್ಸ್ ಅಥವಾ ಯು ಆಕಾರದಲ್ಲಿ ಕಾಂಕ್ರೀಟ್ ಹಾಕಿ ನಿರ್ಮಿಸುವುದು ಸುಲಭ. ಹೀಗಾಗಿ ಎನ್‌ಜಿಟಿ ಆದೇಶವನ್ನು ಹಿರಿಯ ಎಂಜಿನಿಯರ್‌ಗಳೂ ಲೆಕ್ಕಕ್ಕೆ ಇರಿಸಿಕೊಂಡಿಲ್ಲ' ಎಂದು ಬಿಡಿಎ ಹಾಗೂ ಬಿಬಿಎಂಪಿ ಎಂಜಿನಿಯರ್‌ಗಳು ತಿಳಿಸಿದರು.

ಸೋಲಿನ ದುಃಖದಿಂದ ಹೊರಬಂದಿಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ನನ್ನ ತಮ್ಮ ಡಿ.ಕೆ. ಸುರೇಶ್ ಸೋಲಿನ ದುಃಖದಿಂದ ನಾವು ಇನ್ನೂ ಹೊರಬಂದಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸುರೇಶ್ ಸ್ಪರ್ಧೆ ಸಾಧ್ಯತೆ ಕುರಿತು ಸುದ್ದಿಗಾರರ ಪ್ರಶ್ನೆಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, 'ಚನ್ನಪಟ್ಟಣ ಉಪಚುನಾವಣೆ ಬಗ್ಗೆ ನಾವು ಆಲೋಚನೆಯನ್ನೇ ಮಾಡಿಲ್ಲ. ನಿದ್ರಾವಸ್ಥೆಯಲ್ಲೇ ಇದ್ದೇನೆ' ಎಂದರು.

'ಸದ್ಯಕ್ಕೆ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಜನರು ನಮಗೆ ಕೊಟ್ಟಿರುವ ಮುನ್ನಡೆಗಾಗಿ ಅವರಿಗೆ ಧನ್ಯವಾದ ಅರ್ಪಿಸುತ್ತೇನೆ. ಸುರೇಶ್ ಅವರಿಗೆ ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸುವ ಆತುರವಿಲ್ಲ. ಅಲ್ಲಿ ಅನೇಕ ಕಾರ್ಯಕರ್ತರಿದ್ದಾರೆ. ಮುಂದೆ ನೋಡೋಣ' ಎಂದು ಹೇಳಿದರು.

'ಸುರೇಶ್ ಸೋಲನ್ನು ನನ್ನ ವೈಯಕ್ತಿಕ ಸೋಲು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಫಲಿತಾಂಶದ ಕುರಿತು ಅತಿಯಾದ ವಿಶ್ವಾಸದಲ್ಲಿದ್ದೆ. ರಾಜ್ಯ ಸುತ್ತಬೇಕಿದ್ದ ಕಾರಣದಿಂದ ಬೆಂಗಳೂರು ಗ್ರಾಮಾಂತರಕ್ಕೆ ಹೆಚ್ಚು ಸಮಯ ಕೊಡಲಿಲ್ಲ' ಎಂದರು.

'ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿ, ಜೆಡಿಎಸ್‌ನ ತಂತ್ರಗಾರಿಕೆ ಫಲ ನೀಡಿತು. ವಿವಾದರಹಿತ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಮೂಲಕ ಉತ್ತಮ ತಂತ್ರಗಾರಿಕೆ ಮಾಡಿದರು. ಜೆಡಿಎಸ್‌ನಿಂದ ಸ್ಪರ್ಧಿಸಿದರೆ ಹೆಚ್ಚಿನ ಮತ ಸಿಗುವುದಿಲ್ಲ ಎಂದು ಬಿಜೆಪಿಯಿಂದಲೇ ಕಣಕ್ಕಿಳಿಸಿದರು. ಅದು ಕೂಡ ಗೆಲುವಿಗೆ ಕಾರಣ' ಎಂದು ಶಿವಕುಮಾರ್ ಹೇಳಿದರು.

'ನಮ್ಮ ಅಭ್ಯರ್ಥಿ ವಿರುದ್ಧ ಆಡಳಿತ ವಿರೋಧಿ ಅಲೆ ಇರಲಿಲ್ಲ. ಆದರೂ ಸೋಲನ್ನು ಒಪ್ಪಿಕೊಳ್ಳುತ್ತೇವೆ. ಮಾಗಡಿ, ಕುಣಿಗಲ್, ರಾಮನಗರದಲ್ಲಿ ಕಾಂಗ್ರೆಸ್‌ಗೆ ಮುನ್ನಡೆ ಸಿಕ್ಕಿದೆ. ಆದರೆ, ಕನಕಪುರದಲ್ಲಿ ನಿರೀಕ್ಷಿತ ಮುನ್ನಡೆ ದೊರಕಿಲ್ಲ. ಕನಿಷ್ಠ 60,000 ಮತಗಳ ಮುನ್ನಡೆ ನಿರೀಕ್ಷಿಸಿದ್ದೆವು. ಆದರೆ, 20,000 ಮತಗಳ ಮುನ್ನಡೆ ಮಾತ್ರ ಸಿಕ್ಕಿದೆ. ಬೆಂಗಳೂರು ದಕ್ಷಿಣ ಸೇರಿದಂತೆ ನಗರ ಪ್ರದೇಶದಲ್ಲಿ ನಮಗೆ ಪೆಟ್ಟುಬಿದ್ದಿದೆ' ಎಂದರು.

'ಎಚ್.ಡಿ.ದೇವೇಗೌಡರ ಕುಟುಂಬದ ವಿರುದ್ಧ ನಿಮ್ಮ ಮುಂದಿನ ತಂತ್ರಗಾರಿಕೆ ಏನು' ಎಂಬ ಪ್ರಶ್ನೆಗೆ, 'ದೇವೇಗೌಡರು, ಕುಮಾರಸ್ವಾಮಿ, ಅನಿತಕ್ಕ, ನಿಖಿಲ್ ಎಲ್ಲರೂ ಈ ಹಿಂದೆ ಸೋತಿದ್ದರು. ಈಗ ಸುರೇಶ್ ಸೋತಿದ್ದಾರೆ ಅಷ್ಟೆ' ಎಂದು ಮಾತು ಮುಗಿಸಿದರು.



ಸಮಸ್ಯೆ ಆಲಿಕೆ ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್ ಅವರು ವಿಜ್ಞಾನನಗರ ವಾರ್ಡ್‌ನಲ್ಲಿರುವ ಪೌರಕಾರ್ಮಿಕರ ಕಾಲೊನಿಗೆ ಶುಕ್ರವಾರ ಭೇಟಿ ನೀಡಿ, ಪೌರಕಾರ್ಮಿಕರ ಸಮಸ್ಯೆ ಆಲಿಸಿದರು

ನಡ್ಡಾ–ಮಾಳವೀಯ ವಿರುದ್ಧ ಬಲವಂತದ ಕ್ರಮ ಬೇಡ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಿಗೆ ಸೇರಬೇಕಾದ ಅನುದಾನವನ್ನು ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಸ್ಲಿಮರಿಗೆ ಹಂಚುತ್ತಾರೆ ಎಂಬಂತಹ ಅನಿಮೇಟೆಡ್ ವಿಡಿಯೊವನ್ನು ಬಿಜೆಪಿಯ ಅಧಿಕೃತ ಎಕ್ಸ್ ಖಾತೆಯಲ್ಲಿ ಟ್ವೀಟ್ ಮಾಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಬಿಜೆಪಿಯ ಐ.ಟಿ.ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ವಿರುದ್ಧ ಬಲವಂತದ ಕ್ರಮಕ್ಕೆ ಮುಂದಾಗಬಾರದು' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್ಐಆರ್ ರದ್ದು ಕೋರಿ ನಡ್ಡಾ ಹಾಗೂ ಮಾಳವೀಯ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು. 'ಮುಂದಿನ ವಿಚಾರಣೆಯವರೆಗೆ ಹೈಗ್ರೌಂಡ್ಸ್ ಠಾಣೆ ಪೊಲೀಸರು ಆರೋಪಿಗಳ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು' ಎಂದು ಆದೇಶಿಸಿದರು. ಜೆ.ಪಿ.ನಡ್ಡಾ ಮತ್ತು ಅಮಿತ್ ಮಾಳವೀಯ ಪರ ಹೈಕೋರ್ಟ್ ವಕೀಲ ಎಂ.ವಿನೋದ್ ಕುಮಾರ್ ಹಾಜರಿದ್ದರು.

ಪ್ರಕರಣವೇನು?: 'ಅಮಿತ್ ಮಾಳವೀಯ ಅವರು ಜೆ.ಪಿ.ನಡ್ಡಾ ಮತ್ತು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಸೂಚನೆಯಂತೆ ಪಕ್ಷದ ಅಧಿಕೃತ 'ಎಕ್ಸ್' ಖಾತೆಯಲ್ಲಿ ಎಚ್ಚರ,ಎಚ್ಚರ, ಎಚ್ಚರ ಎಂಬ ಒಂದು ಅನಿಮೇಟೆಡ್ ವಿಡಿಯೊ ಪೋಸ್ಟ್ ಮಾಡಿದ್ದರು. ಈ ವಿಡಿಯೊದಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ವರ್ಗಗಳನ್ನು ಮೊಟ್ಟೆಗಳೆಂದು ಬಿಂಬಿಸಿ ಈ ಮೊಟ್ಟೆಗಳಿರುವ ಬುಟ್ಟಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಸ್ಲಿಂ ಎಂಬ ಮತ್ತೊಂದು ಮೊಟ್ಟೆಯನ್ನು ತಂದಿಟ್ಟು, ಈ ಮೊಟ್ಟೆ ಮರಿಯಾದ ನಂತರ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಿಗೆ ಸೇರಬೇಕಾದ ಅನುದಾನವನ್ನು ಮುಸ್ಲಿಂ ಸಮುದಾಯಕ್ಕೆ ಸೇರಿದ ಮೊಟ್ಟೆಯಿಂದ ಬಂದ ಮರಿಯ ಬಾಯಿಗೆ ತಿನ್ನಿಸುವಂತೆ ಅನಿಮೇಶನ್ ರೂಪಿಸಲಾಗಿದೆ. ಮುಸ್ಲಿಂ ಸಮುದಾಯ ಹೋಲುವ ಪಕ್ಷಿಯು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ವರ್ಗಗಳನ್ನು ಗೂಡಿನಿಂದ ಒದ್ದು ಓಡಿಸುವಂತೆ ಚಿತ್ರಿಸಲಾಗಿದೆ' ಎಂದು ದೂರಿನಲ್ಲಿ ಆರೋಪಿಸಲಾಗಿದೆ.

'2024ರ ಏಪ್ರಿಲ್ 4ರ ಸಂಜೆ ಪೋಸ್ಟ್ ಮಾಡಲಾಗಿರುವ ಈ ಟ್ವೀಟ್ ವಿವಿಧ ಸಮುದಾಯಗಳ ನಡುವೆ ದ್ವೇಷ ಕೆರಳಿಸುವ ರೀತಿಯಲ್ಲಿದೆ ಮತ್ತು ಆರೋಪಿಗಳು ಈ ಮೂಲಕ ಮಾದರಿ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ' ಎಂದು ಆರೋಪಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಮಾಧ್ಯಮ ವಿಭಾಗದ ಉಪಾಧ್ಯಕ್ಷ ಎಂ.ರಮೇಶ್ ಬಾಬು 2024ರ ಏಪ್ರಿಲ್ 5ರಂದು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ಇದರನ್ವಯ ಜನಪ್ರತಿನಿಧಿ ಕಾಯ್ದೆ–1951ರ ಕಲಂ 125 ಮತ್ತು ಐಪಿಸಿ 505 (2)ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಎಟಿಎಂನಲ್ಲಿ ಲೂಟಿ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವೇಕ್‌ನಗರದ ವಿಕ್ಟೋರಿಯಾ ಲೇಔಟ್‌ನಲ್ಲಿರುವ ಎಟಿಎಂನಲ್ಲಿದ್ದ ₹20.12 ಲಕ್ಷ ದೋಚಿದ್ದ ಹಣ ತುಂಬುವ ಏಜೆನ್ಸಿಯ ಇಬ್ಬರು ಮಾಜಿ ನೌಕರರು ಸೇರಿ ಮೂವರನ್ನು ವಿವೇಕ್‌ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮುರುಳಿ (23), ಪೋತಾಲು ಸಾಹಿತೇಜ (23), ಎರಿಕಲಾ ವೆಂಕಟೇಶ (28) ಬಂಧಿತರು.

ಬಂಧಿತರಿಂದ ₹ 20.12 ಲಕ್ಷ ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಎಟಿಎಂಗಳಿಗೆ ಹಣ ಹಾಕುವ ಸೆಕ್ಯೂರಿಟಿ ವ್ಯಾಲ್ಯೂ ಇಂಡಿಯಾ ಏಜೆನ್ಸಿಯಲ್ಲಿ ಆರೋಪಿ ಮುರುಳಿ ಕೆಲಸ ಮಾಡುತ್ತಿದ್ದ. 2022ರಲ್ಲಿ ಕೆಲಸ ಬಿಟ್ಟಿದ್ದ. ಅದೇ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದ ಎರಿಕಲಾ ವೆಂಕಟೇಶ ಹಾಗೂ ಮುರಳಿ ಒಂದೇ ಊರಿನವರು. ಇತ್ತ ಕೆಲಸ ಬಿಟ್ಟು ಊರಿಗೆ ಹೋಗಿದ್ದ ಮುರಳಿ ಸಾಲ ಮಾಡಿಕೊಂಡಿದ್ದ. ಸಾಲ ಮಾಡಿದ್ದ ವಿಚಾರವನ್ನು ವೆಂಕಟೇಶ್‌ಗೆ ಮುರಳಿ ತಿಳಿಸಿದ್ದ. ನಂತರ, ಎಟಿಎಂನಿಂದ ಹಣ ಕಳವು ಮಾಡಲು ಯೋಜನೆ ರೂಪಿಸಿದ್ದರು' ಎಂದು ಪೊಲೀಸರು ಹೇಳಿದರು.

'ಎಟಿಎಂಗೆ ಹಣ ಹಾಕಲು 12 ಸಂಖ್ಯೆಯ ಪಿನ್ ನಂಬರ್‌ಗಳನ್ನು ಕಸ್ಟೋಡಿಯನ್‌ಗಳಿಗೆ ನೀಡಲಾಗಿರುತ್ತದೆ. ಇಬ್ಬರು ವ್ಯಕ್ತಿಗಳಿಗೆ ತಲಾ 6 ಸಂಖ್ಯೆ ಪಾಸ್‌ವರ್ಡ್ ಕೊಡುತ್ತಾರೆ. ಈ ಹಿಂದೆ ಮುರಳಿ ಮೊದಲ 6 ಪಾಸ್‌ವರ್ಡ್ ಅನ್ನು ಪಡೆದು ಬರೆದಿಟ್ಟುಕೊಂಡು ಕೆಲಸ ಬಿಟ್ಟಿದ್ದ. ಇದಾದ ಬಳಿಕ ಕೊನೆಯ 6 ಪಾಸ್‌ವರ್ಡ್ ಅನ್ನು ಎರಿಕಲಾ ವೆಂಕಟೇಶ್‌ಗೆ ತಿಳಿದಿತ್ತು. ಕಳವು ಮಾಡಿದ ಹಣ ಹಂಚಿಕೊಳ್ಳುವ ಷರತ್ತು ಆಧರಿಸಿ ವೆಂಕಟೇಶ್ ತನ್ನ ಬಳಿಯಿದ್ದ ಪಾಸ್‌ವರ್ಡ್ ಅನ್ನು ಮುರಳಿಗೆ ನೀಡಿದ್ದ. ಪೋತಾಲು ಸಾಹಿತೇಜ ಜತೆಗೆ ಸೇರಿಕೊಂಡು ಎಟಿಎಂನಿಂದ ಹಣ ದೋಚಿದ್ದರು' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

₹6.29 ಕೋಟಿ ಮೌಲ್ಯದ 9 ಕೆ.ಜಿ ಚಿನ್ನ ವಶ

ಬೆಂಗಳೂರು: ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ₹6.29 ಕೋಟಿ ಮೌಲ್ಯದ 9 ಕೆ.ಜಿ ಚಿನ್ನವನ್ನು ಕೇಂದ್ರ ಕಂದಾಯ ನಿರ್ದೇಶನಾಲಯದ ಗುಪ್ತಚರ ವಿಭಾಗದ ಅಧಿಕಾರಿಗಳು ಜಪ್ತಿ ಮಾಡಿಕೊಂಡಿದ್ದಾರೆ.

ಎರಡು ಪ್ರತ್ಯೇಕ ವಿಮಾನದಲ್ಲಿ ಅಕ್ರಮವಾಗಿ ತಂದ ಚಿನ್ನವನ್ನು ಜಪ್ತಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ಬಂದ ಥಾಯ್ ಏರ್‌ವೇಸ್ ವಿಮಾನದಲ್ಲಿ ಚಿನ್ನ ಕಳ್ಳಸಾಗಣೆ ಬಗ್ಗೆ ಖಚಿತ ಮಾಹಿತಿ ದೊರಕಿತ್ತು. ಹ್ಯಾಂಡ್ ಬ್ಯಾಗ್‌ನಲ್ಲಿ ಗಟ್ಟಿ ಹಾಗೂ ಕಚ್ಚಾ ರೂಪದಲ್ಲಿದ್ದ 6.8 ಕೆ.ಜಿ ಚಿನ್ನ ಪತ್ತೆಯಾಗಿದೆ. ಇದನ್ನು ವಶಕ್ಕೆ ಪಡೆಯಲಾಗಿದೆ. ಇದರ ಮೌಲ್ಯ ₹ 4.77 ಕೋಟಿ ಎಂದು ಅಂದಾಜಿಸಲಾಗಿದೆ. ಹ್ಯಾಂಡ್‌ಬ್ಯಾಗ್‌ನಲ್ಲಿದ್ದ ದಾಖಲೆಗಳ ಆಧಾರದಲ್ಲಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಇದಾದ ಕೆಲವೇ ತಾಸಿನಲ್ಲಿ ದುಬೈನಿಂದ ಬಂದ ಎಮಿರೇಟ್ಸ್ ವಿಮಾನವನ್ನು ತಪಾಸಣೆ ನಡೆಸಲಾಯಿತು. ಗಟ್ಟಿ ರೂಪದಲ್ಲಿ 2.18 ಕೆ.ಜಿ ಚಿನ್ನ ವಶಪಡಿಸಿಕೊಳ್ಳಲಾಗಿದೆ. ಇದರ ಮೌಲ್ಯ ₹1.52 ಕೋಟಿ ಎಂದು ಅಂದಾಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೈಕ್‌ನಲ್ಲಿ ಗಾಂಜಾ ಇರಿಸಿ ₹7 ಲಕ್ಷಕ್ಕೆ ಬೇಡಿಕೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಟೆಕ್ ವಿದ್ಯಾರ್ಥಿಯನ್ನು ಅಡ್ಡಗಟ್ಟಿ ಬೈಕ್ ಕಸಿದುಕೊಂಡು ಹಣ ಸುಲಿಗೆ ಮಾಡಿದ್ದ ರೌಡಿ ಸೇರಿ ಆರು ಆರೋಪಿಗಳನ್ನು ಸೋಲದೇವನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಬಾಣಾವರದ ಗೋಪಿಚಂದ್, ಶರತ್, ಚೇತನ್‌ಗೌಡ, ಚೇತನ್ ಕುಮಾರ್, ತೇಜಪ್ಪರೆಡ್ಡಿ, ಮಂಜುನಾಥ್ ಬಂಧಿತ ಆರೋಪಿಗಳು.

ಬಂಧಿತರಿಂದ ₹18,500 ನಗದು, ಆಟೊ, ಎರಡು ರಾಯಲ್ ಎನ್‌ಫೀಲ್ಡ್ ಬೈಕ್ ಹಾಗೂ ಒಂದು ಕಾರನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಮತ್ತೊಬ್ಬ ರೌಡಿ ತಲೆಮರೆಸಿಕೊಂಡಿದ್ದು ಆತನ ಪತ್ತೆಗೆ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಗ್ರಾಮಾಂತರ ಜಿಲ್ಲೆಯ ರಾಜಾನುಕುಂಟೆ ಇಟಗಲ್‌ಪುರದಲ್ಲಿ ನೆಲೆಸಿದ್ದ ವಿದ್ಯಾರ್ಥಿ ತನ್ನ ಸ್ನೇಹಿತರ ಜತೆಗೆ, ಹೆಸರಘಟ್ಟದ ಡಾಬಾವೊಂದರಲ್ಲಿ ಊಟ ಮುಗಿಸಿ ಮನೆಗೆ ತೆರಳುತ್ತಿದ್ದರು. ಬೈಕ್‌ನಲ್ಲಿ ಬಂದ ದರೋಡೆಕೋರರು ವಿದ್ಯಾರ್ಥಿಯನ್ನು ಅಡ್ಡಗಟ್ಟಿ, ನಿನ್ನ ಸ್ನೇಹಿತರು ಬೈಕ್‌ಗೆ ಗುದ್ದಿ ಪರಾರಿಯಾಗಿದ್ದಾರೆ ಎಂದು ಬೆದರಿಕೆ ಒಡ್ಡಿದ್ದರು. ನಂತರ, ಸ್ಥಳಕ್ಕೆ ಮತ್ತಷ್ಟು ಮಂದಿಯನ್ನು ಕರೆಸಿಕೊಂಡು ದರೋಡೆಕೋರರು, ವಿದ್ಯಾರ್ಥಿಯ ಬೈಕ್‌ಗೆ ಗಾಂಜಾ ಇಟ್ಟು ವಿಡಿಯೊ ಚಿತ್ರೀಕರಿಸಿಕೊಂಡಿದ್ದರು. ಚಿನ್ನದ ಸರ ಹಾಗೂ ₹20 ಸಾವಿರ ನಗದು ಕಸಿದುಕೊಂಡಿದ್ದರು. ವಿಡಿಯೊ ಡಿಲೀಟ್ ಮಾಡಲು ₹7 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು' ಎಂದು ಪೊಲೀಸರು ಹೇಳಿದರು.

'₹50 ಸಾವಿರ ಪಡೆದುಕೊಂಡು, ಉಳಿಕೆ ಹಣವನ್ನು ಎರಡು ದಿನಗಳ ಒಳಗಾಗಿ ಕೊಡುವಂತೆ ಸೂಚಿಸಿ ವಿದ್ಯಾರ್ಥಿಯನ್ನು ಬಿಟ್ಟು ಕಳುಹಿಸಿದ್ದರು. ಹಣ ನೀಡದಿದ್ದರೆ ಜೀವಂತವಾಗಿ ಬಿಡುವುದಿಲ್ಲ ಎಂದೂ ಬೆದರಿಸಿದ್ದರು. ಬಳಿಕ ವಿದ್ಯಾರ್ಥಿ ನೀಡಿದ್ದ ದೂರು ಆಧರಿಸಿ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಪ್ರಕರಣ ಸಂಬಂಧ ರಚಿಸಿದ್ದ ವಿಶೇಷ ತಂಡವು, ಚಿಕ್ಕಸಂದ್ರದ ಎಜಿಬಿ ಲೇಔಟ್ ಬಳಿ ನಾಲ್ವರನ್ನು, ಹೆಸರಘಟ್ಟ ಮುಖ್ಯರಸ್ತೆಯ ಹುರುಳಿಚಿಕ್ಕನಹಳ್ಳಿಯಲ್ಲಿ ಇಬ್ಬರನ್ನು ಬಂಧಿಸಿದೆ' ಎಂದು ಪೊಲೀಸರು ಹೇಳಿದರು.

ಅಪಘಾತ: ಅಕ್ಕ, ತಮ್ಮ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಸಮೀಪದ ದೊಡ್ಡ ನಾಗಮಂಗಲದಲ್ಲಿ ನೀರಿನ ಟ್ಯಾಂಕರ್ ಹಾಗೂ ಬೈಕ್ ನಡುವೆ ಶುಕ್ರವಾರ ಸಂಭವಿಸಿದ ಅಪಘಾತದಲ್ಲಿ ಅಕ್ಕ ಮತ್ತು ತಮ್ಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ದೊಡ್ಡನಾಗಮಂಗಲದ ಕೆಂಪೇಗೌಡ ಬಡಾವಣೆ ನಿವಾಸಿ ಮಧುಮಿತಾ (20) ಹಾಗೂ ಅವರ ತಮ್ಮ ರಂಜನ್ (18) ಮೃತಪಟ್ಟವರು. ಮಧುಮಿತಾ ಎರಡನೇ ವರ್ಷದ ಬಿಸಿಎ ವ್ಯಾಸಂಗ ಮಾಡುತ್ತಿದ್ದರು. ರಂಜನ್ ಮೊದಲ ವರ್ಷದ ಪದವಿ ವಿದ್ಯಾರ್ಥಿ.

ಮಧುಮಿತಾ ಅವರು ರಜೆ ಮುಗಿಸಿ ಮೊದಲ ದಿನ ಕಾಲೇಜಿಗೆ ಸಹೋದರನ ಜತೆಗೆ ಬೈಕ್‌ನಲ್ಲಿ ತೆರಳುತ್ತಿದ್ದರು. ಮಾರ್ಗಮಧ್ಯದಲ್ಲಿ ಬೈಕ್ ಹಾಗೂ ನೀರಿನ ಟ್ಯಾಂಕರ್ ನಡುವೆ ಅಪಘಾತವಾಗಿದೆ. ಡಿಕ್ಕಿಯ ರಭಸಕ್ಕೆ ಬೈಕ್‌ನಲ್ಲಿದ್ದ ಇಬ್ಬರೂ ಕೆಳಕ್ಕೆ ಬಿದ್ದಿದ್ದರು. ಅವರ ಮೇಲೆ ಟ್ಯಾಂಕರ್‌ನ ಚಕ್ರ ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟರು ಎಂದು ಸಂಚಾರ ಪೊಲೀಸರು ಹೇಳಿದರು.



ಅಪಘಾತದಲ್ಲಿ ಮೃತಪಟ್ಟವರು.

ಅಕ್ಕ ಮತ್ತು ತಮ್ಮ ಹೆಲ್ಮೆಟ್ ಧರಿಸಿರಲಿಲ್ಲ. ನೀರಿನ ಟ್ಯಾಂಕರ್ ಅನ್ನು ರಸ್ತೆ ಮಧ್ಯೆಯೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ. ವಾಟರ್ ಟ್ಯಾಂಕರ್ ಜಪ್ತಿ ಮಾಡಲಾಗಿದೆ ಎಂದು ಎಲೆಕ್ಟ್ರಾನಿಕ್ ಸಿಟಿ ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಚಾಲಕನ ಅತಿ ವೇಗ ಮತ್ತು ಅಜಾಗರೂಕತೆ ಚಾಲನೆ ಅಪಘಾತಕ್ಕೆ ಕಾರಣ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಛತ್ತೀಸಗಢ: 7 ನಕ್ಸಲರ ಹತ್ಯೆ, ಮೂವರು ಯೋಧರಿಗೆ ಗಾಯ

ನಾರಾಯಣಪುರ (ಛತ್ತೀಸಗಢ) (ಪಿಟಿಐ): ಛತ್ತೀಸಗಢದ ನಾರಾಯಣಪುರ ಜಿಲ್ಲೆಯಲ್ಲಿ ಭದ್ರತಾ ಪಡೆಗಳೊಂದಿಗೆ ಶುಕ್ರವಾರ ನಡೆದ ಗುಂಡಿನ ಕಾಳಗದಲ್ಲಿ 7 ನಕ್ಸಲರ ಹತ್ಯೆಯಾಗಿದ್ದು, ಮೂವರು ಯೋಧರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲೆಯ ಅರ್ಬ ಪ್ರದೇಶದ ಬಳಿಯ ಅರಣ್ಯದಲ್ಲಿ ಮಧ್ಯಾಹ್ನ ಕೈಗೊಂಡಿದ್ದ ನಕ್ಸಲ ನಿಗ್ರಹ ಕಾರ್ಯಾಚರಣೆ ವೇಳೆ ಈ ಗುಂಡಿನ ಕಾಳಗ ನಡೆದಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಹತರಾದ ನಕ್ಸಲರ ದೇಹಗಳ ಜೊತೆಗೆ, ಸ್ಥಳದಲ್ಲಿದ್ದ ಆಯುಧಗಳನ್ನು ವಶಕ್ಕೆ ಪಡೆಯಲಾಗಿದೆ. ಹತರಾದ ನಕ್ಸಲರ ಗುರುತು ಪತ್ತೆ ಮಾಡಬೇಕಿದೆ. ಇದರೊಂದಿಗೆ, ಈ ವರ್ಷ ನಡೆದ ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ ಈವರೆಗೆ 125 ನಕ್ಸಲರನ್ನು ಹತ್ಯೆ ಮಾಡಿದಂತಾಗಿದೆ.

ಬಿಬಿಎಂಪಿ: ಎಸ್‌ಡಿಎಂಸಿಯಿಂದ ಅತಿಥಿ ಶಿಕ್ಷಕರ ನೇಮಕ

ಬೆಂಗಳೂರು: ಬಿಬಿಎಂಪಿ ಶಾಲೆ ಮತ್ತು ಕಾಲೇಜುಗಳಿಗೆ ಎಸ್‌ಡಿಎಂಸಿ ಮತ್ತು ಸಿಡಿಸಿ ಮೂಲಕ ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕರನ್ನು ಜೂನ್ 16ರೊಳಗೆ ನಿಯೋಜಿಸಿಕೊಳ್ಳಲು ಸೂಚಿಸಲಾಗಿದೆ.

ಶಿಕ್ಷಣ ಇಲಾಖೆಯಿಂದ ಬೋಧಕ ಹುದ್ದೆಗಳಿಗೆ ಕಾಯಂ ಶಿಕ್ಷಕ, ಉಪನ್ಯಾಸಕರನ್ನು ನೇಮಿಸಿಕೊಳ್ಳಲು ನಿರ್ಧರಿಸಲಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈ ನೇಮಕವಾಗುವವರೆಗೆ ಅಥವಾ 2024–25ನೇ ಶೈಕ್ಷಣಿಕ ಸಾಲಿಗೆ ಬಿಬಿಎಂಪಿ ಶಾಲೆ ಮತ್ತು ಕಾಲೇಜುಗಳಲ್ಲಿರುವ ಎಸ್‌ಡಿಎಂಸಿ ಹಾಗೂ ಕಾಲೇಜು ಅಭಿವೃದ್ಧಿ ಮಂಡಳಿಯಿಂದ (ಸಿಡಿಸಿ) ಅತಿಥಿ ಶಿಕ್ಷಕರು, ಉಪನ್ಯಾಸಕರನ್ನು ನಿಯೋಜಿಸಿಕೊಳ್ಳಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಜೂನ್ 7ರಂದು ಸುತ್ತೋಲೆ ಹೊರಡಿಸಿದ್ದಾರೆ.

ಬಿಬಿಎಂಪಿಯ ಪ್ರಾಥಮಿಕ, ಪ್ರೌಢಶಾಲೆ, ಪದವಿಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಶಿಕ್ಷಣ ಇಲಾಖೆಯ ಮಾರ್ಗಸೂಚಿಯಂತೆ ಅತಿಥಿ ಶಿಕ್ಷಕರು, ಉಪನ್ಯಾಸಕರನ್ನು ನೇಮಿಸಿಕೊಳ್ಳಬೇಕು ಎಂದು ಸೂಚಿಸಿದ್ದಾರೆ. ಪಾಲಿಕೆ ಶಿಶುವಿಹಾರ ಶಾಲೆಗಳಿಗೆ ಅಗತ್ಯವಿರುವ ಶಿಕ್ಷಕರನ್ನು ಶಿಶುವಿಹಾರಗಳಿಗೆ ಹತ್ತಿರವಿರುವ ಪ್ರಾಥಮಿಕ ಶಾಲೆ ಮುಖ್ಯಸ್ಥರು ಎಸ್‌ಡಿಎಂಸಿ ಮೂಲಕ ನೇಮಕ ಮಾಡಿಕೊಳ್ಳಬೇಕು ಎಂದು ಸೂಚಿಸಿದ್ದಾರೆ.

ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆಯ ಅತಿಥಿ ಶಿಕ್ಷಕರಿಗೆ ₹19,366, ಪ್ರೌಢಶಾಲಾ ಅತಿಥಿ ಶಿಕ್ಷಕರಿಗೆ ₹22,840, ಪದವಿಪೂರ್ವ ಕಾಲೇಜು ಅತಿಥಿ ಉಪನ್ಯಾಸಕರಿಗೆ ₹25,697 ಮತ್ತು ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರಿಗೆ ₹27,897, ಸ್ನಾತಕೋತ್ತರ ಪದವಿ ಕಾಲೇಜು ಅತಿಥಿ ಉಪನ್ಯಾಸಕರಿಗೆ ₹30,897 ಹಾಗೂ ಗಣಕಯಂತ್ರ ಅತಿಥಿ ಉಪನ್ಯಾಸಕರಿಗೆ ₹22,053 ಗೌರವ ಸಂಭಾವನೆ ನಿಗದಿ ಮಾಡಲಾಗಿದೆ.

ನಗರದಲ್ಲಿ ಇಂದು

ಸಾಮೂಹಿಕ ಭಜನಾ ಸ್ಪರ್ಧೆ, ಕನ್ನಡ ಗೀತೆ ಗಾಯನ, ಸಾಧಕರಿಗೆ ಪ್ರಶಸ್ತಿ ಪ್ರದಾನ: ಅತಿಥಿಗಳು: ಸಿ. ಜಯಲಕ್ಷ್ಮಿ, ಜಯರಾಮಯ್ಯ, ಮಲ್ಲೇಶಪ್ಪ, ಕಾಕೋಳು ಶೈಲೇಶ್, ರಾಮು, ನಾಗೇಂದ್ರ ಆರ್. ಗುಂಬಳ್ಳಿ, ಆನಂದ್ ಕೆ., ನಾಗರಾಜ್ ಬಸರಕೋಡ್, ದಿವ್ಯ ವಿನಯ್ ಪಿ., ಅಧ್ಯಕ್ಷತೆ: ಎಂ. ಪುಟ್ಟರಾಜು, ಆಯೋಜನೆ: ತೆಲುಗು ಜಂಗಮ ವಿದ್ಯಾಭಿವೃದ್ಧಿ ಟ್ರಸ್ಟ್, ಟ್ರಿನಿಟಿಸ್ ಸಂಗೀತ ಮತ್ತು ಕಲೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಸಾಧಕಿಯರ ಸಂಗಮ: ಸನ್ಮಾನಿತರು: ದೀಪಾ ಅಜಯ್, 'ಮಾತೃತ್ವದ ಸಾರ್ಥಕತೆಯ ವಿವಿಧ ಮುಖಗಳು' ಕುರಿತು ಉಪನ್ಯಾಸ: ನೇಮಿಚಂದ್ರ, 'ನೃತ್ಯದ ಮೂಲಕ ಸಾಹಿತ್ಯ ಮತ್ತು ಲಲಿತಕಲೆಗಳ ಅಭಿವ್ಯಕ್ತಿ–ಒಂದು ಪ್ರಾತ್ಯಕ್ಷಿಕೆ' ಉಪನ್ಯಾಸ: ಕೆ.ಎಸ್. ಪವಿತ್ರಾ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಲೆಕ್ಕಾಧಿಕಾರಿಗಳ ಸಂಘದ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10.30

ಜಯಲಕ್ಷಮ್ಮ, ಬಾಪು ರಾಮಣ್ಣ ದತ್ತಿ: 'ರನ್ನ ಕವಿಯ ಗದಾಯುದ್ಧಂ' ಕಾವ್ಯದ ಹಲವು ಸ್ವಾರಸ್ಯಕರ ಸಂಗತಿಗಳ ಕುರಿತು ಉಪನ್ಯಾಸ: ಎ.ವಿ. ಪ್ರಸನ್ನ, ಅಧ್ಯಕ್ಷತೆ: ಜಿ. ಅಶ್ವತ್ಥನಾರಾಯಣ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ. ಸೀ.ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಅದಿತಿ ಗೋಪಾಲ್, ಅತಿಥಿಗಳು: ಶುಭಾರಾಣಿ ಬೋಳಾರ್, ಎಂ.ಆರ್. ಸತ್ಯನಾರಾಯಣ, ಎಲ್ ಎಸ್. ಶಮಾ ಸುಂದರ ಶರ್ಮಾ, ಆಯೋಜನೆ: ಚಿತ್ರನಾಟ್ಯ ಫೌಂಡೇಷನ್, ಸ್ಥಳ: ಕೆಇಎ ಪ್ರಭಾತ್ ರಂಗಮಂದಿರ, 8ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಬಸವೇಶ್ವರನಗರ, ಸಂಜೆ 6



ಅದಿತಿ ಗೋಪಾಲ್

ಸಂಗೀತ ಕಛೇರಿ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ: ಅತಿಥಿಗಳು: ರಾಘವೇಂದ್ರ ಹೆಬ್ಬಾರ್ ಐರೋಡಿ, 'ಗೋವಿಂದ ಲಕ್ಷ್ಮಿ ಪುರಸ್ಕಾರ' ಪುರಸ್ಕೃತರು: ಬಿ.ಆರ್. ಶಿವರಾಮಯ್ಯ, 'ಶ್ಯಾಮಲ ಸ್ಮೃತಿ ಸಮ್ಮಾನ' ಪುರಸ್ಕೃತರು: ಸುಧಾಂಶು ಕುಲಕರ್ಣಿ, ಗಾಯನ: ಗೋವಿಂದ್ ವಿಠಲ್ ಭಾವೆ, ಲಕ್ಷ್ಮೀ ಜಿ. ಭಾವೆ, ಶ್ಯಾಮಲಾ ಜಿ. ಭಾವೆ, ಭಕ್ತಿ ಸಂಗೀತ: ಸ್ಮೃತಿ ಎಸ್. ಭಟ್, ತಬಲಾ: ಸತೀಶ್ ಹಂಪಿಹೊಳಿ, ಹಾರ್ಮೋನಿಯಂ: ಶಿವರಾಜ್ ಜಿ. ಮಹಾಂತ, ಆಯೋಜನೆ: ಸರಸ್ವತೀ ಸಂಗೀತ ವಿದ್ಯಾಲಯ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸ್ಮೃತಿ ಶ್ರೀಧರ್, ಆಯೋಜನೆ: ನಟನಂ ಇನ್‌ಸ್ಟಿಟ್ಯೂಟ್ ಆಫ್ ಡಾನ್ಸ್, ಸ್ಥಳ: ಸತ್ಯ ಸಾಯಿ ಸಂಸ್ಕೃತ ಸದನ, ನೆಕ್ಸಸ್ ಫೋರಂ ಮಾಲ್ ಪಕ್ಕ, ಕೋರಮಂಗಲ, ಸಂಜೆ 5.30

ವೀರಲೋಕ ಬುಕ್ಸ್‌ನ ಎರಡನೇ ವಾರ್ಷಿಕೋತ್ಸವ, ಐದು ಪುಸ್ತಕ ಬಿಡುಗಡೆ: ಆಯೋಜನೆ: ವೀರಲೋಕ ಪ್ರತಿಷ್ಠಾನ, ಸ್ಥಳ: ರಮಣಶ್ರೀ ಹೋಟೆಲ್, 5ನೇ ಮಹಡಿ, ರಿಚ್ಮಂಡ್ ವೃತ್ತ, ಸಂಜೆ 6

ಕರ್ನಾಟಕ ಸಂಗೀತ ಕಛೇರಿ: ಗಾಯನ: ಆರ್. ಶೇಷಪ್ರಸಾದ್, ಪಿಟೀಲು: ಪ್ರಾದೇಶ್ ಆಚಾರ್ಯ ಸಿ.ಆರ್., ಮೃದಂಗ: ಫಣೀಂದ್ರ ಭಾಸ್ಕರ್, ಮೋರ್ಸಿಂಗ್: ಲಿಖಿತ್, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ, ಸ್ಥಳ: ಶ್ರೀರಾಮಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.15

'ರಂಗ ರಂಗೋಲಿ' ನಾಟಕೋತ್ಸವ: 'ಮಾಯಾಬಜಾರ್' ನಾಟಕ ಪ್ರದರ್ಶನ: ಪ್ರಸ್ತುತಿ: ಡ್ರಾಮಾಟ್ರಿಕ್ಸ್ ತಂಡ, ರಂಗರೂಪ, ನಿರ್ದೇಶನ: ಎನ್.ಸಿ. ಮಹೇಶ, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವೈಯಾಲಿಕಾವಲ್, ಸಂಜೆ 6.30

'ನಾಯಿ ಕಳೆದಿದೆ' ನಾಟಕ ಪ್ರದರ್ಶನ: ಆಯೋಜನೆ: ನಮ್ದೆ ನಟನೆ, ರಚನೆ,ವಿನ್ಯಾಸ ಮತ್ತು ನಿರ್ದೇಶನ: ರಾಜೇಂದ್ರ ಕಾರಂತ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ. nagaradalli_indu@prajavani.co.in

ಕರ್ತವ್ಯ ಪ್ರಜ್ಞೆ ತೋರಲು ಸೂಚನೆ

ಬೆಂಗಳೂರು: ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಠಾಣೆಗಳ ಸಿಬ್ಬಂದಿಗೆ ಇರುವ ಮಾಹಿತಿ, ಅರಿವು ಹಾಗೂ ಕರ್ತವ್ಯ ಪ್ರಜ್ಞೆ ಇನ್‌ಸ್ಪೆಕ್ಟರ್ ಹಾಗೂ ಅಧಿಕಾರಿಗಳಲ್ಲಿ ಕಾಣಿಸುತ್ತಿಲ್ಲ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಬೇಸರ ವ್ಯಕ್ತಪಡಿಸಿದರು.

ಥಣಿಸಂದ್ರದ ನಗರ ಸಶಸ್ತ್ರ ಮೀಸಲು ಪಡೆ ಕವಾಯತು ಮೈದಾನದಲ್ಲಿ ಶುಕ್ರವಾರ ನಡೆದ ಕವಾಯತಿನಲ್ಲಿ ಅವರು ಮಾತನಾಡಿದರು. 'ನಗರ ಪೊಲೀಸರು ಸರಿಯಾದ ಕಮಾಂಡ್ ಮತ್ತು ಡ್ರಿಲ್‌ಗಳನ್ನು ಸರಿಯಾಗಿ ನೀಡುತ್ತಿಲ್ಲ. ಸಿಬ್ಬಂದಿಗಳ ಡ್ರಿಲ್‌ನಲ್ಲಿ ಕುಂಠಿತ ಕಾಣುತ್ತಿದೆ. ಸರಿಯಾದ ಕಮಾಂಡ್ ಯಾವ ರೀತಿ ನೀಡಬೇಕು ಎನ್ನುವುದು ಗೊತ್ತಿಲ್ಲ. ಇದನ್ನು ಸರಿಪಡಿಸಿಕೊಳ್ಳಬೇಕು' ಎಂದು ಎಚ್ಚರಿಸಿದರು.


ಜುಲೈ 1ರಿಂದ ಹೊಸ ಕಾನೂನು ಅನುಷ್ಠಾನಗೊಳ್ಳುತ್ತಿದ್ದು ಈ ಬಗ್ಗೆ ಎಲ್ಲ ಸಿಬ್ಬಂದಿ ಸಂಪೂರ್ಣ ಮಾಹಿತಿ ಪಡೆದುಕೊಂಡಿರಬೇಕು. ಈ ಹೊಸ ಕಾನೂನು ಪ್ರಕಾರವೇ ಎಫ್ಐಆರ್ ದಾಖಲಿಸಿ, ತನಿಖೆ ಹಾಗೂ ದೋಷಾರೋಪ ಪಟ್ಟಿ ಸಲ್ಲಿಸಬೇಕು ಎಂದು ಸೂಚಿಸಿದರು.

ವಿಧಾನಪರಿಷತ್ ಚುನಾವಣೆ: ಮೂರಕ್ಕೆ ಜಿಗಿದ ಕಾಂಗ್ರೆಸ್ • ಕಮಲ ಕಲಿಗಳ ದಶಕಗಳ ಆಧಿಪತ್ಯಕ್ಕೆ ಪೆಟ್ಟು

ಬಿಜೆಪಿಗೆ 2 ಸ್ಥಾನ ನಷ್ಟ: 'ಕೈ'ಗೆ ಎರಡು ಲಾಭ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಎಂಟು ಸ್ಥಾನಗಳ ಹಿನ್ನಡೆ ಅನುಭವಿಸಿದ್ದ ಬಿಜೆಪಿ, ಪದವೀಧರ ಹಾಗೂ ಶಿಕ್ಷಕರ ಆರು ಕ್ಷೇತ್ರಗಳಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲೂ ತಾನು ಅಧಿಪತ್ಯ ಹೊಂದಿದ್ದ ಎರಡು ಭದ್ರಕೋಟೆಗಳನ್ನು ಕಳೆದುಕೊಂಡಿದೆ.



ಪ್ರತಿನಿಧಿಸಿದ್ದ ಒಂದು ಸ್ಥಾನವನ್ನು ಉಳಿಸಿಕೊಂಡ ಕಾಂಗ್ರೆಸ್, ಬಿಜೆಪಿಯ ಮತಬ್ಯಾಂಕ್ ಎಂದೇ ಪರಿಭಾವಿಸಲಾದ ಮಧ್ಯಮ ವರ್ಗ ಮತ್ತು ಶಿಕ್ಷಿತ ಮತದಾರರನ್ನೇ ಹೊಂದಿರುವ ಎರಡು ಕ್ಷೇತ್ರಗಳನ್ನು ಆ ಪಕ್ಷದಿಂದ ಕಿತ್ತುಕೊಂಡಿದೆ. ಲೋಕಸಭೆಯಲ್ಲಿ 'ಕೈ' ಹಿಡಿದಿದ್ದ ಕಲ್ಯಾಣ ಕರ್ನಾಟಕ ವಿಧಾನ ಪರಿಷತ್ ಚುನಾವಣೆಯಲ್ಲೂ ಬೆಂಬಲಕ್ಕೆ ಬಂದಿದೆ. ಜೆಡಿಎಸ್ ಹಿಂದೆ ಗೆದ್ದಿದ್ದ ಎರಡು ಕ್ಷೇತ್ರಗಳನ್ನು ಉಳಿಸಿಕೊಳ್ಳುವಲ್ಲಿ ಸಫಲವಾಗಿದೆ.

ಬೆಂಗಳೂರು ಪದವೀಧರ ಕ್ಷೇತ್ರ 36 ವರ್ಷಗಳಿಂದ ಹಾಗೂ ಆಗ್ನೇಯ ಶಿಕ್ಷಕರ ಕ್ಷೇತ್ರ 18 ವರ್ಷಗಳಿಂದ ಬಿಜೆಪಿ ಹಿಡಿತದಲ್ಲಿತ್ತು. ಹಿಂದೆಲ್ಲ ಸಾಂಪ್ರದಾಯಿಕ ಎದುರಾಳಿಯಾಗುತ್ತಿದ್ದ ಜೆಡಿಎಸ್ ಜತೆ ಈ ಬಾರಿ ಮೈತ್ರಿ ಕುದುರಿಸಿಕೊಂಡರೂ ಮೂರರಲ್ಲಿ ಎರಡೂ ಕ್ಷೇತ್ರಗಳು ಕೈತಪ್ಪಿವೆ.

'ಕೈ' ಹಿಡಿದ 'ಗೌಡರ' ಕೋಟೆ: ಬೆಂಗಳೂರು ಪದವೀಧರ ಕ್ಷೇತ್ರವನ್ನು ಸತತ ಐದು ಅವಧಿಗೆ ಪ್ರತಿನಿಧಿಸಿದ್ದ ಬಿಜೆಪಿಯ ರಾಮಚಂದ್ರೇಗೌಡ ಅವರು 2018ರ ಚುನಾವಣೆಯಲ್ಲಿ ನಿವೃತ್ತಿ ಘೋಷಿಸಿದ್ದರು. ರಾಮಚಂದ್ರೇಗೌಡರ ಎದುರಾಳಿಯಾಗಿದ್ದ ಅ.ದೇವೇಗೌಡರನ್ನು ಸೆಳೆದಿದ್ದ ಬಿಜೆಪಿ, 2018ರ ಚುನಾವಣೆಯಲ್ಲಿ ಕಣಕ್ಕಿಳಿಸಿತ್ತು. ಆಗಲೂ ಗೆಲುವು ಸಾಧಿಸುವುದರೊಂದಿಗೆ ಬಿಜೆಪಿಯ ಆಧಿಪತ್ಯ ಕ್ಷೇತ್ರದಲ್ಲಿ ಮುಂದುವರಿದಿತ್ತು. ಬಿಜೆಪಿ ಕೋಟೆಯನ್ನು ಮೂರನೇ ಪ್ರಯತ್ನದಲ್ಲಿ ಮುರಿದು ಒಳ ನುಗ್ಗಿರುವ ಕಾಂಗ್ರೆಸ್‌ನ ರಾಮೋಜಿ ಗೌಡ ಈ ಬಾರಿ ಯಶ ಕಂಡಿದ್ದಾರೆ.

18 ವರ್ಷಗಳ ಬಳಿಕ ನಾರಾಯಣಸ್ವಾಮಿಗೆ ಸೋಲು: ಆಗ್ನೇಯ ಶಿಕ್ಷಕರ ಕ್ಷೇತ್ರವನ್ನು 18 ವರ್ಷಗಳಿಂದ ಪ್ರತಿನಿಧಿಸಿದ್ದ ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ಮೊದಲ ಬಾರಿ ಸೋಲು ಕಂಡಿದ್ದಾರೆ. ಹೆಬ್ಬಾಳ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಗೆದ್ದಿದ್ದ ನಾರಾಯಣಸ್ವಾಮಿ, ಮೇಲ್ಮನೆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ಈ ಅಲ್ಪಾವಧಿಯಲ್ಲಿ ಅಂದು ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ರಮೇಶಬಾಬು ಗೆದ್ದಿದ್ದರು. ನಾರಾಯಣಸ್ವಾಮಿ ಈ ಬಾರಿ ಬಿಜೆಪಿ– ಜೆಡಿಎಸ್ ಮೈತ್ರಿ ಅಭ್ಯರ್ಥಿ ಆಗಿದ್ದರೂ, ಕಾಂಗ್ರೆಸ್‌ನ ಡಿ.ಟಿ ಶ್ರೀನಿವಾಸ್ ಬಿಜೆಪಿ ಕೋಟೆಯಲ್ಲಿ ವಿಜಯ ಪತಾಕೆ ಹಾರಿಸಿದ್ದಾರೆ.

ಬಿಜೆಪಿ ಆಧಿಪತ್ಯ ಮುಂದುವರಿಕೆ: ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಬಿಜೆಪಿ ತನ್ನ ಮೂರೂವರೆಗೆ ದಶಕಗಳ ಆಧಿಪತ್ಯ ಮುಂದುವರಿಸಿದೆ. 1988–2018ರವರೆಗೂ ಬಿಜೆಪಿಯ ಡಿ.ಎಚ್. ಶಂಕರಮೂರ್ತಿ ನಿರಂತರ ಗೆಲುವು ದಾಖಲಿಸಿದ್ದರು. 2018ರಲ್ಲಿ ಆಯನೂರು ಮಂಜುನಾಥ್ ಬಿಜೆಪಿಯಿಂದ ಗೆಲುವು ಕಂಡಿದ್ದರು. ವಿಧಾನ ಪರಿಷತ್ ಸ್ಥಾನಕ್ಕೆ ಆಯನೂರು ರಾಜೀನಾಮೆ ನೀಡಿದ ನಂತರ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದರು. ಬಿಜೆಪಿ ಅಭ್ಯರ್ಥಿ ಡಾ.ಧನಂಜಯ ಸರ್ಜಿ ಗೆಲುವು ಸಾಧಿಸುವ ಮೂಲಕ ಕ್ಷೇತ್ರ ಬಿಜೆಪಿ 'ಭದ್ರಕೋಟೆ' ಎನ್ನುವುದನ್ನು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ.

ಕ್ಷೇತ್ರ ಉಳಿಸಿಕೊಂಡ ಕಾಂಗ್ರೆಸ್: ಈಶಾನ್ಯ ಪದವೀಧರ ಕ್ಷೇತ್ರವನ್ನು ಉಳಿಸಿಕೊಳ್ಳುವಲ್ಲಿ ಕಾಂಗ್ರೆಸ್ ಯಶ ಕಂಡಿದೆ. ಬಿಜೆಪಿಯ ಭದ್ರಕೋಟೆಯಾಗಿದ್ದ ಈ ಕ್ಷೇತ್ರ 2018ರಲ್ಲಿ ಕಾಂಗ್ರೆಸ್ ತೆಕ್ಕೆಗೆ ಜಾರಿತ್ತು. ಕಾಂಗ್ರೆಸ್‌ನ ಚಂದ್ರಶೇಖರ ಪಾಟೀಲ ಎರಡನೇ ಬಾರಿ ಗೆಲುವು ಕಂಡಿದ್ದಾರೆ. ಬಿಜೆಪಿಯ ಅಮರನಾಥ ಪಾಟೀಲ ಸೋಲು ಅನುಭವಿಸಿದ್ದಾರೆ.

ಫಲಿಸದ ಸಿದ್ದರಾಮಯ್ಯ ತಂತ್ರ

ತವರು ಜಿಲ್ಲೆಯ ವ್ಯಾಪ್ತಿಯ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಗೆಲುವು ಸಾಧಿಸಲು ವರ್ಷದ ಹಿಂದೆಯೇ ಯೋಜನೆ ಸಿದ್ಧಪಡಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸತತ ನಾಲ್ಕು ಬಾರಿ ಜೆಡಿಎಸ್‌ನಿಂದ ಗೆಲುವು ಕಂಡಿದ್ದ ಮರಿತಿಬ್ಬೇಗೌಡ ಅವರನ್ನು ಸೆಳೆದು ಕಾಂಗ್ರೆಸ್‌ನಿಂದ ಕಣಕ್ಕೆ ಇಳಿಸಿದ್ದರು.

ಸಿದ್ದರಾಮಯ್ಯ ತಂತ್ರಕ್ಕೆ ಪ್ರತಿತಂತ್ರ ಹೂಡಿದ್ದ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಬಿಜೆಪಿ ಜತೆಗಿನ ಮೈತ್ರಿಯ ಬಲದಿಂದ ರಿಯಲ್ ಎಸ್ಟೇಟ್ ಉದ್ಯಮಿ ಕೆ.ವಿವೇಕಾನಂದ ಅವರನ್ನು ಕಣಕ್ಕೆ ಇಳಿಸಿದ್ದರು. ಅಂತಿಮವಾಗಿ ವಿವೇಕಾನಂದ ಗೆಲ್ಲುವ ಮೂಲಕ ಜೆಡಿಎಸ್ ಕ್ಷೇತ್ರವನ್ನು ಮತ್ತೆ ಗಟ್ಟಿಗೊಳಿಸಿದ್ದಾರೆ.

1988ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ ಮೊದಲ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಫೆರ್ನಾಂಡಿಸ್ ಗೆಲುವು ಸಾಧಿಸಿದ್ದರು. ಆ ನಂತರ ಈ ಕ್ಷೇತ್ರ ಬಿಜೆಪಿ ತೆಕ್ಕೆಗೆ ಜಾರಿತ್ತು. ಬಾಲಕೃಷ್ಣ ಭಟ್ ಮತ್ತು ಕ್ಯಾ. ಗಣೇಶ್ ಕಾರ್ಣಿಕ್ ಕ್ರಮವಾಗಿ ತಲಾ ಎರಡು ಬಾರಿ ಗೆಲುವು ಸಾಧಿಸಿದ್ದರು. ಕಳೆದ ಚುನಾವಣೆಯಲ್ಲಿ ಬಿಜೆಪಿಯ ಕ್ಯಾ.ಗಣೇಶ್ ಕಾರ್ಣಿಕ್ ಅವರನ್ನು ಮಣಿಸಿ, ಜೆಡಿಎಸ್‌ನ ಎಸ್.ಎಲ್. ಬೋಜೇಗೌಡ ಮೊದಲ ಬಾರಿ ವಿಜಯ ಸಾಧಿಸಿದ್ದರು. ಈ ಬಾರಿ ಬಿಜೆಪಿ ಬಲವೂ ಸೇರಿ ಜೆಡಿಎಸ್ ಭರ್ಜರಿ ಗೆಲುವು ದಾಖಲಿಸಿದೆ. ಆ ಮೂಲಕ ಜೆಡಿಎಸ್ ತನ್ನ ಎರಡೂ ಕ್ಷೇತ್ರ ಉಳಿಸಿಕೊಂಡಿದೆ.

ತಿರಸ್ಕೃತವಾದ ಮತಗಳ ಸಂಖ್ಯೆ 28,684!

ವಿದ್ಯಾವಂತರೇ ಮತದಾರರಾಗಿರುವ ಆರು ಕ್ಷೇತ್ರಗಳಲ್ಲಿ 28,684 ಮತಗಳು ತಿರಸ್ಕೃತವಾಗಿವೆ. ಶಿಕ್ಷಕರ ಕ್ಷೇತ್ರದಲ್ಲಿ ಪ್ರೌಢಶಾಲೆ ಹಾಗೂ ಅದಕ್ಕಿಂತ ಮೇಲ್ಪಟ್ಟ ವಿದ್ಯಾಸಂಸ್ಥೆಗಳ ಶಿಕ್ಷಕರು ಮತದಾರರು. ಪದವೀಧರರ ಕ್ಷೇತ್ರದಲ್ಲಿ ಯಾವುದೇ ವಿಷಯದಲ್ಲಿ ಪದವಿ ಪಡೆದವರು ಮತದಾರಾಗಿರುತ್ತಾರೆ. ಇಂತಹ ಸುಶಿಕ್ಷಿತ ಮತದಾರರು ಕ್ರಮಬದ್ಧವಾಗಿ ಮತಚಲಾಯಿಸಲು ವಿಫಲರಾಗಿರುವುದು ಮತದಾನ ಪ್ರಕ್ರಿಯೆಯನ್ನೇ ಅಣಕಿಸುವಂತಿದೆ.

ಈ ತಿರಸ್ಕೃತ ಮತಗಳು ಕ್ರಮ ಬದ್ಧವಾಗಿದ್ದಿದ್ದರೆ ಕೆಲ ಕ್ಷೇತ್ರಗಳ ಫಲಿತಾಂಶಗಳಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇತ್ತು. ಈಶಾನ್ಯ ಪದವೀಧರ ಕ್ಷೇತ್ರದಲ್ಲಿ ಗೆದ್ದ ಕಾಂಗ್ರೆಸ್ ಅಭ್ಯರ್ಥಿ ಚಂದ್ರಶೇಖರ ಪಾಟೀಲ 39,496 ಮತ, ಸೋತ ಅಭ್ಯರ್ಥಿ ಬಿಜೆಪಿಯ ಅಮರನಾಥ ಪಾಟೀಲ 35,050 ಮತಗಳನ್ನು ಪಡೆದಿದ್ದಾರೆ. ತಿರಸ್ಕೃತಗೊಂಡ 12,513 ಮತಗಳು ಸರಿಯಾಗಿ ಚಲಾವಣೆಯಾಗಿದ್ದರೆ ಫಲಿತಾಂಶ ಭಿನ್ನವಾಗುವ ಸಾಧ್ಯತೆ ಇತ್ತು.

ಆಗ್ನೇಯ ಶಿಕ್ಷಕರ ಕ್ಷೇತ್ರ



ಗೆದ್ದ ಅಭ್ಯರ್ಥಿ: ಡಿ.ಟಿ. ಶ್ರೀನಿವಾಸ್ (ಕಾಂಗ್ರೆಸ್)
ಪಡೆದ ಮತ: **8,909**
ಸಮೀಪದ ಸ್ಪರ್ಧಿ: ವೈ.ಎ. ನಾರಾಯಣಸ್ವಾಮಿ (ಬಿಜೆಪಿ)
ಪಡೆದ ಮತ: **7142**

ನೈರುತ್ಯ ಪದವೀಧರ ಕ್ಷೇತ್ರ



ಗೆದ್ದವರು: ಡಾ.ಧನಂಜಯ ಸರ್ಜಿ (ಬಿಜೆಪಿ)
ಪಡೆದ ಮತ: **37,627**
ಸಮೀಪದ ಸ್ಪರ್ಧಿ: ಆಯನೂರು ಮಂಜುನಾಥ್ (ಕಾಂಗ್ರೆಸ್)
ಪಡೆದ ಮತ: **13,516**

ನೈರುತ್ಯ ಶಿಕ್ಷಕರ ಕ್ಷೇತ್ರ



ಗೆದ್ದವರು: ಎಸ್.ಎಲ್. ಬೋಜೇಗೌಡ (ಜೆಡಿಎಸ್)
ಪಡೆದ ಮತ: **9,829**
ಸಮೀಪದ ಸ್ಪರ್ಧಿ: ಕೆ.ಕೆ. ಮಂಜುನಾಥ್ ಕುಮಾರ್ (ಕಾಂಗ್ರೆಸ್)
ಪಡೆದ ಮತ: **4,562**

ಬೆಂಗಳೂರು ಪದವೀಧರ ಕ್ಷೇತ್ರ



ಗೆದ್ದ ಅಭ್ಯರ್ಥಿ: ರಾಮೋಜಿ ಗೌಡ (ಕಾಂಗ್ರೆಸ್)
ಪಡೆದ ಮತ: **36,729**
ಸಮೀಪದ ಸ್ಪರ್ಧಿ: ಅ.ದೇವೇಗೌಡ (ಬಿಜೆಪಿ)
ಪಡೆದ ಮತ: **24,888**

ದಕ್ಷಿಣ ಶಿಕ್ಷಕರ ಕ್ಷೇತ್ರ



ಗೆದ್ದ ಅಭ್ಯರ್ಥಿ: ಕೆ. ವಿವೇಕಾನಂದ (ಜೆಡಿಎಸ್)
ಪಡೆದ ಮತ: **10,823**
ಸಮೀಪದ ಸ್ಪರ್ಧಿ: ಮರಿತಿಬ್ಬೇಗೌಡ (ಕಾಂಗ್ರೆಸ್)
ಪಡೆದ ಮತ: **6,201**

ಈಶಾನ್ಯ ಪದವೀಧರ ಕ್ಷೇತ್ರ



ಗೆದ್ದ ಅಭ್ಯರ್ಥಿ: ಚಂದ್ರಶೇಖರ ಪಾಟೀಲ (ಕಾಂಗ್ರೆಸ್)
ಪಡೆದ ಮತ: **39,496**
ಸಮೀಪದ ಸ್ಪರ್ಧಿ: ಅಮರನಾಥ ಪಾಟೀಲ (ಬಿಜೆಪಿ)
ಪಡೆದ ಮತ: **35,050**

ಸುದ್ದಿ 2 ನಿಮಿಷ

ನಾಗೇಂದ್ರ ರಾಜೀನಾಮೆ ಅಂಗೀಕಾರ

ಬೆಂಗಳೂರು: ಬಿ. ನಾಗೇಂದ್ರ ಅವರು ಪರಿಶಿಷ್ಟ ಪಂಗಡಗಳ ಕಲ್ಯಾಣ ಹಾಗೂ ಕ್ರೀಡೆ ಮತ್ತು ಯುವ ಸಬಲೀಕರಣ ಖಾತೆ ಸಚಿವ ಸ್ಥಾನಕ್ಕೆ ನೀಡಿದ್ದ ರಾಜೀನಾಮೆಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅಂಗೀಕರಿಸಿದ್ದಾರೆ.

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವ ಹಗರಣಕ್ಕೆ ಸಂಬಂಧಿಸಿದಂತೆ ನಾಗೇಂದ್ರ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗುರುವಾರ ರಾಜೀನಾಮೆ ಪತ್ರ ಸಲ್ಲಿಸಿದ್ದರು. ಮುಖ್ಯಮಂತ್ರಿಯವರು ರಾಜೀನಾಮೆ ಪತ್ರವನ್ನು ಅಂಗೀಕರಿಸುವಂತೆ ರಾಜ್ಯಪಾಲರಿಗೆ ಶಿಫಾರಸು ಮಾಡಿದ್ದರು. ಸಚಿವರ ರಾಜೀನಾಮೆಯನ್ನು ರಾಜ್ಯಪಾಲರು ಶುಕ್ರವಾರ ಅಂಗೀಕರಿಸಿದರು.

ವಾಲ್ಮೀಕಿ ನಾಯಕ ಸಮುದಾಯದವರಾದ ನಾಗೇಂದ್ರ ಬಳ್ಳಾರಿ ವಿಧಾನಸಭಾ ಕ್ಷೇತ್ರದ ಶಾಸಕರು. ಒಂದು ಅವಧಿಗೆ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದಿದ್ದ ನಾಗೇಂದ್ರ, ನಂತರ ಬಳ್ಳಾರಿ ಕ್ಷೇತ್ರದಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಗೆದ್ದಿದ್ದರು. ಬಳಿಕ ಕಾಂಗ್ರೆಸ್ ಸೇರಿದ್ದ ಅವರು, ಮೂರನೇ ಅವಧಿಗೆ ಬಳ್ಳಾರಿ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.



ಸಿಬಿಐಗೆ ಹಸ್ತಾಂತರವಾಗದ ಕಡತ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಸಿಬಿಐ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿಕೊಂಡಿದ್ದರೂ ಇನ್ನೂ ತನಿಖೆ ಆರಂಭಿಸಿಲ್ಲ.

ಈ ಮೊದಲು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣವು ತೀವ್ರ ಸ್ವರೂಪ ಪಡೆಯುತ್ತಿದ್ದಂತೆಯೇ ರಾಜ್ಯ ಸರ್ಕಾರ ಎಸ್‌ಐಟಿ ರಚಿಸಿ ಆದೇಶಿಸಿತ್ತು. ಅದಾದ ಮೇಲೆ ಹಣ ಅಕ್ರಮ ವರ್ಗಾವಣೆಗೆ ಸಂಬಂಧಪಟ್ಟಂತೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಬೆಂಗಳೂರು ಪೂರ್ವ ವಲಯದ ಡೆಪ್ಯುಟಿ ಜನರಲ್ ಮ್ಯಾನೇಜರ್ (ಡಿಜಿಎಂ) ಮಹೇಶ್ ಜೆ. ಅವರ ದೂರು ಆಧರಿಸಿ ಸಿಬಿಐ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಆದರೆ ಸಿಬಿಐ ತನಿಖೆ ಆರಂಭಿಸಿಲ್ಲ ಎಂದು ಮೂಲಗಳು ಹೇಳಿವೆ.

'ಇದುವರೆಗೂ ನಡೆಸಿದ ತನಿಖೆ ಪ್ರಗತಿಯ ಕಡತಗಳು ನಮ್ಮಲ್ಲಿಯೇ ಇವೆ. ಸಿಬಿಐ ಅಧಿಕಾರಿಗಳು ಕೇಳಿದರೆ ಕಡತ ಹಸ್ತಾಂತರಿಸಲಾಗುವುದು. ಎಸ್‌ಐಟಿಯೇ ತನಿಖೆ ಮುಂದುವರಿಸಿದೆ. ಕಸ್ಟಡಿಗೆ ಪಡೆದಿರುವ ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಜೆ.ಜೆ.ಪದ್ಮನಾಭ್, ಲೆಕ್ಕಾಧಿಕಾರಿಯಾಗಿದ್ದ ಪರುಶುರಾಮ್ ಜಿ. ದುರ್ಗಣ್ಣನವರ ಅವರನ್ನು ಹೆಚ್ಚಿನ ವಿಚಾರಣೆಗೆ ಮತ್ತೆ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ಸಿಸಿ ಟಿವಿ ಕ್ಯಾಮೆರಾ ದೃಶ್ಯಾವಳಿ ತೋರಿಸಿ ಇಬ್ಬರನ್ನೂ ಶುಕ್ರವಾರ ಸಹ ವಿಚಾರಣೆ ನಡೆಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಸರ್ಕಾರಿ ಆಸ್ಪತ್ರೆ ಬಳಿ ನವಜಾತ ಶಿಶುವಿನ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಹಿರಿಯೂರು: ಇಲ್ಲಿನ ಸರ್ಕಾರಿ ಆಸ್ಪತ್ರೆಯ ಸ್ನಾನದ ಕೊಠಡಿಯಲ್ಲಿ ಹೆರಿಗೆ ಮಾಡಿಸಿ, ನವಜಾತ ಶಿಶುವನ್ನು ಹತ್ಯೆಗೈದು ಕಿಟಕಿಯಿಂದ ಹೊರಗೆ ಎಸೆದು ಪರಾರಿಯಾಗಿರುವ ಘಟನೆ ಗುರುವಾರ ರಾತ್ರಿ ನಡೆದಿದೆ.

ಗುರುವಾರ ಸಂಜೆ 7 ಗಂಟೆ ಸಮಯದಲ್ಲಿ ಒಬ್ಬ ಪುರುಷ ಹಾಗೂ ಮೂವರು ಮಹಿಳೆಯರು (ಗರ್ಭಿಣಿ ಸೇರಿ) ಆಸ್ಪತ್ರೆಯ ಒಳಗೆ ಪ್ರವೇಶಿಸಿದ್ದಾರೆ. ಆ ಸಮಯದಲ್ಲಿ ಜಿಟಿಜಿಟಿ ಮಳೆ ಬರುತ್ತಿದ್ದ ಕಾರಣಕ್ಕೆ ತುರ್ತು ಚಿಕಿತ್ಸಾ ಕೊಠಡಿ ಹೊರತುಪಡಿಸಿದರೆ ಬೇರೆಡೆ ರೋಗಿಗಳು ಹಾಗೂ ಆಸ್ಪತ್ರೆ ಸಿಬ್ಬಂದಿ ಇರಲಿಲ್ಲ.

ಆಸ್ಪತ್ರೆಯಲ್ಲಿ ಜನರು ವಿರಳವಾಗಿರುವುದನ್ನು ಗಮನಿಸಿದ ಅವರು, ವಾರ್ಡ್‌ನೊಳಗೆ ತೆರಳಿ ಅಲ್ಲಿನ ಸ್ನಾನದ ಕೊಠಡಿಯಲ್ಲೇ ಹೆರಿಗೆ ಮಾಡಿಸಿ ನವಜಾತ ಶಿಶುವನ್ನು ಹತ್ಯೆ ಮಾಡಿ ಕಿಟಕಿಯಿಂದ ಹೊರಗೆ ಎಸೆದು ಅಲ್ಲಿಂದ ಪರಾರಿಯಾಗಿದ್ದಾರೆ.

ಸೋಲು: ವರದಿ ಕೇಳಿದ ರಾಹುಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವರ ಕುಟುಂಬದವರಿಗೆ ಟಿಕೆಟ್ ನೀಡಿದ್ದರೂ, ಸಚಿವರಿಗೆ ಹೊಣೆ ವಹಿಸಿದ್ದರೂ ಅನೇಕ ಕ್ಷೇತ್ರಗಳಲ್ಲಿ ಸೋಲಲು ಏನು ಕಾರಣ ಎಂಬ ಬಗ್ಗೆ ವರದಿ ನೀಡಿ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಕೆಪಿಸಿಸಿ ಪ್ರಮುಖರಿಗೆ ಸೂಚಿಸಿದರು.

ನ್ಯಾಯಾಲಯಕ್ಕೆ ಹಾಜರಾಗಲು ನಗರಕ್ಕೆ ಬಂದಿದ್ದ ಅವರು, ಕೆಪಿಸಿಸಿ ಕಚೇರಿಯಲ್ಲಿ ಲೋಕಸಭೆ ಚುನಾವಣೆಯಲ್ಲಿ ಗೆದ್ದವರು ಮತ್ತು ಪರಾಜಿತರಾಗಿರುವ ಕಾಂಗ್ರೆಸ್ ಅಭ್ಯರ್ಥಿಗಳ ಸಭೆ ನಡೆಸಿದರು. ಬಳಿಕ ಸಚಿವರ ಜತೆ ಪ್ರತ್ಯೇಕ ಸಭೆ ನಡೆಸಿ, ಚುನಾವಣಾ ಫಲಿತಾಂಶದ ಮಾಹಿತಿಯನ್ನೂ ಪಡೆದರು.

ಸಚಿವರ ಮಕ್ಕಳಿಗೆ, ಸೋದರಿಗೆ, ಹತ್ತಿರದ ಸಂಬಂಧಿಗಳಿಗೆ ಟಿಕೆಟ್ ನೀಡಲಾಗಿತ್ತು. ಹಾಗಿದ್ದರೂ ಸೋಲಾಗಿದ್ದು ಏಕೆ ಎಂಬ ಮಾಹಿತಿಯನ್ನೂ ರಾಹುಲ್ ಪಡೆದುಕೊಂಡರು ಎಂದು ಗೊತ್ತಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸತೀಶ ಜಾರಕಿಹೊಳಿ, ಕೆ.ಜೆ. ಜಾರ್ಜ್, ಈಶ್ವರ ಬಿ. ಖಂಡ್ರೆ, ದಿನೇಶ್ ಗುಂಡೂರಾವ್, ರಹೀಂ ಖಾನ್ ಸೇರಿದಂತೆ ಹಲವು ಸಚಿವರು ಸಭೆಯಲ್ಲಿದ್ದರು.

'ಆಯಾ ಸಚಿವರ ಕ್ಷೇತ್ರದಲ್ಲಿ ಚುನಾವಣೆಯ ಫಲಿತಾಂಶ ಏನಾಗಿದೆ ಎಂಬುದರ ಮಾಹಿತಿಯನ್ನು ರಾಹುಲ್ ಗಾಂಧಿ ಪಡೆದರು. ರಾಜ್ಯದಲ್ಲಿ ಇನ್ನೂ 5–6 ಕ್ಷೇತ್ರಗಳಲ್ಲಿ ಗೆಲುವಿನ ನಿರೀಕ್ಷೆ ಇತ್ತು ಎಂದ ಅವರು, ಪ್ರತಿ ಕ್ಷೇತ್ರದ ಫಲಿತಾಂಶದ ಬಗ್ಗೆ ವರದಿ ನೀಡುವಂತೆ ಸೂಚಿಸಿದರು' ಎಂದು ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

'ಕೇಂದ್ರದ ಅನ್ಯಾಯದ ವಿರುದ್ಧ ಧ್ವನಿ ಎತ್ತಿ'

'ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯಗಳ ವಿರುದ್ಧ ಗಟ್ಟಿಯಾಗಿ ಧ್ವನಿ ಎತ್ತಬೇಕು. ತಾರತಮ್ಯದ ವಿರುದ್ಧ ಪ್ರಬಲ ಹೋರಾಟ ನಡೆಸಬೇಕು' ಎಂದು ರಾಜ್ಯದಿಂದ ಆಯ್ಕೆಯಾದ ತಮ್ಮ ಪಕ್ಷದ ಸಂಸದರಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಲಹೆ ನೀಡಿದ್ದಾರೆ.

ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ರಾಜ್ಯ ಕಾಂಗ್ರೆಸ್ ಉಸ್ತುವಾರಿಯಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಸಭೆಯಲ್ಲಿದ್ದರು.

ಎಲ್ಲ ಸಂಸದರ ಜತೆ ಖುದ್ದಾಗಿ ಮಾತನಾಡಿದ ರಾಹುಲ್, ಸಂಸತ್ ಅಧಿವೇಶನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಸೂಚಿಸಿದ್ದಾರೆ. ಕ್ಷೇತ್ರದಲ್ಲಿ ನಿರಂತರವಾಗಿ ಜನರ ಸಂಪರ್ಕದಲ್ಲಿದ್ದು, ಈ ಚುನಾವಣೆಯಲ್ಲಿ ಮತ ನೀಡದವರ ಮನಸ್ಸನ್ನೂ ಗೆಲ್ಲುವಂತೆ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಶಿವಕುಮಾರ್, 'ಈ ಹಿಂದೆ ರಾಜ್ಯದಿಂದ ಸಂಸದರಾಗಿದ್ದವರ ಪೈಕಿ ಒಬ್ಬರನ್ನು (ಡಿ.ಕೆ. ಸುರೇಶ್) ಹೊರತುಪಡಿಸಿದರೆ ಯಾರೊಬ್ಬರೂ ರಾಜ್ಯದ ಪರ ಧ್ವನಿ ಎತ್ತಲಿಲ್ಲ. ತೆರಿಗೆ ಹಂಚಿಕೆಯಲ್ಲಿ ಅನ್ಯಾಯ, ಕಳಸಾ ಬಂಡೂರಿ, ಮೇಕೆದಾಟು ಯೋಜನೆಗೆ ಒಪ್ಪಿಗೆ, ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನ ಸೇರಿದಂತೆ ರಾಜ್ಯಕ್ಕೆ ನ್ಯಾಯ ಪಡೆಯಲು ಸಂಸದರು ಒಗ್ಗಟ್ಟಿನಿಂದ ಪ್ರಯತ್ನಿಸಬೇಕು ಎಂಬ ಸಲಹೆಯನ್ನೂ ನೀಡಿದರು' ಎಂದು ತಿಳಿಸಿದರು.



ರಾಜ್ಯದಿಂದ ಆಯ್ಕೆಯಾಗಿರುವ ಕಾಂಗ್ರೆಸ್ ಪಕ್ಷದ ಸಂಸದರೊಂದಿಗೆ ರಾಹುಲ್ ಗಾಂಧಿ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಸಭೆ ನಡೆಸಿದರು. ಸಿದ್ದರಾಮಯ್ಯ, ರಣದೀಪ್ ಸಿಂಗ್ ಸುರ್ಜೇವಾಲಾ, ಶಿವಕುಮಾರ್ ಸಭೆಯಲ್ಲಿದ್ದರು – ಪ್ರಜಾವಾಣಿ ಚಿತ್ರ

ರಾಹುಲ್ ಸ್ವಾಗತಕ್ಕೆ ಜನಸ್ತೋಮ

ರಾಹುಲ್ ಗಾಂಧಿ ಅವರು ಕೆಪಿಸಿಸಿ ಕಚೇರಿಗೆ ಬರುತ್ತಿರುವ ಸುದ್ದಿ ತಿಳಿದು ನೂರಾರು ಮಂದಿ ಅಲ್ಲಿಗೆ ಬಂದಿದ್ದರು. ರಾಹುಲ್ ಅವರನ್ನು ಸ್ವಾಗತಿಸುವ ಫ್ಲೆಕ್ಸ್ ಹಿಡಿದು ಕಾದು ನಿಂತಿದ್ದ ಅವರು, ಜೈಕಾರ ಹಾಕಿ ಸ್ವಾಗತಿಸಿದರು.

ರಾಹುಲ್‌ಗೆ ಜಾಮೀನು

ಒಂದನೇ ಪುಟದಿಂದ...

ಆರೋಪಿ ರಾಹುಲ್ ಗಾಂಧಿಯ ಖುದ್ದು ಹಾಜರಿಯನ್ನು ದಾಖಲಿಸಿಕೊಂಡ ನ್ಯಾಯಾಧೀಶರು, ₹50 ಸಾವಿರ ಬಾಂಡ್ ಮತ್ತು ಒಬ್ಬರ ಶ್ಯೂರಿಟಿ ಆಧಾರದಲ್ಲಿ ಜಾಮೀನು ಮಂಜೂರು ಮಾಡಿದರು. ಮಾಜಿ ಸಂಸದ ಡಿ.ಕೆ. ಸುರೇಶ್ ಹಾಜರಿದ್ದು ಆಸ್ತಿ ಭದ್ರತೆ ನೀಡಿದರು. ಪ್ರಕರಣದ ಆರೋಪವನ್ನು ಆರೋಪಿಗೆ ಅರುಹಿ, ಇದಕ್ಕೆ ಅವರ ಉತ್ತರವನ್ನು ದಾಖಲಿಸಿಕೊಳ್ಳುವಲುವಾಗಿ (ಪ್ಲೀ ರೆಕಾರ್ಡಿಂಗ್) ವಿಚಾರಣೆಯನ್ನು ಜುಲೈ 30ಕ್ಕೆ ಮುಂದೂಡಲಾಗಿದೆ.

ಈ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷ (ಕೆಪಿಸಿಸಿ) ಮೊದಲ ಆರೋಪಿ. ಎರಡನೇ ಆರೋಪಿ ಡಿ.ಕೆ.ಶಿವಕುಮಾರ್. ಮೂರನೇ ಆರೋಪಿ ಸಿದ್ದರಾಮಯ್ಯ ಹಾಗೂ ನಾಲ್ಕನೇ ಆರೋಪಿಯಾಗಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಇದ್ದಾರೆ. ಕಳೆದ ವಿಚಾರಣೆ ವೇಳೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನ್ಯಾಯಾಲಯಕ್ಕೆ ಖುದ್ದು ಹಾಜರಾಗಿ ಜಾಮೀನು ಪಡೆದಿದ್ದರು. ಕಾಂಗ್ರೆಸ್ ಪಕ್ಷದ ಪರವಾಗಿ ಕೆಪಿಸಿಸಿ ಅಧ್ಯಕ್ಷರೂ ಆದ ಡಿ.ಕೆ. ಶಿವಕುಮಾರ್ ಸೇರಿದಂತೆ ಎಲ್ಲ ಆರೋಪಿಗಳೂ ಶುಕ್ರವಾರ ಹಾಜರಿದ್ದರು. ರಾಹುಲ್ ಗಾಂಧಿಗೆ ಈ ಮೊದಲು ಸಮನ್ಸ್ ಜಾರಿಗೊಳಿಸಲಾಗಿತ್ತು. ಆದರೆ, ಖುದ್ದು ಹಾಜರಿಯಿಂದ ವಿನಾಯ್ತಿ ಪಡೆದಿದ್ದರು.



ರಾಹುಲ್ ಗಾಂಧಿ ಪರ ಹೈಕೋರ್ಟ್ ವಕೀಲ ನಿಶಿತ್ ಶೆಟ್ಟಿ, ಸಿದ್ದರಾಮಯ್ಯ ಪರ ಸೂರ್ಯ ಮುಕುಂದರಾಜ್ ಹಾಗೂ ಡಿ.ಕೆ. ಶಿವಕುಮಾರ್ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಸ್.ಎ.ಅಹಮದ್ ಹಾಗೂ, ಫಿರ್ಯಾದುದಾರರ ಪರ ಹೈಕೋರ್ಟ್ ವಕೀಲ ಎಂ.ವಿನೋದ್ ಕುಮಾರ್ ಹಾಜರಿದ್ದರು.

ತೊಂದರೆ: ರಾಹುಲ್ ಗಾಂಧಿ ಕೋರ್ಟ್‌ಗೆ ಬಂದು ಹೋಗುವ ತನಕ ಸಿಟಿ ಸಿವಿಲ್ ಕೋರ್ಟ್ ಆವರಣದ ಸುತ್ತಮುತ್ತ ಭಾರಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಇದರಿಂದಾಗಿ ಕಚೇರಿಗಳಿಗೆ ಹಾಜರಾಗುವ ನೌಕರರು, ಸಿಬ್ಬಂದಿ, ವಕೀಲರು ಮತ್ತು ಸಾರ್ವಜನಿಕರು ಕೆಲಕಾಲ ವಾಹನ ದಟ್ಟಣೆಯಿಂದಾಗಿ ತೊಂದರೆ ಅನುಭವಿಸಿದರು.

4 ಔಷಧ ಅಂಗಡಿ ಬಂದ್ 30 ಲೈಸೆನ್ಸ್ ಅಮಾನತು

ಒಂದನೇ ಪುಟದಿಂದ...

ಬಹುತೇಕ ಔಷಧಿ ಅಂಗಡಿಗಳ ಮಾಲೀಕರು ಎಂಟಿಪಿ ಕಿಟ್ ಮಾರಾಟ ಮಾಡಿಯೂ ಮಾಡಿಲ್ಲವೆಂದು ಹಿಂಬರಹ ಸಲ್ಲಿಸಿರುವುದು ಪತ್ತೆಯಾಗಿದ್ದು, ಅಂಥವರ ವಿರುದ್ಧ ಕ್ರಮ ಜರುಗಿಸಲು ಸಹಾಯಕ ಔಷಧ ನಿಯಂತ್ರಣಾಧಿಕಾರಿ ಮುಂದಾಗಿದ್ದಾರೆ.

'ಕಿಟ್ ಮಾರಾಟ ಮಾಡುವಾಗ ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ನಿಷೇಧ ಕಾಯ್ದೆ (ಪಿಸಿ ಮತ್ತು ಪಿಎನ್‌ಡಿಟಿ) ನಿಯಮ ಉಲ್ಲಂಘಿಸಿದ ಔಷಧಿ ಅಂಗಡಿಗಳ ಲೈಸೆನ್ಸ್ ಅಮಾನತು ಮಾಡಲಾಗಿದೆ. 30 ದಿನದಲ್ಲಿ ವಿವರ ಸಲ್ಲಿಸದಿದ್ದರೆ ಮತ್ತಷ್ಟು ಲೈಸೆನ್ಸ್‌ಗಳ ರದ್ದತಿ ಕುರಿತು ಎಚ್ಚರಿಸಲಾಗಿದೆ. ನಾಲ್ವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲಾಗಿದೆ' ಎಂದು ಸಹಾಯಕ ಔಷಧ ನಿಯಂತ್ರಣಾಧಿಕಾರಿ ಮೊಹಮ್ಮದ್ ಖಾಲಿದ್ ಹೇಳಿದರು.

ನಡೆಯದ ವೈದ್ಯಕೀಯ ಪರಿಶೋಧನೆ: ಎಂಟಿಪಿ ಕಿಟ್ ಮಾರಾಟ ವಿವರ, ನರ್ಸಿಂಗ್ ಹೋಂಗಳಲ್ಲಿ ಭ್ರೂಣಹತ್ಯೆ ಕುರಿತ ರೋಗಿ ನೋಂದಣಿ ಮಾಹಿತಿಯನ್ನು ಪ್ರತಿ ತಿಂಗಳು 5ರಂದು ಸಕ್ಷಮ ಪ್ರಾಧಿಕಾರದ ಮುಂದೆ ಸಲ್ಲಿಸಬೇಕು. 'ಆದರೆ ಜಿಲ್ಲೆಯಲ್ಲಿ ಈ ಪ್ರಕ್ರಿಯೆ ನಡೆದಿಲ್ಲ. ಲೆಕ್ಕವಿಲ್ಲದಂತೆ ಹೆಣ್ಣುಭ್ರೂಣ ಹತ್ಯೆ ನಡೆಯುತ್ತಿದೆ' ಎಂದು ವೈದ್ಯರು ಹೇಳುತ್ತಾರೆ.

'ಆಲೆಮನೆಯಲ್ಲಿ ಪ್ರಕರಣ ಪತ್ತೆಯಾದ ನಂತರ ಎಂಟಿಪಿ ಕಿಟ್ ಮಾರಾಟ, ಆಸ್ಪತ್ರೆಗಳಲ್ಲಿ ನಡೆದ ಭ್ರೂಣ ಹತ್ಯೆ ಕುರಿತಂತೆ ವೈದ್ಯಕೀಯ ಪರಿಶೋಧನೆ (ಮೆಡಿಕಲ್ ಆಡಿಟ್) ನಡೆಸಲು ತನಿಖಾಧಿಕಾರಿಗಳು ಸೂಚಿಸಿದ್ದರು. ಆದರೆ ಆರೋಗ್ಯ ಇಲಾಖೆ ಅಧಿಕಾರಿಗಳು ಇಲ್ಲಿಯವರೆಗೂ ಪರಿಶೋಧನೆ ನಡೆಸಿಲ್ಲ' ಎಂದು ತನಿಖೆಯಲ್ಲಿ ಪಾಲ್ಗೊಂಡಿದ್ದ ವೈದ್ಯರೊಬ್ಬರು ತಿಳಿಸಿದರು.

> **ಸಹಾಯಕ ಔಷಧ ನಿಯಂತ್ರಣಾಧಿಕಾರಿ ಒಂದು ಕಡೆ ಕಾರ್ಯಾಚರಣೆ ನಡೆಸುತ್ತಿದ್ದರೆ, ಮತ್ತೊಂದೆಡೆ ಆರೋಗ್ಯ ಇಲಾಖೆ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ**
> **ಡಾ.ಕೆ.ಮೋಹನ್,** ಡಿಎಚ್‌ಒ

ಭ್ರೂಣಹತ್ಯೆ ತಡೆಗೆ ಕ್ಷಿಪ್ರ ಕಾರ್ಯ ಪಡೆ

ಬಾಗಲಕೋಟೆ: ಜಿಲ್ಲೆಯ ಮಹಾಲಿಂಗಪುರದಲ್ಲಿ ನಡೆದ ಭ್ರೂಣಹತ್ಯೆ ಪ್ರಕರಣ ಮರುಕಳಿಸದಂತೆ ತಡೆಯಲು ಪ್ರಮುಖ ಅಧಿಕಾರಿಗಳಿರುವ ಕ್ಷಿಪ್ರ ಕಾರ್ಯ ಪಡೆ ರಚಿಸಲಾಗಿದೆ.

'ಜಿಲ್ಲಾ ಮಟ್ಟದ ಹಾಗೂ ಉಪವಿಭಾಗದ ಸಮಿತಿಗಳ ಜೊತೆ ಸಮನ್ವಯ ಮಾಡಿಕೊಂಡು ಭ್ರೂಣ ಹತ್ಯೆ ಪ್ರಕರಣಗಳನ್ನು ಪತ್ತೆ ಮಾಡಬೇಕು. ಗರ್ಭಪೂರ್ವ ಮತ್ತು ಪ್ರಸವಪೂರ್ವ ಪತ್ತೆ ಮಾಡುವ (ಲಿಂಗ ಆಯ್ಕೆ ನಿಷೇಧ) ಕಾಯ್ದೆ ಪರಿಣಾಮಕಾರಿ ಅನುಷ್ಠಾನಕ್ಕೆ ಪಡೆ ರಚನೆಯಾಗಿದೆ' ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ. ತಿಳಿಸಿದ್ದಾರೆ.

ಪೊಲೀಸ್ ಇಲಾಖೆಯ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ, ಕಂದಾಯ ಇಲಾಖೆಯ ಉಪವಿಭಾಗಾಧಿಕಾರಿ, ಆರೋಗ್ಯ ಇಲಾಖೆಯ ಡಿಎಚ್‌ಒ, ಪಿ.ಸಿ ಆ್ಯಂಡ್ ಪಿಎನ್‌ಡಿಟಿ ಅಧ್ಯಕ್ಷ, ನಗರಾಭಿವೃದ್ಧಿ ಇಲಾಖೆಯ ಯೋಜನಾ ನಿರ್ದೇಶಕ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಕಾರ್ಯಪಡೆಯಲ್ಲಿ ಇದ್ದಾರೆ.

ಡಾ.ಮಲಘಾಣ ವಿರುದ್ಧ ಇಲಾಖೆ ವಿಚಾರಣೆ: ಭ್ರೂಣಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಮುಧೋಳ ತಾಲ್ಲೂಕಿನ ವೈದ್ಯಾಧಿಕಾರಿ ಡಾ.ವೆಂಕಟೇಶ ಮಲಘಾಣ ವಿರುದ್ಧ ಇಲಾಖೆ ವಿಚಾರಣೆ ನಡೆಸಬೇಕು ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಆರೋಗ್ಯ ಇಲಾಖೆ ಆಯುಕ್ತ ಡಿ.ರಂದೀಪ್ ಅವರಿಗೆ ಶಿಫಾರಸು ಮಾಡಿದ್ದಾರೆ.

ಮುನ್ನುಗ್ಗುವ ಟಿಎಂಸಿ, ಕಾದು ನೋಡುವ ಕಾಂಗ್ರೆಸ್, ಎಸ್‌ಪಿ ನಡುವೆ ಹೊಂದಾಣಿಕೆ ಸಾಧ್ಯವೇ?

'ಇಂಡಿಯಾ' ಕೂಟ: ಮುಂದಿವೆ ಹಲವು ಸವಾಲು

• ಶೆಮಿನ್ ಜಾಯ್

ನವದೆಹಲಿ: ಬಿಜೆಪಿಯು ಎನ್‌ಡಿಎ ಕೂಟದ ಪ್ರಮುಖ ಮಿತ್ರಪಕ್ಷಗಳಿಂದ ಹಲವು ರೀತಿಯ ಒತ್ತಡಗಳನ್ನು ಎದುರಿಸುತ್ತಿದೆ. ಇಂಥ ಒತ್ತಡಗಳಿಂದ ಕಾಂಗ್ರೆಸ್ ಸಹ ಮುಕ್ತವೇನಲ್ಲ. 'ಇಂಡಿಯಾ' ಕೂಟದಲ್ಲಿಯೂ ಮಿತ್ರಪಕ್ಷಗಳ ನಡುವೆ ಹಲವು ಸಮಸ್ಯೆಗಳು ತಲೆದೋರಿವೆ.

ಲೋಕಸಭಾ ಚುನಾವಣೆಯ ನಂತರ ಬುಧವಾರ ನಡೆದ ಮೊದಲ ಸಭೆಯಲ್ಲಿ, 'ಇಂಡಿಯಾ' ಕೂಟದೊಳಗೇ ಪ್ರಮುಖರ ಗುಂಪೊಂದನ್ನು ರಚಿಸಿ, ಒಂದಷ್ಟು ಪಕ್ಷಗಳನ್ನು ಸೆಳೆದು, ಮೋದಿ ಸರ್ಕಾರವನ್ನು ಉರುಳಿಸುವುದಕ್ಕಾಗಿ ಕಾರ್ಯಪ್ರವೃತ್ತವಾಗುವ ಆಶಯವನ್ನು ತೃಣಮೂಲ ಕಾಂಗ್ರೆಸ್ (ಟಿಎಂಸಿ) ವ್ಯಕ್ತಪಡಿಸಿತ್ತು. ಆ ಸಭೆ 'ಇಂಡಿಯಾ' ಕೂಟದಲ್ಲಿನ ಸಮಸ್ಯೆಗಳಿಗೆ ಕನ್ನಡಿ ಹಿಡಿಯಿತು.

ಲೋಕಸಭಾ ಚುನಾವಣೆಯಲ್ಲಿ 328 ಸ್ಥಾನಗಳಲ್ಲಿ ಸ್ಪರ್ಧಿಸುವುದರೊಂದಿಗೆ ಮಿತ್ರಪಕ್ಷಗಳೊಂದಿಗೆ ಹೊಂದಾಣಿಕೆಯ ಮನೋಭಾವ ಪ್ರದರ್ಶಿಸಿದ ಕಾಂಗ್ರೆಸ್, ಮುಂದೆಯೂ ಅದೇ ರೀತಿ ವರ್ತಿಸುವುದೇ ಎನ್ನುವುದನ್ನು 'ಇಂಡಿಯಾ' ಕೂಟದ ಮಿತ್ರಪಕ್ಷಗಳು ಸೂಕ್ಷ್ಮವಾಗಿ ಗಮನಿಸುತ್ತಿವೆ.



ಮಮತಾ ಬ್ಯಾನರ್ಜಿ



ಅಖಿಲೇಶ್ ಯಾದವ್

ಲೋಕಸಭಾ ಚುನಾವಣೆಯಲ್ಲಿ 99 ಸ್ಥಾನಗಳನ್ನು ಗೆದ್ದಿರುವ ಕಾಂಗ್ರೆಸ್, ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಮತ್ತು ಇತರ ವೇದಿಕೆಗಳಲ್ಲಿ ಸ್ಪರ್ಧೆಗಿಳಿದು ತನ್ನ ಬಲ ತೋರುವುದೇ ಎನ್ನುವ ಬಗ್ಗೆ ಮಿತ್ರಪಕ್ಷಗಳಿಗೆ ಇನ್ನೂ ಖಾತರಿ ಇಲ್ಲ. ಮುಂದಿನ ದಿನಗಳಲ್ಲಿ ಹರಿಯಾಣ, ಮಹಾರಾಷ್ಟ್ರ, ಜಮ್ಮು–ಕಾಶ್ಮೀರ ಮತ್ತು ದೆಹಲಿಯಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿವೆ.

ಬುಧವಾರದ ಸಭೆಯಲ್ಲಿ, ಮೋದಿ ಅವರ ಸರ್ಕಾರವನ್ನು ಉರುಳಿಸುವ ದಿಸೆಯಲ್ಲಿ 'ಸೂಕ್ತ ಸಮಯದಲ್ಲಿ ಸೂಕ್ತ ಕಾರ್ಯತಂತ್ರ' ರೂಪಿಸುವ ಬಗ್ಗೆ ತೀರ್ಮಾನ ಮಾಡಲಾಯಿತು. ಆದರೆ, ಟಿಎಂಸಿಯಂತಹ ಪಕ್ಷಗಳು 'ಸೂಕ್ತ ಸಮಯಕ್ಕಾಗಿ ಕಾಯುವ' ಬಗ್ಗೆ ಅಸಮ್ಮತಿ ಸೂಚಿಸಿವೆ. 3 ಬಿಜೆಪಿ ಸಂಸದರು ತನ್ನೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದು ಟಿಎಂಸಿಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ವಿರೋಧಿ ಒಕ್ಕೂಟದ ಪ್ರಮುಖ ನಾಯಕರಿಗೆ ತಿಳಿಸಿದರು. ಆದರೆ, ಪರ್ಯಾಯ ಸರ್ಕಾರ ರಚನೆಯ ಬಗ್ಗೆ ಆತುರ ಪಡುವುದು ಬೇಡ ಎಂದು ವಿರೋಧಿ ಬಣದ ನಾಯಕರು ಒಕ್ಕೊರಲಿನಿಂದ ಹೇಳಿದರು. ಈ ಬಗ್ಗೆ ಪ್ರತಿಕ್ರಿಯಿಸಿರುವ ಪಕ್ಷದ ಹಿರಿಯ ಮುಖಂಡರೊಬ್ಬರು, 'ಟಿಎಂಸಿ ಮತ್ಯಾರದೋ ತಂತ್ರಗಾರಿಕೆಯನ್ನೇ ನೆಚ್ಚಿಕೊಂಡು ಕೂರಲು ಬಯಸುವುದಿಲ್ಲ' ಎಂದು ತಿಳಿಸಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿ 2019ರಲ್ಲಿ ಗೆದ್ದಿದ್ದಕ್ಕಿಂತ ಏಳು ಸ್ಥಾನಗಳನ್ನು (ಒಟ್ಟು 29 ಸ್ಥಾನ) ಹೆಚ್ಚಿಗೆ ಗೆದ್ದಿರುವ ಟಿಎಂಸಿ, ಕಾಂಗ್ರೆಸ್ ಪಕ್ಷದ ಮಾತಿಗೆ ಕಿವಿಗೊಡುವ ಮನಸ್ಥಿತಿಯಲ್ಲಿ ಇಲ್ಲ.

ಉತ್ತರ ಪ್ರದೇಶದಲ್ಲಿ ರಾಹುಲ್ ಅವರ ಜತೆಗೂಡಿ ವ್ಯಾಪಕ ಪ್ರಚಾರ ಮಾಡಿ, ಬಿಜೆಪಿಗಿಂತ ಹೆಚ್ಚಿನ ಸ್ಥಾನಗಳನ್ನು ಗೆದ್ದು, ಸಂಸತ್ತಿನಲ್ಲಿ ಹಿಂದಿನ ಐದು ಸ್ಥಾನಗಳಿಂದ 37 ಸ್ಥಾನಗಳಿಗೆ ಬಲ ಹೆಚ್ಚಿಸಿಕೊಂಡಿರುವ ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ರಾಷ್ಟ್ರ ಮಟ್ಟದಲ್ಲಿ ಹೇಗೆ ಹೊಂದಿಕೊಳ್ಳುತ್ತಾರೆ ಎನ್ನುವುದನ್ನು ಕೂಡ ನೋಡಬೇಕಿದೆ.

ಮುಂದಿನ ವರ್ಷ ದೆಹಲಿಯಲ್ಲಿ ಚುನಾವಣೆ ನಡೆಯುವುದರಿಂದ ಎಎಪಿ ಕೂಡ ಕಾಂಗ್ರೆಸ್ ಪಾಲಿಗೆ ತೊಡಕಾಗುವ ಲಕ್ಷಣಗಳಿವೆ. ದೆಹಲಿ ಮತ್ತು ಹರಿಯಾಣದಲ್ಲಿ ಯಾವುದೇ ಪಕ್ಷದೊಂದಿಗೆ ಹೊಂದಾಣಿಕೆ ಇಲ್ಲ ಎಂದು ಈಗಾಗಲೇ ಎಎಪಿ ಸೂಚನೆ ನೀಡಿದೆ. ಇನ್ನೊಂದೆಡೆ ಕಾಂಗ್ರೆಸ್, ಲೋಕಸಭಾ ಚುನಾವಣೆಯಲ್ಲಿ ಬಿಟ್ಟುಕೊಟ್ಟಿರುವಂತೆ, ಎಎಪಿಗೆ ಯಾವುದೇ ಸ್ಥಾನ ಬಿಟ್ಟುಕೊಡುವ ಸಾಧ್ಯತೆ ಇಲ್ಲ.

ಜಮ್ಮು–ಕಾಶ್ಮೀರದ ವಿಧಾನಸಭಾ ಚುನಾವಣೆಯ ಬಗ್ಗೆಯೂ 'ಇಂಡಿಯಾ' ಕೂಟವು ಹೆಚ್ಚು ಗಮನಹರಿಸುತ್ತಿದೆ. ಲೋಕಸಭಾ ಚುನಾವಣೆಯಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಮಾತಿಗೆ ಕಟ್ಟುಬಿದ್ದು ಮೆಹಬೂಬಾ ಮುಫ್ತಿ ಅವರ ಪಿಡಿಪಿಯನ್ನು ಮೈತ್ರಿಕೂಟದಿಂದ ಹೊರಗಿಡಲಾಗಿತ್ತು. ಆದರೆ, ಚುನಾವಣೆಯಲ್ಲಿ ಮೆಹಬೂಬಾ ಮುಫ್ತಿ ಮತ್ತು ಒಮರ್ ಅಬ್ದುಲ್ಲಾ ಇಬ್ಬರೂ ಸೋತಿದ್ದಾರೆ.

'ಇಂಡಿಯಾ' ಕೂಟಕ್ಕೆ 'ಮಹಾ' ಸಂಕಟ

ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರದಲ್ಲಿ ಮಿತ್ರಪಕ್ಷಗಳಿಗಿಂತ ಹೆಚ್ಚು ಸ್ಥಾನ ಗೆದ್ದಿರುವ ಕಾಂಗ್ರೆಸ್, ಮುಂದೆ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿಯೂ ಹೆಚ್ಚು ಸ್ಥಾನಗಳನ್ನು ಕೇಳುವ ಸಂಭವವಿದೆ. ಆಗ ಲೋಕಸಭಾ ಚುನಾವಣೆಯಲ್ಲಿ ನಡೆದ ರೀತಿಯಲ್ಲಿಯೇ ಸೀಟು ಹಂಚಿಕೆಯ ವಿಚಾರದಲ್ಲಿ ದೀರ್ಘ ಮಾತುಕತೆಗಳು ನಡೆಯಲಿವೆ.

ಇನ್ನೊಂದೆಡೆ, ಶಿವಸೇನಾ (ಯುಬಿಟಿ) ಮತ್ತು ಎನ್‌ಸಿಪಿ (ಶರದ್ ಪವಾರ್ ಬಣ) ತಮ್ಮ ಪಕ್ಷ ಬಿಟ್ಟು ಹೊರಹೋಗಿದ್ದವರನ್ನು ಮತ್ತೆ ಸೆಳೆಯುವ ಪ್ರಯತ್ನದಲ್ಲಿದ್ದು, ಈಗಾಗಲೇ ಹಲವರು ಉದ್ಧವ್ ಹಾಗೂ ಶರದ್ ಪವಾರ್ ಅವರನ್ನು ಸಂಪರ್ಕಿಸಿದ್ದಾರೆ ಎನ್ನಲಾಗುತ್ತಿದೆ.

ಇದೆಲ್ಲದರಿಂದಾಗಿ 'ಇಂಡಿಯಾ' ಕೂಟಕ್ಕೆ ಮಹಾರಾಷ್ಟ್ರದಲ್ಲಿ ಮುಂದಿನ ದಿನಗಳು ತುಂಬಾ ಸವಾಲಿನದ್ದಾಗಿರಲಿವೆ.

ಒಕ್ಕಲಿಗರ ಗರಿಷ್ಠ ಮತಗಳು ಕಮಲಕ್ಕೆ: ಬಿಜೆಪಿ

‘ಕಾಂಗ್ರೆಸ್ ಓಟಕ್ಕೆ ಕರ್ನಾಟಕದ ಕಡಿವಾಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭಾ ಚುನಾವಣೆಯಲ್ಲಿ ನಿಗದಿತ ಗುರಿ ತಲುಪಲಾಗದಿದ್ದರೂ ಕಾಂಗ್ರೆಸ್ ಓಟಕ್ಕೆ ಕಡಿವಾಣ ಹಾಕಲಾಗಿದೆ. ಇದರಿಂದ ಕಾಂಗ್ರೆಸ್ ರಾಷ್ಟ್ರಮಟ್ಟದಲ್ಲಿ ಮೂರಂಕಿ ಗಡಿ ದಾಟಲು ಸಾಧ್ಯವಾಗಿಲ್ಲ. ಇನ್ನೂ ಮೂರರಿಂದ ನಾಲ್ಕು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಬದಲಿಸಿದ್ದರೆ 23ರಿಂದ 24 ಸ್ಥಾನ ಗೆಲ್ಲುವ ಅವಕಾಶವಿತ್ತು’.

ಬಿಜೆಪಿ ರಾಜ್ಯ ಘಟಕ ಸಿದ್ಧಪಡಿಸಿರುವ ಲೋಕಸಭಾ ಚುನಾವಣೆಯ ಫಲಿತಾಂಶದ ಕುರಿತ ಪ್ರಾಥಮಿಕ ವರದಿಯಲ್ಲಿ ಈ ಮೇಲಿನ ಅಂಶ ಉಲ್ಲೇಖಿಸಿದೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ 20ರಿಂದ 23 ಸ್ಥಾನಗಳನ್ನು ಗೆಲ್ಲುವ ಗುರಿ ಹೊಂದಿತ್ತು. ವಿಧಾನಸಭಾ ಚುನಾವಣೆಯಲ್ಲಿ ಪ್ರಚಂಡ ಬಹುಮತದಿಂದ ಅಧಿಕಾರಕ್ಕೇರಿದ ಕಾರಣ ಗರಿಷ್ಠ ಸ್ಥಾನಗಳನ್ನು ಗೆಲ್ಲುವ ಗುರಿ ನಿಗದಿಯಾಗಿತ್ತು. ಆದರೆ, ಬಿಜೆಪಿ– ಜೆಡಿಎಸ್ ಮೈತ್ರಿಯ ಕಾರಣ ಕಾಂಗ್ರೆಸ್ ಕನಸು ನುಚ್ಚು ನೂರಾಗಿದೆ. ಇದರಿಂದಾಗಿ ಕೇಂದ್ರದಲ್ಲಿ 100ರ ಗಡಿ ದಾಟಲು ಸಾಧ್ಯವಾಗಿಲ್ಲ. ಅದೇ ರೀತಿ ಬಿಜೆಪಿ 230 ಆಸುಪಾಸಿಗೆ ಕುಸಿಯುವುದು ತಪ್ಪಿದೆ. ಇದು ರಾಜ್ಯ ಬಿಜೆಪಿಯ ಗಮನಾರ್ಹ ಸಾಧನೆ. ಇದು 19 ಸ್ಥಾನಗಳ ಗೆಲುವಿನ ಮಹತ್ವ ಎಂದು ಬಿಜೆಪಿ ಹೇಳಿಕೊಂಡಿದೆ.

ಕಾಂಗ್ರೆಸ್ ತನ್ನ ಗುರಿಯನ್ನು ಮುಟ್ಟಲು 28 ಕ್ಷೇತ್ರಗಳ ಪೈಕಿ 18 ಕ್ಷೇತ್ರಗಳಲ್ಲಿ ಸಚಿವರ ಮಕ್ಕಳು, ಸಂಬಂಧಿಕರು, ಬಲಾಢ್ಯರನ್ನೇ ಕಣಕ್ಕೆ ಇಳಿಸಿತ್ತು. ಗರಿಷ್ಠ ಸಂಪನ್ಮೂಲವನ್ನು ಬಳಸಿಕೊಂಡಿತ್ತು. ಆದರೂ ಮೈತ್ರಿ ಕೂಟದ ಕಾರ್ಯಕರ್ತರ ಗಳತವರು ಜಿಲ್ಲೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಮಣಿಸಲಾಗಿದೆ. ಅದರಲ್ಲೂ ಅತ್ಯಂತ ಕಠಿಣ ಎನಿಸಿದ್ದ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಡಿ.ಕೆ.ಸುರೇಶ್ ಅವರನ್ನು ಡಾ.ಸಿ.ಎನ್.ಮಂಜುನಾಥ್ ಅಧಿಕ ಮತಗಳ ಅಂತರದಿಂದ ಮಣಿಸಿರುವುದು ಅಸಾಮಾನ್ಯ ಗೆಲುವು ಎಂದಿದೆ.

ರಾಜ್ಯದಲ್ಲಿ ಬಿಜೆಪಿ, ಜೆಡಿಎಸ್ ಮತಗಳುಪರಸ್ಪರಪರಿಣಾಮಕಾರಿಯಾಗಿ ವರ್ಗಾವಣೆ ಆಗಿದೆ. ಅಲ್ಲದೇ, ಎರಡೂ ಪಕ್ಷಗಳ ಕಾರ್ಯಕರ್ತರು ಹೊಂದಾಣಿಕೆಯಿಂದ ಕಾರ್ಯನಿರ್ವಹಿಸಿದ್ದಾರೆ ಒಕ್ಕಲಿಗ ಮತಗಳು ಹೆಚ್ಚಿನ ಪ್ರಮಾಣದಲ್ಲಿ ಬಿಜೆಪಿಗೆ ಬಂದಿವೆ ಎಂದು ಉಲ್ಲೇಖಿಸಿದೆ.

ಮೈಸೂರು ಭಾಗದಲ್ಲಿ ಗರಿಷ್ಠ, ಕಲ್ಯಾಣದಲ್ಲಿ ಶೂನ್ಯ

ಮೈತ್ರಿಕೂಟ ಹಳೆ ಮೈಸೂರು ಪ್ರದೇಶದಲ್ಲಿ 10ರಲ್ಲಿ 9, ಕರಾವಳಿ ಕರ್ನಾಟಕದಲ್ಲಿ 3ಕ್ಕೆ 3, ಮಧ್ಯ ಕರ್ನಾಟಕದಲ್ಲಿ 4ರಲ್ಲಿ 2, ಕಿತ್ತೂರು ಕರ್ನಾಟಕದಲ್ಲಿ 6ರಲ್ಲಿ 5 ಕ್ಷೇತ್ರಗಳನ್ನು ಪಕ್ಷ ಗೆದ್ದುಕೊಂಡಿದೆ. ಕಲ್ಯಾಣ ಕರ್ನಾಟಕದಲ್ಲಿ 5ರಲ್ಲಿ ಒಂದೂ ಸ್ಥಾನವನ್ನು ಗೆಲ್ಲಲು, ಬೀದರ್, ಚಿಕ್ಕೋಡಿ, ರಾಯಚೂರು, ದಾವಣಗೆರೆ ಮತ್ತು ಬಳ್ಳಾರಿಯಲ್ಲಿ ಬೇರೆ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದ್ದರೆ ಕನಿಷ್ಠ ಮೂರು ಸ್ಥಾನಗಳನ್ನು ಗೆಲ್ಲಬಹುದಿತ್ತು ಎಂದು ಹೇಳಿದೆ.

‘ಇಲ್ಲಿ ಅಭ್ಯರ್ಥಿಗಳ ಆಯ್ಕೆ ಸರಿ ಇರಲಿಲ್ಲ. ಇದರ ಬಗ್ಗೆ ಕಾರ್ಯಕರ್ತರು ಮತ್ತು ಸ್ಥಳೀಯ ನಾಯಕರು ಬೇಸರಗೊಂಡು ತಟಸ್ಥರಾಗಿದ್ದರು. ಅಭ್ಯರ್ಥಿಗಳು ಆಡಳಿತ ವಿರೋಧಿ ಅಲೆ ಎದುರಿಸಿದ್ದರು. ಈ ಅಂಶವನ್ನು ಮೊದಲೇ ಗಮನಕ್ಕೆ ತರಲಾಗಿತ್ತು, ಆದರೆ ಅಭ್ಯರ್ಥಿಗಳ ಬದಲಾವಣೆ ಮಾಡದ ಕಾರಣ ಈ ಕ್ಷೇತ್ರಗಳನ್ನು ಕಳೆದುಕೊಳ್ಳಬೇಕಾಯಿತು ಎಂದು ವರದಿ ತಿಳಿಸಿದೆ.

ಜಿದ್ದಾಜಿದ್ದಿನ ಪೈಪೋಟಿ ಕಾರಣ 19 ಸ್ಥಾನಗಳನ್ನು ಗೆದ್ದುಕೊಳ್ಳಲು ಸಾಧ್ಯವಾಗಿದೆ ಎಂದು ವರದಿಯಲ್ಲಿ ಹೇಳಿದೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ-

ಬಿ.ಇಡಿ: 5 ತಿಂಗಳಾದರೂ ಬಾರದ ಫಲಿತಾಂಶ!

• ವೆಂಕಟೇಶ್ ಜಿ.ಎಚ್

ಶಿವಮೊಗ್ಗ: ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿರುವ 17 ಬಿ.ಇಡಿ ಕಾಲೇಜುಗಳ 911 ಪ್ರಶಿಕ್ಷಣಾರ್ಥಿಗಳು 4ನೇ ಸೆಮಿಸ್ಟರ್ ಪರೀಕ್ಷೆಯನ್ನು ಬರೆದು 5 ತಿಂಗಳೇ ಕಳೆದಿದ್ದರೂ, ಇನ್ನೂ ಫಲಿತಾಂಶ ಬಾರದ ಕಾರಣ ಪರೀಕ್ಷಾರ್ಥಿಗಳ ಭವಿಷ್ಯ ಅತಂತ್ರಕ್ಕೀಡಾಗಿದೆ.

2022–23ನೇ ಸಾಲಿನ ಬಿ.ಇಡಿ ಪ್ರಶಿಕ್ಷಣಾರ್ಥಿಗಳ ಅಂತಿಮ ಸೆಮಿಸ್ಟರ್‌ನ ಪರೀಕ್ಷೆಗಳು ಕಳೆದ ಜನವರಿ 10ರಂದು ಮುಕ್ತಾಯವಾಗಿದೆ. ಆದರೆ ಫಲಿತಾಂಶ ಇನ್ನೂ ಪ್ರಕಟವಾಗಿಲ್ಲ. ಈ ಮಧ್ಯೆ ಸರ್ಕಾರಿ ಹಿರಿಯ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕಾತಿಗೆ ಸರ್ಕಾರ ಕಳೆದ ಮೇ 30ರಂದು ಅರ್ಜಿ ಕರೆದಿದೆ. ಬಿ.ಇಡಿ ಮುಗಿಸಿದರೂ ಫಲಿತಾಂಶ ಬಾರದೇ, ಅಂಕಪಟ್ಟಿ ಸಿಗದೇ ಹುದ್ದೆಗೆ ಅರ್ಜಿ ಹಾಕಲು ಸಾಧ್ಯವಿಲ್ಲ.

> **ವಿದ್ಯಾರ್ಥಿಗಳಿಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧ. ಜೂನ್ 10ರೊಳಗೆ ಬಿ.ಇಡಿ ಪರೀಕ್ಷೆಯ ಫಲಿತಾಂಶ ಕೊಡದೇ ಇದ್ದರೆ ಸಿಂಡಿಕೇಟ್ ದೂರು ಕೊಡುವುದಾಗಿ ಸಂಬಂಧಿಸಿದವರಿಗೆ ಹೇಳಿದ್ದೇನೆ.**
> **ಪ್ರೊ.ಗೋಪಿನಾಥ್,** ಕುಲಸಚಿವ (ಪರೀಕ್ಷಾಂಗ), ಕುವೆಂಪು ವಿ.ವಿ

'ಇನ್ನೊಂದೆಡೆ ಶೈಕ್ಷಣಿಕ ವರ್ಷ ಆರಂಭವಾಗಿದೆ. ಖಾಸಗಿ ಶಾಲೆಗಳಲ್ಲಿ ನೇಮಕಾತಿಗೆ ಅರ್ಜಿ ಕರೆದರೂ ನಮಗೆ ಹಾಕಲು ಆಗುತ್ತಿಲ್ಲ. ಇದು ನನ್ನಂತೆಯೇ ನೌಕರಿ ನಿರೀಕ್ಷೆಯಲ್ಲಿರುವ ಎಲ್ಲರಿಗೂ ಆಗಿರುವ ತೊಂದರೆ' ಎಂದು ಪ್ರಶಿಕ್ಷಣಾರ್ಥಿ ಶಿವಮೊಗ್ಗದ ಕೆ.ವಿ.ಲೇಖನ ಅಳಲು ತೋಡಿಕೊಳ್ಳುತ್ತಾರೆ.

ನೌಕರಿಗೆ ಅರ್ಜಿ ಹಾಕಲಷ್ಟೇ ಅಲ್ಲ,

> **ಬಿ.ಇಡಿ 4ನೇ ಸೆಮಿಸ್ಟರ್‌ನ ಫಲಿತಾಂಶ ಬಾರದೇ ಪಾಠ ಮಾಡಲೂ ನಮ್ಮ ಅರ್ಹತೆ ಹೊಂದಿಲ್ಲ. ತಕ್ಷಣ ಸಮಸ್ಯೆ ಪರಿಹರಿಸಿ ಹುದ್ದೆಗೆ ಅರ್ಜಿ ಹಾಕಲು ಅವಕಾಶ ಕಲ್ಪಿಸಲಿ**
> **ಕೆ.ವಿ.ಲೇಖನ,** ಬಿ.ಇಡಿ ಪ್ರಶಿಕ್ಷಣಾರ್ಥಿ, ಶಿವಮೊಗ್ಗ

ಸ್ನಾತಕೋತ್ತರ (ಎಂ.ಇಡಿ) ಪದವಿ ಸೇರ್ಪಡೆ ಹಾಗೂ ಬಿ.ಇಡಿ ಕಾಲೇಜುಗಳಿಗೆ ಹೊಸ ಶೈಕ್ಷಣಿಕ ವರ್ಷಕ್ಕೆ ವಿಶ್ವವಿದ್ಯಾಲಯದಿಂದ ಸಂಯೋಜನೆ ನೀಡಲು ಫಲಿತಾಂಶ ಬಾರದಿರುವುದು ಅಡ್ಡಿಯಾಗಿದೆ. ಸಂಯೋಜನೆ ಸಿಗದೇ ಬಿ.ಇಡಿ ಕೋರ್ಸ್‌ಗೆ ಹೊಸದಾಗಿ ದಾಖಲಾತಿ ಪ್ರಕ್ರಿಯೆಯೂ ಸಾಧ್ಯವಾಗಿಲ್ಲ.

ತಾಂತ್ರಿಕ ತೊಂದರೆ: ಉನ್ನತ ಶಿಕ್ಷಣ ಇಲಾಖೆಯ ಯುಯುಸಿಎಂಎಸ್ (University Unified collegiate administration system) ವ್ಯವಸ್ಥೆಯಡಿ ವಿಶ್ವವಿದ್ಯಾಲಯದ ಪದವಿಗಳ ಫಲಿತಾಂಶ, ರ್‍ಯಾಂಕ್ ಘೋಷಣೆ ಹಾಗೂ ಅಂಕಪಟ್ಟಿ ವಿತರಣೆ ವ್ಯವಸ್ಥೆ ಅಳವಡಿಸಲಾಗಿದೆ. ಅಂಕಗಳನ್ನು ಗ್ರೇಡ್ ವ್ಯವಸ್ಥೆಗೆ ಪರಿವರ್ತಿಸುವಲ್ಲಿ ತಂತ್ರಾಂಶದಲ್ಲಿ ಎದುರಾದ ತಾಂತ್ರಿಕ ತೊಂದರೆ ಸಮಸ್ಯೆಗೆ ಕಾರಣ ಎಂದು ವಿಶ್ವವಿದ್ಯಾಲಯದ ಮೂಲಗಳು ಹೇಳುತ್ತವೆ. ತ್ವರಿತವಾಗಿ ಫಲಿತಾಂಶ ನೀಡಬೇಕೆಂಬ ಮನವಿಗೂ ಸ್ಪಂದಿಸಿಲ್ಲ. ಜೊತೆಗೆ ಕೆಲವು ಕಾಲೇಜುಗಳ ಪ್ರಾಚಾರ್ಯರು ವಿದ್ಯಾರ್ಥಿಗಳಿಗೆ ಆಂತರಿಕ ಅಂಕ ಹಾಕಲು ವಿಳಂಬ ಮಾಡಿದ್ದು ತಪ್ಪುಗಳ ಸಮಸ್ಯೆ ಹೆಚ್ಚಲು ಕಾರಣವಾಗಿದೆ ಎಂದು ತಿಳಿದುಬಂದಿದೆ.

ಯುಯುಸಿಎಂಎಸ್ ವ್ಯವಸ್ಥೆಯಿಂದ ಬರೀ ಬಿ.ಇಡಿ ಕೋರ್ಸ್‌ನ ಪರೀಕ್ಷೆ ಫಲಿತಾಂಶಕ್ಕೆ ತೊಂದರೆ ಆಗಿಲ್ಲ, ಕುವೆಂಪು ವಿಶ್ವವಿದ್ಯಾಲಯದಲ್ಲಿ ಮೂರು ವರ್ಷಗಳ ಹಿಂದೆ ಪರೀಕ್ಷೆ ಬರೆದವರ ಫಲಿತಾಂಶವೂ ಈಚೆಗೆ ಪ್ರಕಟವಾಗಿದೆ. ಅದಕ್ಕೂ ವಿ.ವಿ. ಪರೀಕ್ಷಾಂಗ ವಿಭಾಗದಿಂದ ಸತತ ಒತ್ತಡ ಹಾಕಿ ಕೆಲಸ ಮಾಡಿಸಿಕೊಳ್ಳಲಾಗಿದೆ.

'ಪ್ರಶಿಕ್ಷಣಾರ್ಥಿಗಳು, ವಿದ್ಯಾರ್ಥಿ ಸಂಘಟನೆಯವರು ಫಲಿತಾಂಶ ಕೇಳಿಕೊಂಡು ನಮ್ಮ ಬಳಿ ಬರುತ್ತಿದ್ದಾರೆ. ಸಂಕಷ್ಟ ತೋಡಿಕೊಳ್ಳುತ್ತಿದ್ದಾರೆ. ಯುಯುಸಿಎಂಎಸ್ ವಿಭಾಗಕ್ಕೆ ಕರೆ ಮಾಡಿದರೆ ಅಲ್ಲಿ ಯಾರೂ ಸ್ವೀಕರಿಸುವುದಿಲ್ಲ. ಕುವೆಂಪು ವಿಶ್ವವಿದ್ಯಾಲಯ ಮಾತ್ರವಲ್ಲ ರಾಜ್ಯದ ಎಲ್ಲ ವಿ.ವಿಗಳ ಬಿ.ಇಡಿ ವಿದ್ಯಾರ್ಥಿಗಳಿಗೂ ಇದೇ ತೊಂದರೆ ಆಗಿದೆ' ಎಂದು ಕುವೆಂಪು ವಿ.ವಿ ಪರೀಕ್ಷಾಂಗ ವಿಭಾಗದ ಸಿಬ್ಬಂದಿಯೊಬ್ಬರು ಬೇಸರ ವ್ಯಕ್ತಪಡಿಸುತ್ತಾರೆ.

ಸುದ್ದಿ 2 ನಿಮಿಷ

ಎಸ್‌ಇಪಿ ವರದಿ ಶೀಘ್ರ ಸಲ್ಲಿಕೆ: ಸುಖ್‌ದೇವ್ ಥೋರಟ್ ಹೇಳಿಕೆ

ಬೆಂಗಳೂರು: ನೂತನ ಪಠ್ಯ ಚೌಕಟ್ಟು ಒಳಗೊಂಡ ಅಂತಿಮ ವರದಿ ಸಿದ್ಧವಾಗುತ್ತಿದ್ದು, ಶೀಘ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ರಾಜ್ಯ ಶಿಕ್ಷಣ ನೀತಿ ಆಯೋಗದ ಅಧ್ಯಕ್ಷ ಸುಖದೇವ್ ಥೋರಟ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ರಾಜ್ಯ ಉನ್ನತ ಶಿಕ್ಷಣ ಪರಿಷತ್, ರಾಜ್ಯ ಶಿಕ್ಷಣ ನೀತಿ ಆಯೋಗ ಶುಕ್ರವಾರ ಹಮ್ಮಿಕೊಂಡಿದ್ದ ಪಠ್ಯಕ್ರಮ ರಚನಾ ಕಾರ್ಯಾಗಾರದಲ್ಲಿ ಅವರು ವರ್ಚುಯಲ್ ಮೂಲಕ ಮಾತನಾಡಿದರು.

ಪಠ್ಯ ರಚನೆಯಲ್ಲಿ ಪ್ರಾಧ್ಯಾಪಕರ ಪಾತ್ರ ಮಹತ್ವದ್ದಾಗಿದೆ.



ಪ್ರಾಧ್ಯಾಪಕರು, ಶಿಕ್ಷಣ ತಜ್ಞರ ಸಲಹೆ, ಅಭಿಪ್ರಾಯ ಆಧರಿಸಿ ಅಂತಿಮ ವರದಿ ಸಿದ್ಧಪಡಿಸಲಾಗುತ್ತಿದೆ ಎಂದರು.

ರಾಜ್ಯ ಶಿಕ್ಷಣ ನೀತಿ ಆಯೋಗ ಸದಸ್ಯ ಕಾರ್ಯದರ್ಶಿ ಭಾಗ್ಯವನ್, ರಾಜ್ಯ ಶಿಕ್ಷಣ ನೀತಿ ಆಯೋಗ ಹಿಂದಿನ ಎಲ್ಲಾ ಆಯೋಗಗಳ ಶಿಫಾರಸು ಒಳಗೊಂಡಂತೆ ರಾಜ್ಯದ ಸಾಂಸ್ಕೃತಿಕ, ಭೌಗೋಳಿಕ ಐತಿಹಾಸಿಕ ಅಂಶಗಳನ್ನು ಪರಿಗಣಿಸಿ ಉತ್ತಮ ವರದಿ ಸಿದ್ಧಪಡಿಸುತ್ತಿದೆ ಎಂದು ಹೇಳಿದರು.

ಕುಲಪತಿ ಎಂ.ಎಸ್. ಜಯಕರ ಮಾತನಾಡಿ, ರಾಜ್ಯ ಶಿಕ್ಷಣ ನೀತಿ ರಾಜ್ಯದ ಶಿಕ್ಷಣ ವ್ಯವಸ್ಥೆಯ ದೀರ್ಘಾವಧಿ ಸವಾಲುಗಳನ್ನು ಪರಿಹರಿಸುವ ಉದ್ದೇಶ ಹೊಂದಿದೆ. ಶೈಕ್ಷಣಿಕ ಅಭಿವೃದ್ಧಿ ಜತೆಗೆ, ವಿಶಾಲ ಮನೋಭಾವ, ಸಮಾನ ದೃಷ್ಟಿಕೋನ ಬೆಳೆಸಲು ಒತ್ತು ನೀಡಲಾಗಿದೆ. ವಿದ್ಯಾರ್ಥಿಗಳ ಕೌಶಲ ಹೆಚ್ಚಿಸುವ ಮೂಲಕ ಉದ್ಯೋಗಾವಕಾಶ ದೊರಕಿಸುವ ವ್ಯವಸ್ಥೆ ರೂಪಿಸಲಾಗುತ್ತಿದೆ ಎಂದರು.

'ದಾರಿ ತಪ್ಪಿಸುವ ಗಿಡ' ಕೃತಿಗೆ ಪ್ರಶಸ್ತಿ

ಮಂಡ್ಯ: ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ನೀಡುವ 2023ನೇ ಸಾಲಿನ ಕಥಾ ಸಂಕಲನ ಪ್ರಶಸ್ತಿಗೆ ಚಾಮರಾಜನಗರದ ಸ್ವಾಮಿ ಪೊನ್ನಾಚಿ ಅವರ 'ದಾರಿ ತಪ್ಪಿಸುವ ಗಿಡ' ಕೃತಿ ಆಯ್ಕೆಯಾಗಿದೆ.

'ಪ್ರಶಸ್ತಿ ₹ 25 ಸಾವಿರ ನಗದು, ಫಲಕ, ಪ್ರಶಸ್ತಿ ಪತ್ರ ಒಳಗೊಂಡಿದೆ.

ಜೂನ್ 9 ರಂದು ಬೆಳಿಗ್ಗೆ 10.30ಕ್ಕೆ ನಗರದ ಅಂಬೇಡ್ಕರ್ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಲೇಖಕ ಪ್ರೊ.ಕಾಳೇಗೌಡ ನಾಗವಾರ ಪ್ರಶಸ್ತಿ ಪ್ರದಾನ ಮಾಡುವರು. ಪ್ರಶಸ್ತಿ ವಿಜೇತ ಕೃತಿ ಕುರಿತು ವಿಮರ್ಶಕಿ ಆರ್.ಸುನಂದಮ್ಮ ಮಾತನಾಡುವರು' ಎಂದು ಪ್ರತಿಷ್ಠಾನದ ಅಧ್ಯಕ್ಷೆ ಎಚ್.ಎಸ್.ಸುಜಾತಾ ಹೇಳಿದರು.

'ರಾಮಣ್ಣನವರ ಅಂಕಣ ಬರಹಗಳ 'ಒರೆಗಲ್ಲು' ಮರು ಮುದ್ರಣ ಕೃತಿ ಬಿಡುಗಡೆ ಆಗಲಿದೆ. ಚಿಂತಕ ಕೋಟಿಗಾನಹಳ್ಳಿ ರಾಮಯ್ಯ, ಪ್ರತಿಷ್ಠಾನದ ಸದಸ್ಯೆ ಡಿ.ಪಿ.ರಾಜಮ್ಮ ರಾಮಣ್ಣ ಭಾಗವಹಿಸುವರು.

ಮಳೆ: ಎಲ್ಲಿ, ಎಷ್ಟು? (ಸೆಂ.ಮೀಗಳಲ್ಲಿ)	
ಕೋಲಾರ ಜಿಲ್ಲೆ	
ಚಿನ್ನಕೋಟೆ	10.4
ಕ್ಯಾಸಂಬಳ್ಳಿ	9.3
ದೊಡ್ಡೂರು ಕರಪನಹಳ್ಳಿ	7.3
ಎನ್.ಜಿ.ಹುಲ್ಕೂರು	6.5
ಮಾವಳ್ಳಿ	6.6
ತುಮಕೂರು ಜಿಲ್ಲೆ	
ನೆಲಹಾಳ್	09
ಹೊಳವನಹಳ್ಳಿ	08
ಇರಕಸಂದ್ರ	06
ಅಂಕಸಂದ್ರ	05
ಚಿತ್ರದುರ್ಗ ಜಿಲ್ಲೆ	
ರಾಯಾಪುರ	08
ತುರವನೂರು	07
ವಿಜಯಪುರ ಜಿಲ್ಲೆ	
ವಿಜಯಪುರ ನಗರ	12
ತಾಳಿಕೋಟೆ ಪಟ್ಟಣ	11.9

ಭರಪೂರ ಮಳೆ: 19 ಕೆರೆಗಳು ಭರ್ತಿ

ಚಿಕ್ಕಮಗಳೂರಿನ ಹರಿಹರದಹಳ್ಳಿ ವ್ಯಾಪ್ತಿಯಲ್ಲಿ ಜಲಪೂರಣ • ತುಮಕೂರಿನಲ್ಲಿ ಕೋಡಿ ಹರಿದ ಕೆರೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು/ತುಮಕೂರು: ರಾಜ್ಯದಲ್ಲಿ ವರ್ಷಧಾರೆ ಮುಂದುವರಿದಿದೆ. ಕೆರೆ ಕಟ್ಟೆಗಳು ಭರ್ತಿಯಾಗಿ, ಕೃಷಿ ಚಟುವಟಿಕೆ ಚುರುಕು ಪಡೆದಿರುವಂತೆಯೇ, ಜಮೀನುಗಳು ಜಲಾವೃತವಾಗಿರುವ ಹಾಗೂ ರಸ್ತೆ ಕೊಚ್ಚಿಹೋಗಿರುವ ಘಟನೆಗಳು ವರದಿಯಾಗಿವೆ.

ಚಿಕ್ಕಮಗಳೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಶುಕ್ರವಾರ ಉತ್ತಮ ಮಳೆಯಾಗಿದೆ. ಗುರುವಾರ ರಾತ್ರಿಯೂ ಮಳೆಯಾಗಿದ್ದು, ಕೆರೆಕಟ್ಟೆಗಳು ತುಂಬಿವೆ. ಚಿಕ್ಕಮಗಳೂರು ತಾಲ್ಲೂಕಿನ ಹರಿಹರದಹಳ್ಳಿ ವ್ಯಾಪ್ತಿಯಲ್ಲಿ ಎರಡೇ ದಿನದಲ್ಲಿ 19 ಕೆರೆಗಳು ಭರ್ತಿಯಾಗಿವೆ.

ಮೂಡಿಗೆರೆ, ಕೊಟ್ಟಿಗೆಹಾರ, ಕಳಸಾಪುರ, ಚಿಕ್ಕಮಗಳೂರು ತಾಲ್ಲೂಕಿನ ಜೋಳದಾಳ ಮತ್ತು ದಾಸರಹಳ್ಳಿ ಸುತ್ತಮುತ್ತ ಉತ್ತಮ ಮಳೆಯಾಗಿದೆ. ಕಳೆದ ವರ್ಷ ಅಂತರ್ಜಲ ಕುಸಿದು ತೊಂದರೆ ಅನುಭವಿಸಿದ್ದ ಕೃಷಿಕರಿಗೆ ಸಮಾಧಾನ ತಂದಿದೆ.

ಕೋಡಿ ಹರಿದ ಕೆರೆಗಳು(ತುಮಕೂರು ವರದಿ): ಜಿಲ್ಲೆಯಾದ್ಯಂತ ವಿವಿಧೆಡೆ ಗುರುವಾರ, ಶುಕ್ರವಾರ ಉತ್ತಮ ಮಳೆಯಾಗಿದೆ. ಕೊರಟಗೆರೆ ಪಟ್ಟಣದ ಹೊರವಲಯದ ಜಂಪೇನಹಳ್ಳಿ ಕೆರೆ ಶುಕ್ರವಾರ ಬೆಳಿಗ್ಗೆ ಕೋಡಿ ಹರಿದಿದೆ. ನೋಡಲು ನೂರಾರು ಜನ ಕೆರೆ ಬಳಿ ಸೇರಿದ್ದರು. ತೋವಿನಕೆರೆ ಹೋಬಳಿ ಬುಕ್ಕಪಟ್ಟಣ ಹೊಸಕೆರೆ, ಹಳೆಕೆರೆ ಕೋಡಿ ಹರಿಯುತ್ತಿದೆ. ಕೃಷಿ ಚಟುವಟಿಕೆ ಗರಿಗೆದರಿದೆ.

ಕೋಲಾರ ವರದಿ: ಬಂಗಾರಪೇಟೆ ಹಾಗೂ ಕೆಜಿಎಫ್ ತಾಲ್ಲೂಕಿನಲ್ಲಿ ಗುರುವಾರ ರಾತ್ರಿ ಸುರಿದ ಮಳೆಯಿಂದಾಗಿ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಜನರು ಪರಿತಪಿಸಿದರು.

ದಾವಣಗೆರೆ ವರದಿ: ಜಿಲ್ಲೆಯಲ್ಲಿ ನಗರ ಹಾಗೂ ಹರಿಹರ, ಚನ್ನಗಿರಿ, ನ್ಯಾಮತಿ ಭಾಗದಲ್ಲಿ ಸಾಧಾರಣ, ಮಲೇಬೆನ್ನೂರು ಕಡೆ ಉತ್ತಮ ಮಳೆಯಾಗಿದ್ದು, ಹಳ್ಳಕೊಳ್ಳಗಳು ತುಂಬಿವೆ. ನಗರದಲ್ಲಿ ತಗ್ಗು ಪ್ರದೇಶಗಳ ನಿವಾಸಿಗಳು ಪರಿಪಾಟಲು ಮುಂದುವರಿದಿದೆ.

32 ಮನೆಗಳಿಗೆ ಹಾನಿ (ಚಿತ್ರದುರ್ಗ ವರದಿ): ಜಿಲ್ಲೆಯಾದ್ಯಂತ ಗುರುವಾರ ರಾತ್ರಿ ಉತ್ತಮ ಮಳೆಯಾಗಿದೆ. 32 ಮನೆಗಳಿಗೆ ಭಾಗಶಃ ಹಾನಿಯಾಗಿದ್ದು, ತೋಟಗಾರಿಕೆ ಬೆಳೆ ಹಾಳಾಗಿದೆ.

ಚಿತ್ರದುರ್ಗ ತಾಲ್ಲೂಕು ಬೆಳಗಟ್ಟ ಗ್ರಾಮದ ಬಳಿ ರಸ್ತೆ ಜಲಾವೃತಗೊಂಡು ಖಾಸಗಿ ಬಸ್ ನೀರಿನಲ್ಲಿ ಕೆಲ ಕಾಲ ಸಿಲುಕಿ ಆತಂಕ ಮೂಡಿತ್ತು. ತಾಲ್ಲೂಕಿನ ರಾಂಪುರ, ದೇವಸಮುದ್ರ, ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಭಾಗದಲ್ಲಿ ಉತ್ತಮ ಮಳೆಯಾಗಿದೆ.

ಮಡಿಕೇರಿಯಲ್ಲಿ ಬಿರುಸಿನ ಮಳೆ

ಮಡಿಕೇರಿ ವರದಿ: ಕೊಡಗು ಜಿಲ್ಲೆಯ ವಿವಿಧೆಡೆ ಶುಕ್ರವಾರ ಬಿರುಸಿನಿಂದ ಮಳೆ ಸುರಿಯಿತು. ವಿರಾಜಪೇಟೆ, ಕುಶಾಲನಗರ ಹಾಗೂ ನಾಪೋಕ್ಲು ಭಾಗಗಳಲ್ಲೂ ಸಾಧಾರಣ ಮಳೆಯಾಗಿದೆ.

ಸೇಡಂ: ಪೊಲೀಸ್ ಠಾಣೆಗೆ ನುಗ್ಗಿದ ಮಳೆನೀರು

ಕಲಬುರಗಿ: ಜಿಲ್ಲೆಯಲ್ಲಿ ಮಳೆಯ ಸಿಂಚನ ಮುಂದುವರಿದಿದೆ. ಸೇಡಂನಲ್ಲಿ ಸುರಿದ ಬಿರುಸಿನ ಮಳೆಗೆ, ಪೊಲೀಸ್ ಠಾಣೆಗೆ ಮಳೆ ಮತ್ತು ಚರಂಡಿ ನೀರು ನುಗ್ಗಿ ಅವಾಂತರ ಸೃಷ್ಟಿಸಿದೆ.

ಕಲಬುರಗಿ, ಕಾಳಗಿ, ಚಿಂಚೋಳಿ ತಾಲ್ಲೂಕಿನ ಸುಲೇಪೇಟ, ಚಿತ್ತಾಪುರ, ಅಫಜಲಪುರ ತಾಲ್ಲೂಕಿನ ಶುಕ್ರವಾರ ಮಳೆ ಸುರಿದಿದೆ.

ಕೊಪ್ಪಳ ತಾಲ್ಲೂಕಿನ ಗುಳದಳ್ಳಿ ವ್ಯಾಪ್ತಿಯಲ್ಲಿ 7.12 ಸೆಂ.ಮೀ ಮತ್ತು ತಾವರಗೇರಾದಲ್ಲಿ 5.60 ಸೆಂ.ಮೀ ಮಳೆಯಾಗಿದೆ.

ಯಾದಗಿರಿ ಜಿಲ್ಲೆಯ ವಿವಿಧೆಡೆ ಶುಕ್ರವಾರ ಜಿಟಿಜಿಟಿ ಮಳೆಯಾಗಿದೆ. ರಾಯಚೂರು ನಗರ, ಗ್ರಾಮೀಣ ಹಾಗೂ ಕವಿತಾಳದಲ್ಲಿ ಸಂಜೆ ಸಾಧಾರಣ ಮಳೆಯಾಗಿದೆ.

ಕೊಚ್ಚಿಹೋದ ರಸ್ತೆ, ದ್ರಾಕ್ಷಿ ಬೆಳೆ ಮುಳುಗಡೆ

ಹುಬ್ಬಳ್ಳಿ: ಉತ್ತರ ಕರ್ನಾಟಕದ ಬೆಳಗಾವಿ, ಬಳ್ಳಾರಿ, ವಿಜಯನಗರ, ಗದಗ, ವಿಜಯಪುರ ಜಿಲ್ಲೆಗಳಲ್ಲಿ ಗುರುವಾರ ರಾತ್ರಿ, ಶುಕ್ರವಾರ ಗುಡುಗು ಸಹಿತ ಧಾರಾಕಾರ ಮಳೆಯಾಗಿದೆ.

ಹಳ್ಳ, ಕೊಳ್ಳಗಳು ತುಂಬಿ ಹರಿದಿವೆ. ಮಳೆಯ ಪರಿಣಾಮ 10ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ಅನೇಕ ಮನೆಗಳ ಒಳಗೆ ಮಳೆ ನೀರು ನುಗ್ಗಿ ತೊಂದರೆಯಾಗಿದೆ.

ಉತ್ತರ ಕನ್ನಡ ಜಿಲ್ಲೆ ಗೋಕರ್ಣದಲ್ಲಿ ಮಹಾಬಲೇಶ್ವರ ದೇವಸ್ಥಾನದ ಗರ್ಭಗುಡಿಯೂ ಜಲಾವೃತವಾಗಿತ್ತು. ಭಕ್ತರಿಗೆ ಆತ್ಮಲಿಂಗದ ದರ್ಶನಕ್ಕೆ ಅವಕಾಶ ನಿಲ್ಲಿಸಲಾಗಿತ್ತು.



ವಿಜಯಪುರ ಜಿಲ್ಲೆಯ ತಿಕೋಟಾ ತಾಲ್ಲೂಕಿನ ಲೊಹಗಾಂವ ವಿಜಯಪುರ ರಸ್ತೆಯ ಸೇತುವೆಯು ಧಾರಾಕಾರ ಸುರಿದ ಮಳೆಗೆ ಕಿತ್ತು ಹೋಗಿದೆ

ವಿಜಯಪುರ ನಗರದ ವಿವಿಧೆಡೆ ತಗ್ಗುಪ್ರದೇಶಗಳಿಗೆ ನೀರು ನುಗ್ಗಿದ್ದು,ಮನೆಯಲ್ಲಿದ್ದ ದವಸ, ಧಾನ್ಯ, ಬಟ್ಟೆ ಮತ್ತಿತರ ಪರಿಕರಗಳು ನೀರಿನಲ್ಲಿ ತೊಯ್ದವು.

ತಿಕೋಟಾ ತಾಲ್ಲೂಕಿನ ಲೋಹಗಾಂವ ಗ್ರಾಮದ ವಿಜಯಪುರ ರಸ್ತೆಯ ಸೇತುವೆ ಕಿತ್ತು ಹೋಗಿದೆ. ಜಮೀನಿನ ಬದುಗಳು ತುಂಬಿವೆ. ಘೋಣಸಗಿ ಗ್ರಾಮದ ರೈತ ಮಹಾದೇವ ಶ್ಯಾಮಣ್ಣ ಪೂಜಾರಿ ಅವರ ದ್ರಾಕ್ಷಿ ಪಡದಲ್ಲಿ ಮೊಣಕಾಲವರೆಗೆ ಮಳೆ ನೀರು ತುಂಬಿತ್ತು.

ಧಾರವಾಡ ಜಿಲ್ಲೆಯಲ್ಲಿ ಹದವಾದ ಮಳೆಯಾಗಿದೆ. ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದೆ. ಬಳ್ಳಾರಿಯಲ್ಲೂ ಗುಡುಗು ಸಹಿತ ಮಳೆಯಾಗಿದೆ.

ಬೆಳಗಾವಿ ನಗರ ಹಾಗೂ ತಾಲ್ಲೂಕಿನ ವಿವಿಧೆಡೆ ಶುಕ್ರವಾರ ಸಂಜೆ ಧಾರಾಕಾರ ಮಳೆ ಸುರಿಯಿತು. ಬೆಳಗಾವಿ ನಗರ, ಬೈಲಹೊಂಗಲದಲ್ಲಿ ತಲಾ ಒಂದು ಮರ ಉರುಳಿದೆ.

ಆಲಮಟ್ಟಿ ಜಲಾಶಯ: ಒಳಹರಿವು ಆರಂಭ

ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯಕ್ಕೆ ಒಳಹರಿವು ಆರಂಭವಾಗಿದೆ. ಶುಕ್ರವಾರ 1,768 ಕ್ಯೂಸೆಕ್ ನೀರು ಹರಿದು ಬಂದಿದೆ. ನದಿ ಪಾತ್ರದ ಜನರ ಸಂತಸಕ್ಕೆ ಕಾರಣವಾಗಿದೆ.

'ಆಲಮಟ್ಟಿ ಹಿನ್ನೀರಿನ ಕೃಷ್ಣಾ ಅಚ್ಚುಕಟ್ಟು ಪ್ರದೇಶದಲ್ಲಿ ಮಳೆ ಬರುತ್ತಿರುವ ಕಾರಣ ಈಗ ಒಳಹರಿವು ಬರುತ್ತಿದೆ' ಎಂದು ಕೆಬಿಜೆಎನ್‌ಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನಾಲ್ಕು ತಾಸು ಭವಾನಿ ವಿಚಾರಣೆ

ಒಂದನೇ ಪುಟದಿಂದ...

'ಮಹಿಳೆ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ಹಲವು ಪ್ರಶ್ನೆ ಕೇಳಿದರು. ಯಾರನ್ನೂ ನಾವು ಅಪಹರಿಸಿಲ್ಲ. ನಮ್ಮ ಕುಟುಂಬದ ವಿರುದ್ಧ ಷಡ್ಯಂತ್ರ ನಡೆಸಲಾಗಿದೆ' ಎಂದಷ್ಟೇ ಉತ್ತರಿಸಿದರು ಎಂದು ಗೊತ್ತಾಗಿದೆ.

'ಭವಾನಿ ಅವರ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಮತ್ತೆ ವಿಚಾರಣೆಗೆ ಬರುವಂತೆ ಸೂಚಿಸಲಾಗಿದ್ದು ಸಮ್ಮತಿ ನೀಡಿದ್ದಾರೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಪ್ರಜ್ವಲ್ ಕಚೇರಿಯ ಸೆಲ್‌ನಲ್ಲಿಯೇ ಇದ್ದರೂ ಪುತ್ರನನ್ನು ಮಾತನಾಡಿಸಲು ಸಾಧ್ಯವಾಗದೇ ಭವಾನಿ ತೆರಳಿದರು ಎಂದು ಮೂಲಗಳು ಹೇಳಿವೆ.

'ಹಾಸನಕ್ಕೆ ಹೋಗುವಂತಿಲ್ಲ'

ಬೆಂಗಳೂರು: ಕೆ.ಆರ್.ನಗರ ತಾಲ್ಲೂಕು ಮತ್ತು ಹಾಸನ ಜಿಲ್ಲೆ ಪ್ರವೇಶಿಸುವಂತಿಲ್ಲ ಎಂಬ ಷರತ್ತಿನೊಂದಿಗೆ ಭವಾನಿ ರೇವಣ್ಣ ಅವರಿಗೆ ಹೈಕೋರ್ಟ್, ಮಧ್ಯಂತರ ನಿರೀಕ್ಷಣಾ ಜಾಮೀನು ನೀಡಿದೆ.

ಭವಾನಿ ರೇವಣ್ಣ ವಿರುದ್ಧ ಇದ್ದ ವಾರಂಟ್ ಅನ್ನು ಅಮಾನತಿನಲ್ಲಿ ಇರಿಸಿದ ನ್ಯಾಯಪೀಠವು, 'ಭವಾನಿ ಅವರನ್ನು ಎಸ್‌ಐಟಿ ಬಂಧಿಸಬಾರದು ಅಥವಾ ವಶಕ್ಕೆ ಪಡೆಯಬಾರದು' ಎಂದು ಆದೇಶಿಸಿತು.

ಷರತ್ತುಗಳು: 'ಭವಾನಿ ತನಿಖೆಗೆ ಸಹಕರಿಸಬೇಕು. ಸಂಜೆ 5ರ ನಂತರ ಅವರನ್ನು ವಿಚಾರಣೆಗೆ ಇರಿಸಿಕೊಳ್ಳುವಂತಿಲ್ಲ. ಭವಾನಿ ಅವರಿಗೆ ಕೋರ್ಟ್ ಪಾರಿತೋಷಕ ಕೊಡುತ್ತಿಲ್ಲ. ಹೀಗಾಗಿ, ಈ ಮಧ್ಯಂತರ ಜಾಮೀನು ದೊರೆತಿದೆ ಎಂದು ಅರ್ಜಿದಾರರಾಗಲೀ ಅಥವಾ ಅವರ ಬೆಂಬಲಿಗರಾಗಲೀ ಯಾವುದೇ ಸಂಭ್ರಮಾಚರಣೆ ಮಾಡುವಂತಿಲ್ಲ' ಎಂಬ ಷರತ್ತು ವಿಧಿಸಿತು. 'ಇಂತಹ ಪ್ರಕರಣಗಳಲ್ಲಿ ಸಾಮಾನ್ಯವಾಗಿ ವಿಧಿಸುವ ಷರತ್ತುಗಳು ಈ ಪ್ರಕರಣಕ್ಕೂ ಅನ್ವಯಿಸುತ್ತವೆ ಎಂದು ನಿರೀಕ್ಷಣಾ ಜಾಮೀನು ಮಂಜೂರು ಮಾಡಿತು.

17 ಜಿಲ್ಲೆಗೆ ಮಳೆ 'ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಶನಿವಾರ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಐದು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಹಾಗೂ ಹನ್ನೆರಡು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಬೆಳಗಾವಿ, ಧಾರವಾಡ, ಹಾವೇರಿ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಅತಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಕಲಬುರಗಿ, ವಿಜಯಪುರ, ಬಾಗಲಕೋಟೆ, ಕೊಪ್ಪಳ, ಗದಗ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದ್ದು, ಈ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಕೆಲವೆಡೆ 30ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಚಂಡಮಾರುತದ ವಾತಾವರಣವು ಕರಾವಳಿ ಉದ್ದಕ್ಕೂ ಮೇಲುಗೈ ಸಾಧಿಸಿದ್ದು, ಗಾಳಿಯು 45ರಿಂದ 65 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯ ಬಾರದು ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಂಭವವಿದೆ.

ತಾಳಿಕೋಟೆಯಲ್ಲಿ 12 ಸೆಂ.ಮೀ. ಮಳೆ

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ದಕ್ಷಿಣ ಒಳನಾಡಿನ ಬಹುತೇಕ ಕಡೆ, ಕರಾವಳಿ ಮತ್ತು ಉತ್ತರ ಒಳನಾಡಿನ ಹಲವು ಕಡೆ ಮಳೆಯಾಗಿದೆ. ತಾಳಿಕೋಟೆಯಲ್ಲಿ 12 ಸೆಂ.ಮೀ. ಮಳೆ ಸುರಿದಿದೆ. ಮೈಸೂರಿನ ಎಚ್.ಡಿ.ಕೋಟೆಯಲ್ಲಿ 10 ಸೆಂ.ಮೀ., ಗೋಕಾಕ, ಬೈಲಹೊಂಗಲ, ಬಾಗಲಕೋಟೆಯ ಬಾದಾಮಿ, ಶಿವಮೊಗ್ಗದ ಸುತ್ತಮುತ್ತ ಹಾಗೂ ಆಗುಂಬೆಯಲ್ಲಿ ತಲಾ 9 ಸೆಂ.ಮೀ. ಮಳೆಯಾಗಿದೆ.

ಉತ್ತರ ಕನ್ನಡದ ಮಂಕಿ, ಬೆಳಗಾವಿಯ ಯಾದವಾಡ, ಚಿಕ್ಕಬಳ್ಳಾಪುರದ ಚಿಂತಾಮಣಿ ಹಾಗೂ ಚಿತ್ರದುರ್ಗದ ನಾಯಕನಹಟ್ಟಿಯಲ್ಲಿ ತಲಾ 7 ಸೆಂ.ಮೀ. ಮಳೆ ಸುರಿದಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕೆಲವೊಮ್ಮೆ ಬಿರುಗಾಳಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಇದೇ 11ರವರೆಗೂ ರಾಜ್ಯದ ಕರಾವಳಿಯ ಹಲವೆಡೆ, ಒಳನಾಡಿನ ಕೆಲವೆಡೆ ಭಾರಿ ಮಳೆಯಾಗುವ ಮುನ್ಸೂಚನೆಯನ್ನು ಇಲಾಖೆ ನೀಡಿದೆ.

ಆಡಿಯೊದಲ್ಲಿರುವ ಧ್ವನಿ ನನ್ನದಲ್ಲ: ಸಿದ್ದೇಶ್ವರ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಚುನಾವಣಾ ಫಲಿತಾಂಶ ಮತ್ತು ಹಣದ ಹಂಚಿಕೆಗೆ ಸಂಬಂಧಿಸಿದಂತೆ ಹರಿದಾಡಿರುವ ಆಡಿಯೊದಲ್ಲಿರುವ ಧ್ವನಿ ನನ್ನದಲ್ಲ. ವಿರೋಧಿಗಳು ನಮ್ಮ ಚಾರಿತ್ರ್ಯವಧೆ ಮಾಡುವ ಉದ್ದೇಶದಿಂದ ನಕಲಿ ಆಡಿಯೊ ಸೃಷ್ಟಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿದ್ದಾರೆ' ಎಂದು ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ.

'ಆಡಿಯೊದಲ್ಲಿರುವಂತೆ ನಾನು ಹಾಗೂ ನನ್ನ ಪುತ್ರ ಜಿ.ಎಸ್. ಅನಿತ್‌ಕುಮಾರ್ ಅವರು ಮಾತನಾಡಿದ್ದೇವೆ ಎನ್ನುವುದೆಲ್ಲ ಸುಳ್ಳು. ನಾನಾಗಲಿ, ನನ್ನ ಪುತ್ರನಾಗಲಿ ಯಾರೊಂದಿಗೂ ಈ ಕುರಿತು ಮಾತನಾಡಿಲ್ಲ. ಚುನಾವಣೆಗೆ ಪಾರ್ಟಿ ಫಂಡ್ ಬಂದಿಲ್ಲ ಎಂಬ ಹೇಳಿಕೆಯನ್ನು ಸೃಷ್ಟಿಸಿ ನಮ್ಮ ಹೆಸರು ಕೆಡಿಸಲು ಈ ರೀತಿ ಸತ್ಯಕ್ಕೆ ದೂರವಾದ ಅಂಶಗಳನ್ನು ಹರಿಬಿಡಲಾಗಿದೆ' ಎಂದು ಅವರು 'ಪ್ರಜಾವಾಣಿ'ಗೆ ಹೇಳಿದ್ದಾರೆ.

'ಮತದಾರರಿಗೆ ₹ 300ಕ್ಕೆ ಬದಲಾಗಿ ₹ 500 ಕೊಟ್ಟಿದ್ರೆ ಗೆಲ್ಲುತ್ತಿದ್ರಿ' ಎಂದು ಕಾರ್ಯಕರ್ತರೊಬ್ಬರು ಸಿದ್ದೇಶ್ವರ ಜೊತೆಗೆ ನಡೆಸಿದ ಸಂಭಾಷಣೆಯ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದ ಕುರಿತ ಸುದ್ದಿಗೆ ಈ ಪ್ರತಿಕ್ರಿಯೆ ನೀಡಿದ್ದಾರೆ.

ಕಣ್ಣೀರು ಸುರಿಸುತ್ತಲೇ ಮೃತದೇಹ ಪಡೆದರು

ಬೆಂಗಳೂರು: ಉತ್ತರಾಖಂಡದ ಸಹಸ್ರ ತಾಲ್‌ಗೆ ಚಾರಣಕ್ಕೆ ತೆರಳಿ, ಹವಾಮಾನ ವೈಪರೀತ್ಯದಿಂದ ಅಪಾಯಕ್ಕೆ ಸಿಲುಕಿ ಮೃತಪಟ್ಟ ಒಂಬತ್ತು ಮಂದಿಯ ಮೃತದೇಹಗಳನ್ನು ವಿಮಾನದ ಮೂಲಕ ಬೆಂಗಳೂರಿಗೆ ತಂದು ಕುಟುಂಬಸ್ಥರಿಗೆ ಶುಕ್ರವಾರ ಹಸ್ತಾಂತರಿಸಲಾಯಿತು. ಮೃತದೇಹ ಹಸ್ತಾಂತರ ಮಾಡುತ್ತಿದ್ದಂತೆ ಸಂಬಂಧಿಕರು ಕಣ್ಣೀರು ಹಾಕಿದರು. ಸ್ಥಳದಲ್ಲಿದ್ದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಪಾರ್ಥಿವ ಶರೀರಗಳಿಗೆ ಅಂತಿಮ ನಮನ ಸಲ್ಲಿಸಿದರು.

ಪದ್ಮಿನಿ ಹೆಗಡೆ, ವೆಂಕಟೇಶ್ ಪ್ರಸಾದ್, ಆಶಾ ಸುಧಾಕರ್, ಪದ್ಮನಾಭ ಕುಂದಾಪುರ ಕೃಷ್ಣಮೂರ್ತಿ, ಸಿಂಧು ವಕೆಲಂ, ವಿನಾಯಕ್ ಮುಂಗುರವಾಡಿ, ಸುಜಾತಾ ಮುಂಗುರವಾಡಿ, ಚಿತ್ರಾ ಪ್ರಣೀತ್, ಅನಿತಾ ರಂಗಪ್ಪ ಅವರು ದುರಂತದಲ್ಲಿ ಮೃತಪಟ್ಟಿದ್ದರು. ಮೃತದೇಹ ಪಡೆದ ಸಂಬಂಧಿಕರು ವಿವಿಧ ರುದ್ರಭೂಮಿಗಳಲ್ಲಿ ಅಂತ್ಯಸಂಸ್ಕಾರ ನೆರವೇರಿಸಿದರು ಎಂದು ಮೂಲಗಳು ತಿಳಿಸಿವೆ.

ಮೃತದೇಹಗಳನ್ನು ಉತ್ತರಕಾಶಿಯಿಂದ ನೇರವಾಗಿ ಬೆಂಗಳೂರಿಗೆ ತರಲು ಸಾಧ್ಯವಾಗಿರಲಿಲ್ಲ. ಆಂಬುಲೆನ್ಸ್‌ಗಳಲ್ಲಿ ರಸ್ತೆಮಾರ್ಗದ ಮೂಲಕ ಮೃತದೇಹಗಳನ್ನು ದೆಹಲಿಗೆ ಕೊಂಡೊಯ್ದು ಅಲ್ಲಿಂದ ಮೂರು ಪ್ರತ್ಯೇಕ ವಿಮಾನಗಳಲ್ಲಿ ದೇವನಹಳ್ಳಿಯ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ತರಲಾಯಿತು.



ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತರಲಾದ ಮೃತದೇಹಗಳನ್ನು ಸಂಬಂಧಿಕರಿಗೆ ಹಸ್ತಾಂತರ ಮಾಡಲಾಯಿತು.

'ಮೃತದೇಹಗಳೊಂದಿಗೆ 36 ಗಂಟೆ ಕಳೆದರು'

ಬೆಂಗಳೂರು (ಪಿಟಿಐ): ಉತ್ತರಾಖಂಡದ ಸಹಸ್ರ ಸರೋವರಕ್ಕೆ ಚಾರಣಕ್ಕೆ ತೆರಳಿ ತೀವ್ರ ಹಿಮಗಾಳಿಗೆ ಸಿಲುಕಿ ಮೃತರಾದ ರಾಜ್ಯದ 9 ಮಂದಿಯ ಮೃತದೇಹಗಳೊಂದಿಗೆ ಅವರ ಸ್ನೇಹಿತರು 36 ಗಂಟೆ ಕಳೆದಿದ್ದರು ಎಂದು ಕರ್ನಾಟಕ ಪರ್ವತಾರೋಹಿಗಳ ಸಂಘಟನೆಯ (ಕೆಎಂಎ) ಎಸ್.ಶ್ರೀವತ್ಸ ಹೇಳಿದರು.

'ಚಾರಣ ತಂಡದಲ್ಲಿದ್ದ ಪ್ರತಿಯೊಬ್ಬರನ್ನೂ ನಾನು ಬಲ್ಲೆ. ಎಲ್ಲರೂ ಕೆಎಂಎ ಸದಸ್ಯರು. ನಾನು ಅವರೊಂದಿಗೆ ಅನೇಕ ಚಾರಣಗಳಲ್ಲಿ ಭಾಗವಹಿಸಿದ್ದೆ. ಆದರೆ, ಈ ಬಾರಿ ನಾನು ನೇಪಾಳದಲ್ಲಿದ್ದೆ. ದುರ್ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆಯೇ ನಾನು ಡೆಹ್ರಾಡೂನ್‌ಗೆ ಹೋದೆ' ಎಂದು ಹೇಳಿದರು.

ತಾವು ದುರಂತದಲ್ಲಿ ಬದುಕುಳಿದವರನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿದಾಗ ಅವರ ಪರಿಸ್ಥಿತಿ ಹೇಗಿತ್ತು ಎನ್ನುವುದನ್ನು ಶ್ರೀವತ್ಸ ನೆನಪಿಸಿಕೊಂಡರು.

'ಅವರು ಆಘಾತಗೊಂಡಿದ್ದರು, ಜರ್ಜರಿತರಾಗಿದ್ದರು. ಅವರಲ್ಲಿ ಕೆಲವರು ತಮ್ಮ ಸ್ನೇಹಿತರ ಮೃತದೇಹಗಳೊಂದಿಗೆ 36 ಗಂಟೆ ಕಳೆದಿದ್ದರು'ಎಂದು ವಿವರಿಸಿದರು. 'ಅವರೆಲ್ಲ ಉತ್ತಮ ತರಬೇತಿ ಪಡೆದಿರುವ, ಅನುಭವಿ ಚಾರಣಿಗರು. ಜತೆಗೆ ಅದು ಕಡಿದಾದ ಹಾದಿಯೇನಲ್ಲ. ಸಾಮಾನ್ಯರು ಕೂಡ ಕ್ರಮಿಸಬಹುದಾದ ಮಾರ್ಗ. ಆದರೆ, ಕೇವಲ ಕೆಟ್ಟ ಹವಾಮಾನದಿಂದಾಗಿ ಈ ದುರ್ಘಟನೆ ಸಂಭವಿಸಿದೆ' ಎಂದು ತಿಳಿಸಿದರು.

ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗಿ ಯು. ನಿಸಾರ್ ಅಹ್ಮದ್

ಬೆಂಗಳೂರು: ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರನ್ನಾಗಿ ನಿವೃತ್ತ ಐಪಿಎಸ್ ಅಧಿಕಾರಿ ಯು. ನಿಸಾರ್ ಅಹ್ಮದ್ ಅವರನ್ನು ನೇಮಿಸಿ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ. ಬಳ್ಳಾರಿ ನಗರದವರಾದ ನಿಸಾರ್ ಅಹ್ಮದ್ ಅವರು ಐಜಿಪಿಯಾಗಿ 2012ರಲ್ಲಿ ನಿವೃತ್ತರಾಗಿದ್ದರು. ಅಬ್ದುಲ್ ಅಜೀಂ ಅವರನ್ನು ಆಯೋಗದ ಅಧ್ಯಕ್ಷರ ಸ್ಥಾನದಿಂದ ವಜಾಗೊಳಿಸಿ ಇತ್ತೀಚೆಗೆ ಆದೇಶ ಹೊರಡಿಸಲಾಗಿತ್ತು. ತೆರವಾದ ಸ್ಥಾನಕ್ಕೆ ನಿಸಾರ್ ಅಹ್ಮದ್ ಅವರನ್ನು ನೇಮಿಸಲಾಗಿದೆ.



ಯು. ನಿಸಾರ್ ಅಹ್ಮದ್

ಮಂಜುನಾಥ್ ಪ್ರಸಾದ್ ವರ್ಗಾವಣೆ

ಬೆಂಗಳೂರು: ಸಹಕಾರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್ ಅವರನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿ ಆದೇಶ ಹೊರಡಿಸಲಾಗಿದೆ.

ಅಲ್ಲದೇ, ಕ್ರೀಡೆ, ಯುವ ಸಬಲೀಕರಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹೆಚ್ಚುವರಿಯನ್ನಾಗಿ ನೀಡಲಾಗಿದೆ.

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಕಾರ್ಯದರ್ಶಿ ಅಜಯ್ ನಾಗಭೂಷಣ್ ಅವರಿಗೆ ಸಹಕಾರ ಇಲಾಖೆಯ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಇಬ್ಬರು ಶಾಸಕರ ಬಗ್ಗೆಯೂ ಸತೀಶ ಜಾರಕಿಹೊಳಿ ಅಸಮಾಧಾನ

ಗೋಪ್ಯ ಸಭೆ ನಡೆಸಿದ ಸವದಿ– ತಮ್ಮಣ್ಣವರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಕೆಂಗಣ್ಣಿಗೆ ಗುರಿಯಾಗಿರುವ ಅಥಣಿ ಶಾಸಕ ಲಕ್ಷ್ಮಣ ಸವದಿ ಹಾಗೂ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಶುಕ್ರವಾರ ಗೋಪ್ಯ ಮಾತುಕತೆ ನಡೆಸಿದರು.

ಅಥಣಿಯಲ್ಲಿರುವ ಶಾಸಕ ಸವದಿ ಅವರ ಮನೆಗೆ ಮಹೇಂದ್ರ ತಮ್ಮಣ್ಣವರ ಭೇಟಿ ನೀಡಿದ್ದರು. ಬಿಜೆಪಿಯಲ್ಲಿದ್ದ ಇಬ್ಬರೂ ಕಾಂಗ್ರೆಸ್ ಸೇರಿದ ಬಳಿಕ ಶಾಸಕರಾದವರು. ಆದರೆ, ಈ ಭೇಟಿಯ ಉದ್ದೇಶ ಹಾಗೂ ಚರ್ಚೆಯ ವಿಷಯಗಳನ್ನು ಇಬ್ಬರೂ ಬಹಿರಂಗ ಪಡಿಸಲಿಲ್ಲ.

'ಲೋಕಸಭೆ ಚುನಾವಣೆಯಲ್ಲಿ ಅಥಣಿ ಮತ್ತು ಕುಡಚಿ ಕ್ಷೇತ್ರಗಳಲ್ಲಿ ಕಡಿಮೆ ಮತಗಳು ಬಂದಿವೆ. ಅಲ್ಲಿನ ಶಾಸಕರು ಪಕ್ಷದ ಪರ ನಡೆದುಕೊಂಡಿಲ್ಲ' ಎಂದು ಸತೀಶ ಜಾರಕಿಹೊಳಿ ಆರೋಪಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಸವದಿ, 'ಸತೀಶ ಅವರ ಆರೋಪಗಳಿಗೆ ನಂತರ ಉತ್ತರಿಸುವೆ' ಎಂದರು.

ಹತ್ತಿರವಾಗುವ ಅವಕಾಶ ಕಳಕೊಂಡಿದ್ದಾರೆ: 'ಶಾಸಕ ಲಕ್ಷ್ಮಣ ಸವದಿ ಮತ್ತು ನಾವು ಹತ್ತಿರವಾಗಲು ಚುನಾವಣೆಯಲ್ಲಿ ಅವಕಾಶವಿತ್ತು. ಅದನ್ನೂ ಕಳೆದುಕೊಂಡಿದ್ದಾರೆ. ಅವರ ತಪ್ಪನ್ನು ಜನರ ಮುಂದಿಡುವೆ' ಎಂದು ಸತೀಶ ಜಾರಕಿಹೊಳಿ ತಿಳಿಸಿದರು.

'ಲಕ್ಷ್ಮಣ ಸವದಿ ಅವರು ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ್ದಾಗ 76 ಸಾವಿರ ಮತಗಳ ಮುನ್ನಡೆ ಪಡೆದಿದ್ದರು. ಆದರೆ, ಈಗ ಏಕೆ ಉಲ್ಟಾ ಆಗಿದೆ. ಇದನ್ನು ನೋಡಿದರೆ ಯಾರಿಗಾದರೂ ಅರ್ಥ ಆಗುತ್ತದೆ ಅಲ್ಲವೇ' ಎಂದರು.

'ಇಬ್ಬರೂ ಶಾಸಕರು ಒಂದಾಗಿ ಬಿಜೆಪಿಗೆ ಹೋಗುತ್ತಾರೋ, ಬಿಡುತ್ತಾರೋ ಗೊತ್ತಿಲ್ಲ. ಅವರನ್ನೇ ಕೇಳಿ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಅಭ್ಯರ್ಥಿ, ಪ್ರಚಾರಕರು, ಬೆಂಬಲಿಗರು ಎಲ್ಲ ಕೆಲಸ ಮಾಡಿದರೆ ಗೆಲುವಾಗುತ್ತದೆ. ಪೂಜೆ ಮಾಡಿಸಿದರೆ ಅಲ್ಲ' ಎಂದೂ ಪರೋಕ್ಷವಾಗಿ ಮೃಣಾಲ್ ಹೆಬ್ಬಾಳಕರ ಸೋಲಿನ ಕುರಿತು ಪ್ರತಿಕ್ರಿಯಿಸಿದರು. 'ನಿರ್ದೇಶಕ, ನಿರ್ಮಾಪಕ, ನಟ ಸರಿ ಇದ್ದರೆ ಚಿತ್ರ ಗೆಲ್ಲುತ್ತದೆ ಎಂದು ಹೇಳಿದ್ದೆ. ಇದರಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಕುರಿತು ಯಾವ ಮಾತೂ ಹೇಳಿಲ್ಲ' ಎಂದು ಹೇಳಿದರು.

'ಮಾನಸಿಕ ಆಸ್ಪತ್ರೆಗೆ ಸೇರಿಸಬೇಕು'

ಬೆಂಗಳೂರು: 'ಅವರನ್ನು ಮಾನಸಿಕ ಆಸ್ಪತ್ರೆಗೆ ಸೇರಿಸಬೇಕು. ಆಮೇಲೆ ನೋಡೋಣ' ಎಂದು ಲೋಕಸಭಾ ಚುನಾವಣೆಯಲ್ಲಿ ಹಿನ್ನಡೆ ಕುರಿತು ಸಚಿವ ಸತೀಶ ಜಾರಕಿಹೊಳಿ ಹೇಳಿಕೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಶುಕ್ರವಾರ ರೇಗಿದರು. ಫಲಿತಾಂಶದ ಕುರಿತು ಮಾತನಾಡಿದ ಅವರು, 'ನಿರ್ಮಾಪಕರು ಮತ್ತು ನಿರ್ದೇಶಕರು ವಿಫಲವಾಗಿದ್ದರಿಂದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹಿನ್ನಡೆಯಾಗಿದೆ ಎಂಬ ಜಾರಕಿಹೊಳಿ (ಸತೀಶ ಹೆಸರು ಉಲ್ಲೇಖಿಸದೆ) ಹೇಳಿದ್ದಾರಲ್ಲಾ' ಎಂದಾಗ, ಸಿಟ್ಟಿನಿಂದ ಉತ್ತರಿಸಿದರು.

ಮೊದಲ ದಿನದ ಮೇಳದಲ್ಲಿ 13,238 ಅಭ್ಯರ್ಥಿಗಳು, 258 ಕಂಪನಿಗಳು ಭಾಗಿ

ಉದ್ಯೋಗದ ಆಸೆ; 'ಪ್ರಗತಿ'ಯ ಭರವಸೆ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಯುವಜನರಲ್ಲಿ ಉದ್ಯೋಗದ ನಿರೀಕ್ಷೆ, ಎಲ್ಲರ ಕಂಗಳಲ್ಲೂ ಭರವಸೆಯ ಬೆಳಕು. ಕಂಪನಿಗಳಿಂದ ನೇಮಕಾತಿ ಪತ್ರ ಪಡೆದು ಹೊರಗೆ ಬಂದವರ ಮುಖದಲ್ಲಿ ಮಂದಹಾಸ, ಬದುಕು ಕಟ್ಟಿಕೊಳ್ಳುವ ಕನಸು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಇಲ್ಲಿನ ವಿದ್ಯಾಗಿರಿಯಲ್ಲಿ ಆಯೋಜಿಸಿರುವ 'ಆಳ್ವಾಸ್ ಪ್ರಗತಿ' ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿದ್ದ ರಾಜ್ಯ-ನೆರೆರಾಜ್ಯಗಳ ಅಸಂಖ್ಯ ಉದ್ಯೋಗಾರ್ಥಿಗಳ ಪೈಕಿ ಹಲವರು ಮೊದಲ ದಿನವೇ ಉದ್ಯೋಗ ಗಳಿಸಿದ ಖುಷಿಯೊಂದಿಗೆ ಮರಳಿದ್ದಾರೆ.

ಶುಕ್ರವಾರ ಬೆಳಿಗ್ಗೆ ಮೇಳದ ಉದ್ಘಾಟನೆಗೆ ವೇದಿಕೆ ಸಜ್ಜಾಗುತ್ತಿದ್ದಂತೆ ಮಳೆ ಆರಂಭವಾಯಿತು. ಕೆಲವರು ಛತ್ರಿ ಹಿಡಿದು, ಹೆಚ್ಚಿನವರು ನೆನೆಯುತ್ತಲೇ ವಿದ್ಯಾಗಿರಿಯತ್ತ ಧಾವಿಸಿದರು. ಮೇಳಕ್ಕೆ 17,325 ಮಂದಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಸಿಕೊಂಡಿದ್ದು 1,573 ಮಂದಿ ಶುಕ್ರವಾರ ಸ್ಥಳದಲ್ಲೇ ನೋಂದಣಿ ಮಾಡಿಕೊಂಡಿದ್ದರು. 258 ಕಂಪನಿಗಳು ಪಾಲ್ಗೊಂಡಿವೆ. ಮೊದಲ ದಿನ ಒಟ್ಟಾರೆ 13,238 ಉದ್ಯೋಗಾರ್ಥಿಗಳು ಪಾಲ್ಗೊಂಡಿದ್ದರು.

> **ಉದ್ಯೋಗ ಮೇಳಕ್ಕೆ ಹೋಗುವುದನ್ನು ಯುವಜನರು ಫ್ಯಾಷನ್ ಮಾಡಿಕೊಳ್ಳಬಾರದು. ಅದು ಅವರಿಗೆ ಪ್ಯಾಷನ್ ಆಗಬೇಕು.**
> **ಮೋಹನ ಆಳ್ವ,** ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ

ಹೊರರಾಜ್ಯ ಮತ್ತು ಹೊರ ಜಿಲ್ಲೆಗಳಿಂದ ಬಂದಿರುವ 1,633 ಮಂದಿಗೆ ಆಳ್ವಾಸ್ ಕ್ಯಾಂಪಸ್‌ನಲ್ಲಿ ಉಚಿತ ವಾಸ್ತವ್ಯದ ವ್ಯವಸ್ಥೆ ಮಾಡಲಾಗಿದೆ.



ಭಾರಿ ಮಳೆಯ ನಡುವೆ 'ಆಳ್ವಾಸ್ ಪ್ರಗತಿ' ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲು ಬಂದ ಉದ್ಯೋಗಾಕಾಂಕ್ಷಿಗಳು ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ಉದ್ಯೋಗ ಅರಸಿ ಬಂದವರಿಗೆ ಊಟ, ತಿಂಡಿ, ಚಹಾ ಸೌಲಭ್ಯ ಕಲ್ಪಿಸಲಾಗಿದೆ.

ಏಳು ಬಣ್ಣಗಳಲ್ಲಿ ವರ್ಗೀಕರಣ

ನೋಂದಣಿ ಮಾಡಿಸಿಕೊಂಡವರನ್ನು ಶೈಕ್ಷಣಿಕ ಅರ್ಹತೆ ಆಧರಿಸಿ ಏಳು ಬಣ್ಣಗಳಿಂದ ವರ್ಗೀಕರಿಸಲಾಗುತ್ತದೆ. ಎಸ್‌ಎಸ್‌ಎಲ್‌ಸಿ ಆದವರನ್ನು ಕೆಂಪು ಬಣ್ಣದಿಂದ, ಐಟಿಐ ಮಾಡಿದವರನ್ನು ಕಿತ್ತಳೆ ಬಣ್ಣದಿಂದ, ಡಿಪ್ಲೊಮಾ ಆದವರನ್ನು ಗುಲಾಬಿ ಬಣ್ಣದಿಂದ, ಪದವಿ ಪೂರೈಸಿದವರನ್ನು ಹಸಿರು ಬಣ್ಣದಿಂದ, ಬಿಟೆಕ್ ಮತ್ತು ಬಿಇ ಮಾಡಿದವರನ್ನು ನೀಲಿ ಬಣ್ಣದಿಂದ, ನರ್ಸಿಂಗ್, ವೈದ್ಯಕೀಯ ಮತ್ತು ಪ್ಯಾರಾ ಮೆಡಿಕಲ್ ಓದಿದವರನ್ನು ಬಿಳಿ ಬಣ್ಣದಿಂದ, ಸ್ನಾತಕೋತ್ತರ ಪದವೀಧರರನ್ನು ಹಳದಿ ಬಣ್ಣದಿಂದ ಗುರುತಿಸುವಂತೆ ವ್ಯವಸ್ಥೆ ಮಾಡಲಾಗಿತ್ತು. ಕಂಪನಿಗಳನ್ನು ವಲಯಗಳ ಆಧಾರದಲ್ಲಿ ವಿಂಗಡಿಸಲಾಗಿತ್ತು.

ಯಾವ ಕಂಪನಿಯಲ್ಲಿ, ಎಷ್ಟು ಹುದ್ದೆಗಳು ಖಾಲಿ ಇವೆ ಎಂಬ ಮಾಹಿತಿ ಸೇರಿದಂತೆ ಉದ್ಯೋಗಾಕಾಂಕ್ಷಿಗಳಿಗೆ ಎಲ್ಲ ಮಾಹಿತಿಯನ್ನು ಆಗಾಗ ಉದ್ಘೋಷದ ಮೂಲಕ ತಿಳಿಸಲಾಗುತ್ತಿತ್ತು. ಕೇರಳ, ಗೋವಾ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದಿಂದಲೂ ಅಭ್ಯರ್ಥಿಗಳು ಪಾಲ್ಗೊಂಡಿದ್ದಾರೆ. ಜೂನ್ 8ರಂದೂ ಮೇಳ ನಡೆಯಲಿದೆ.

ಫಲಿತಾಂಶದಲ್ಲಿನ ದೋಷಗಳ ಕುರಿತು ಆಕಾಂಕ್ಷಿಗಳ ಅಸಮಾಧಾನ • ತನಿಖೆಗೆ ಅಭ್ಯರ್ಥಿಗಳ ಆಗ್ರಹ

ಗೊಂದಲದ ಗೂಡಾದ 'ನೀಟ್'

• ಸಂಪತ್ ಎಸ್.

ಬೆಂಗಳೂರು: ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಈ ವರ್ಷದ ನಡೆದಿದ್ದ ನೀಟ್ (ಯುಜಿ) ಪರೀಕ್ಷೆ, ಫಲಿತಾಂಶದಲ್ಲಿನ ದೋಷಗಳ ಕುರಿತು ಅಭ್ಯರ್ಥಿಗಳು ಮತ್ತು ಅವರ ಪೋಷಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಮರು ಪರೀಕ್ಷೆಗೆ ಆಗ್ರಹಿಸಿದ್ದಾರೆ. ಅಲ್ಲದೆ ಈ ಬಾರಿ ನೀಟ್ ಪರೀಕ್ಷಾ ಅಕ್ರಮಗಳ ಕುರಿತು ಸಿಬಿಐ ಅಥವಾ ಉನ್ನತ ಮಟ್ಟದ ತನಿಖೆ ನಡೆಸುವಂತೆ ಒತ್ತಾಯವೂ ಕೇಳಿಬಂದಿದೆ.

ಪ್ರಶ್ನೆಪತ್ರಿಕೆ ಸೋರಿಕೆ, ಕೃಪಾಂಕದ ಅಸಮರ್ಪಕ ಹಂಚಿಕೆ, ಪರೀಕ್ಷಾ ನಕಲು ಸೇರಿದಂತೆ ವಿವಿಧ ಆರೋಪಗಳನ್ನು ಮಾಡಿರುವ ಅಭ್ಯರ್ಥಿಗಳು ಕಾನ್ಪುರ ಸೇರಿದಂತೆ ದೇಶದ ವಿವಿಧೆಡೆ ಪ್ರತಿಭಟನೆ ನಡೆಸಿ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೆಲ ಅಭ್ಯರ್ಥಿಗಳಿಗಷ್ಟೇ ಹೆಚ್ಚು ಅಂಕಗಳು ಹೇಗೆ ಬಂದವು? ಒಂದೇ ಪರೀಕ್ಷಾ ಕೇಂದ್ರದ ಆರು ಅಭ್ಯರ್ಥಿಗಳು ಸೇರಿದಂತೆ ದೇಶದಾದ್ಯಂತ 67 ಅಭ್ಯರ್ಥಿಗಳು ಪ್ರಥಮ ರ್‍ಯಾಂಕ್ ಹಂಚಿಕೊಳ್ಳಲು ಹೇಗೆ ಸಾಧ್ಯವಾಯಿತು ಎಂದು ಆಕಾಂಕ್ಷಿಗಳು ಪ್ರಶ್ನಿಸಿದ್ದಾರೆ.

ತನಿಖೆಗೆ ಆಗ್ರಹಿಸಿದ ಕಾಂಗ್ರೆಸ್: ನೀಟ್ ಆಕಾಂಕ್ಷಿಗಳ ಹೋರಾಟಕ್ಕೆ ಧ್ವನಿಗೂಡಿಸಿರುವ ಕಾಂಗ್ರೆಸ್, 'ನೀಟ್ ಅಕ್ರಮಗಳ ಬಗ್ಗೆ ಸುಪ್ರೀಂ ಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ಉನ್ನತ ಮಟ್ಟದ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದೆ.

'ಬಿಜೆಪಿ ಸರ್ಕಾರವು ಯುವ ಸಮುದಾಯವನ್ನು ವಂಚಿಸುವ ಮೂಲಕ ಅವರ ಭವಿಷ್ಯದ ಜತೆ ಆಟವಾಡುತ್ತಿದೆ. ನೀಟ್ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ, ಅಕ್ರಮ, ಭ್ರಷ್ಟಾಚಾರಗಳು ನಡೆದಿವೆ. ಇದಕ್ಕೆ ಮೋದಿ ಸರ್ಕಾರವೇ ನೇರ ಹೊಣೆ. ಬಿಜೆಪಿಯು ದೇಶದ ಯುವ ಜನರಿಗೆ ಮೋಸ ಮಾಡಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೂ ಆಕಾಂಕ್ಷಿಗಳ ಕಾನೂನುಬದ್ಧ ದೂರುಗಳನ್ನು ಪರಿಹರಿಸುವಂತೆ ಒತ್ತಾಯಿಸಿದ್ದಾರೆ.

ಏನಿದು ವಿವಾದ?



ಈ ವರ್ಷದ ನೀಟ್ ಪರೀಕ್ಷೆಯು ಪ್ರಶ್ನೆಪತ್ರಿಕೆ ಸೋರಿಕೆ, ಪರೀಕ್ಷಾ ಕೊಠಡಿಯಲ್ಲಿ ಪರೀಕ್ಷಾ ಸಮಯ ನಷ್ಟ, ಕೃಪಾಂಕ ನೀಡಿಕೆ ಸೇರಿದಂತೆ ವಿವಿಧ ವಿಷಯಗಳಲ್ಲಿ ಗೊಂದಲಕ್ಕೆ ಎಡೆಮಾಡಿಕೊಟ್ಟಿದೆ.

- ಮೇ 5ರಂದು ದೇಶದಾದ್ಯಂತ ನಡೆದ ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಇದನ್ನು ಎನ್‌ಟಿಎ ಅಲ್ಲಗಳೆದಿದೆಯಾದರೂ, ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ 13 ಆರೋಪಿಗಳನ್ನು ಬಂಧಿಸಿರುವುದಾಗಿ ಬಿಹಾರ ಪೊಲೀಸರು ಹೇಳಿದ್ದಾರೆ.
- ಉತ್ತರ ಭಾರತದ ಕೆಲ ಪರೀಕ್ಷಾ ಕೇಂದ್ರಗಳಲ್ಲಿ ಹಿಂದಿ ಮಾಧ್ಯಮ ಪ್ರಶ್ನೆಪತ್ರಿಕೆ ಕೊಡುವ ಬದಲು ಇಂಗ್ಲಿಷ್ ಮಾಧ್ಯಮದ ಪ್ರಶ್ನೆಪತ್ರಿಕೆಗಳನ್ನು ನೀಡಲಾಗಿತ್ತು. ಬಳಿಕ ಸರಿಯಾದ ಪ್ರಶ್ನೆಪತ್ರಿಕೆ ಮತ್ತು ಒಎಂಆರ್ ಪ್ರತಿಗಳನ್ನು ವಿತರಿಸಲಾಯಿತು. ಇದರಿಂದ ಪರೀಕ್ಷಾರ್ಥಿಗಳ ಅಮೂಲ್ಯ ಪರೀಕ್ಷಾ ಸಮಯ ವ್ಯರ್ಥವಾಯಿತು. ಇದರಿಂದಾಗಿ ಪರೀಕ್ಷೆಯನ್ನು ಪೂರ್ಣವಾಗಿ ಬರೆಯಲು ಸಾಧ್ಯವಾಗಲಿಲ್ಲ ಎಂದು ಅಭ್ಯರ್ಥಿಗಳು ನೋವು ತೋಡಿಕೊಂಡಿದ್ದರು. ಅಲ್ಲದೆ, ಈ ಲೋಪಕ್ಕೆ ತಮಗೆ ಪರಿಹಾರ ಒದಗಿಸಬೇಕು ಎಂದು ಕೆಲ ಅಭ್ಯರ್ಥಿಗಳು ಆಗ್ರಹಿಸಿ, ನ್ಯಾಯಾಲಯದ ಮೊರೆಹೋಗಿದ್ದರು.
- ಭೌತವಿಜ್ಞಾನದ ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆಯೊಂದರ ಕೀ ಉತ್ತರ ಸಮರ್ಪಕವಾಗಿಲ್ಲ ಎಂದು ಹಲವು ಅಭ್ಯರ್ಥಿಗಳು ಎನ್‌ಟಿಎಗೆ ಆಕ್ಷೇಪಣೆಗಳನ್ನು ಸಲ್ಲಿಸಿದ್ದರು.
- ಇದರ ಬೆನ್ನಲ್ಲೇ ನೀಟ್ ಪರೀಕ್ಷಾ ಅಕ್ರಮದಲ್ಲಿ ತೊಡಗಿದ್ದ ಗುಂಪನ್ನು ಭೇದಿಸಿದ್ದ ದೆಹಲಿ ಪೊಲೀಸರು, ಎಂಬಿಬಿಎಸ್‌ನ ಇಬ್ಬರು ವಿದ್ಯಾರ್ಥಿಗಳು ಸೇರಿದಂತೆ ನಾಲ್ವರು ಆರೋಪಿಗಳನ್ನು ಬಂಧಿಸಿದರು. ನೀಟ್ ಪರೀಕ್ಷೆಗೆ ಅಭ್ಯರ್ಥಿಯ ಪರವಾಗಿ ನಕಲಿ ಅಭ್ಯರ್ಥಿಯಿಂದ ಪರೀಕ್ಷೆ ಬರೆಸಲು ಇವರು ತಲಾ ₹20 ಲಕ್ಷದಿಂದ ₹25 ಲಕ್ಷ ಪಡೆಯುತ್ತಿದ್ದರು ಎಂಬುದು ತಿಳಿಯಿತು. ಈ ರೀತಿ ದೆಹಲಿ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಹಾಜರಾಗಿದ್ದ ಇಬ್ಬರು ನಕಲಿ ಅಭ್ಯರ್ಥಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದರು.
- ಎನ್‌ಟಿಎ ನೀಟ್ ಫಲಿತಾಂಶ ಇದೇ 4ರಂದು ಪ್ರಕಟವಾಯಿತು. ಒಂದೇ ಪರೀಕ್ಷಾ ಕೇಂದ್ರದ 6 ಅಭ್ಯರ್ಥಿಗಳು ಸೇರಿದಂತೆ ಒಟ್ಟು 67 ಅಭ್ಯರ್ಥಿಗಳು ಪ್ರಥಮ ರ್‍ಯಾಂಕ್ ಹಂಚಿಕೊಂಡಿರುವ ಸಂಗತಿಯು ನೀಟ್ ಆಕಾಂಕ್ಷಿಗಳಲ್ಲಿ ಹಲವು ಅನುಮಾನಗಳನ್ನು ಮೂಡಿಸಿತು.

ಪರೀಕ್ಷಾ ಸಮಯ ನಷ್ಟ, 1563 ಅಭ್ಯರ್ಥಿಗಳಿಗೆ ಪರಿಹಾರಾತ್ಮಕ ಅಂಕ: ಕೆಲ ಪರೀಕ್ಷಾ ಕೇಂದ್ರಗಳಲ್ಲಿ ತಮ್ಮ ಪರೀಕ್ಷಾ ಸಮಯ ನಷ್ಟವಾಗಿದೆ ಎಂದು ಕಳವಳ ವ್ಯಕ್ತಪಡಿಸಿ ಕೆಲ ಅಭ್ಯರ್ಥಿಗಳು ಪಂಜಾಬ್ ಮತ್ತು ಹರಿಯಾಣ, ದೆಹಲಿ, ಛತ್ತೀಸಗಢ ಹೈಕೋರ್ಟ್‌ಗಳಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಈ ಕುರಿತ ಅಭ್ಯರ್ಥಿಗಳ ಮನವಿಗಳನ್ನು ಪರಿಶೀಲಿಸಲು ತಜ್ಞರ ಪರಿಹಾರ ಸಮಿತಿ ರಚಿಸಿ, ಅದರ ಶಿಫಾರಸುಗಳ ಅನ್ವಯ ಅಭ್ಯರ್ಥಿಗಳಿಗೆ ಪರಿಹಾರಾತ್ಮಕ ಅಂಕಗಳನ್ನು ನೀಡಲಾಗಿದೆ ಎಂದು ಎನ್‌ಟಿಎ ಪ್ರಕಟಣೆಯಲ್ಲಿ ತಿಳಿಸಿದೆ.

ದೂರು ಬಂದಿರುವ ಪರೀಕ್ಷಾ ಕೇಂದ್ರಗಳ ಕಾರ್ಯನಿರ್ವಾಹಕರಿಂದ ಸ್ವೀಕರಿಸಿದ ವರದಿ ಮತ್ತು ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿದ ತಜ್ಞರ ಸಮಿತಿಯು ಅಭ್ಯರ್ಥಿಗಳ ಪರೀಕ್ಷಾ ಸಮಯ ನಷ್ಟವಾಗಿರುವುದನ್ನು ಖಚಿತಪಡಿಸಿಕೊಂಡಿದೆ. ಅಂತಹ ಅಭ್ಯರ್ಥಿಗಳಿಗೆ ಅವರ ಪರೀಕ್ಷೆ ಬರೆಯುವ ಸಾಮರ್ಥ್ಯ ಮತ್ತು ಸಮಯ ನಷ್ಟವನ್ನು ಆಧರಿಸಿ ಪರಿಹಾರಾತ್ಮಕ ಅಂಕಗಳನ್ನು ನೀಡಲಾಗಿದೆ. 2018ರ ಸುಪ್ರೀಂಕೋರ್ಟ್ ತೀರ್ಪಿನ ಅನ್ವಯ ಅಳವಡಿಸಿಕೊಂಡಿರುವ ಸಾಮಾನ್ಯ ಸೂತ್ರವನ್ನು ಆಧರಿಸಿ 1,563 ಅಭ್ಯರ್ಥಿಗಳಿಗೆ ಪರಿಹಾರಾತ್ಮಕ ಅಂಕಗಳನ್ನು ನೀಡಲಾಗಿದೆ. ಇದರಿಂದ ಹಲವು ಅಭ್ಯರ್ಥಿಗಳ ಅಂಕಗಳಲ್ಲಿ ಸಾಕಷ್ಟು ವ್ಯತ್ಯಾಸಗಳಾಗಿದ್ದು, ಒಬ್ಬರಿಗೆ 718, ಮತ್ತೊಬ್ಬರಿಗೆ 719 ಅಂಕಗಳು ಬಂದಿವೆ ಎಂದು ಎನ್‌ಟಿಎ ಹೇಳಿದೆ.

ಕೀ ಉತ್ತರದಲ್ಲಿ ಲೋಪ– 44 ಅಭ್ಯರ್ಥಿಗಳಿಗೆ 720 ಅಂಕ: ಭೌತವಿಜ್ಞಾನದ ಪ್ರಶ್ನೆಯೊಂದರ ಕೀ ಉತ್ತರಕ್ಕೆ ಸಂಬಂಧಿಸಿದಂತೆ 13,373 ಆಕ್ಷೇಪಣೆಗಳು ಸಲ್ಲಿಕೆಯಾಗಿದ್ದವು. ಎನ್‌ಸಿಇಆರ್‌ಟಿ ಪಠ್ಯಪುಸ್ತಕದ ಹಳೆ ಆವೃತ್ತಿ ಮತ್ತು ಹೊಸ ಆವೃತ್ತಿಗಳಲ್ಲಿನ ವ್ಯತ್ಯಾಸದಿಂದಾಗಿ ಈ ಗೊಂದಲ ಉಂಟಾಗಿತ್ತು. ಹೀಗಾಗಿ ವಿಷಯ ತಜ್ಞರು, ಈ ಪ್ರಶ್ನೆಗೆ ಎರಡು ಆಯ್ಕೆಗಳನ್ನು ಪರಿಗಣಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹೀಗಾಗಿ, ಈ ಒಂದು ಕೀ ಉತ್ತರದ ಪರಿಷ್ಕೃತ ಅಂಕಗಳ ಲಾಭ ದೊರೆತ 44 ಅಭ್ಯರ್ಥಿಗಳು 720 ಅಂಕಗಳನ್ನು ಪಡೆಯಲು ಸಾಧ್ಯವಾಯಿತು ಮತ್ತು ಆರು ಅಭ್ಯರ್ಥಿಗಳಿಗೆ ಸಮಯ ನಷ್ಟದ ಪರಿಹಾರಾತ್ಮಕ ಅಂಕಗಳೂ ದೊರೆತಿದ್ದರಿಂದ ಗರಿಷ್ಠ ಅಂಕ ಪಡೆಯಲು ಸಾಧ್ಯವಾಯಿತು ಎಂದು ಎನ್‌ಟಿಎ ಸ್ಪಷ್ಟನೆ ನೀಡಿದೆ.

ಅಕ್ಕ–ಪಕ್ಕದ ಅಭ್ಯರ್ಥಿಗಳು

'ಆಶ್ಚರ್ಯದ ಸಂಗತಿಯೆಂದರೆ, ನೀಟ್‌ನಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದಿರುವ ರೋಲ್ ನಂ. 62ರಿಂದ 69ರವರೆಗಿನ ಅಭ್ಯರ್ಥಿಗಳು ಹರಿಯಾಣದ ಫರೀದಾಬಾದ್‌ನ ಒಂದೇ ಪರೀಕ್ಷಾ ಕೇಂದ್ರದವರು. ಅವರಲ್ಲಿ ಆರು ಅಭ್ಯರ್ಥಿಗಳು 720ಕ್ಕೆ 720 ಅಂಕಗಳನ್ನು ಪಡೆದಿದ್ದರೆ, ಒಬ್ಬರು 719, ಮತ್ತೊಬ್ಬರು 718 ಅಂಕಗಳನ್ನು ಗಳಿಸಿದ್ದಾರೆ' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಆರೋಪಿಸಿದ್ದಾರೆ. ಈ ಟಾಪರ್‌ಗಳು ಪರೀಕ್ಷೆ ಬರೆದ ಫರೀದಾಬಾದ್ ಕೇಂದ್ರದಲ್ಲಿಯೇ ತಪ್ಪಾದ ಪ್ರಶ್ನೆಪತ್ರಿಕೆಯನ್ನು ಮೊದಲಿಗೆ ವಿತರಿಸಲಾಗಿದೆ. ಇದರಿಂದಾಗಿ ಅವರಿಗೆ 45 ನಿಮಿಷಗಳು ವ್ಯರ್ಥವಾಗಿವೆ ಎಂದೂ ಅವರು ದೂರಿದ್ದಾರೆ.

ಅಂಕಿ ಅಂಶಗಳು



23.33 ಲಕ್ಷ — 2024ರಲ್ಲಿ ನೀಟ್ ಬರೆದವರು

67 — ಅಗ್ರಶ್ರೇಯಾಂಕ ಪಡೆದವರು

44 — ಕೀ ಉತ್ತರ ಪರಿಷ್ಕರಣೆಯಿಂದ ಗರಿಷ್ಠ ಅಂಕ ಪಡೆದವರು

6 — ಒಂದೇ ಪರೀಕ್ಷಾ ಕೇಂದ್ರದಲ್ಲಿ ಗರಿಷ್ಠ ಅಂಕ ಪಡೆದವರು

1,563 — ಪರೀಕ್ಷಾ ಸಮಯ ನಷ್ಟಕ್ಕೆ ಪರಿಹಾರಾತ್ಮಕ ಅಂಕ ಪಡೆದವರು

56.4% — ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆ ಅರ್ಹತೆ ಪಡೆದವರು

ಹೈಕೋರ್ಟ್ ಮೊರೆಹೋದ ಅಭ್ಯರ್ಥಿ

ನವದೆಹಲಿ (ಪಿಟಿಐ): ನೀಟ್ ಪರೀಕ್ಷೆಯ ಪ್ರಶ್ನೆಯೊಂದರ ಕೀ–ಉತ್ತರಕ್ಕೆ ತಕರಾರು ವ್ಯಕ್ತಪಡಿಸಿ ಅಭ್ಯರ್ಥಿಯೊಬ್ಬರು ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯೆ ಸಲ್ಲಿಸುವಂತೆ ನ್ಯಾಯಮೂರ್ತಿ ಡಿ.ಕೆ.ಶರ್ಮಾ ಅವರು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಗೆ ಶುಕ್ರವಾರ ತಿಳಿಸಿದರು.

ಪರೀಕ್ಷಾ ಬುಕ್‌ಲೆಟ್ ಕೋಡ್ ಆರ್5ರ ಪ್ರಶ್ನೆ ಸಂಖ್ಯೆ 20ಕ್ಕೆ ಆಯ್ಕೆ 2 ಮತ್ತು 4 ಅನ್ನು ಸರಿ ಎಂದು ಎನ್‌ಟಿಎ ಪರಿಗಣಿಸಿದೆ. ಒಂದು ಪ್ರಶ್ನೆಗೆ ಒಂದೇ ಉತ್ತರ ಇರಬೇಕು ಎಂಬ ನಿಯಮಕ್ಕೆ ಇದು ವಿರುದ್ಧವಾಗಿದೆ. ಪ್ರಶ್ನೆಯ ಆಯ್ಕೆಗಳಲ್ಲಿ ಗೊಂದಲ ಉಂಟಾದ್ದರಿಂದ ಮತ್ತು ಋಣಾತ್ಮಕ ಅಂಕವೂ ಇದ್ದ ಕಾರಣ ಅರ್ಜಿದಾರರು ಆ ಪ್ರಶ್ನೆಗೆ ಉತ್ತರಿಸಿಲ್ಲ. ಈಗ ಎರಡು ಆಯ್ಕೆಗಳಲ್ಲಿ ಯಾವುದನ್ನಾದರೂ ಆಯ್ಕೆ ಮಾಡಿದ್ದರೆ ಅದನ್ನು ಸರಿ ಎಂದು ಪರಿಗಣಿಸಿದರೆ, ಅರ್ಜಿದಾರರಿಗೆ ನಷ್ಟವಾಗುತ್ತದೆ.

ಹೀಗಾಗಿ ಈ ಪ್ರಶ್ನೆಗೆ ಉತ್ತರ ಆಯ್ಕೆ ಮಾಡದ ಅಭ್ಯರ್ಥಿಗಳಿಗೂ ಅಂಕಗಳನ್ನು ನೀಡಿ, ಪರಿಷ್ಕೃತ ರ್‍ಯಾಂಕಿಂಗ್ ಪಟ್ಟಿಯನ್ನು ಪ್ರಕಟಿಸಬೇಕು ಎಂದು ಎನ್‌ಟಿಎಗೆ ನಿರ್ದೇಶನ ನೀಡುವಂತೆ ಅರ್ಜಿದಾರರು ಕೋರಿದ್ದಾರೆ. ಈ ಅರ್ಜಿಯ ವಿಚಾರಣೆ ಮುಂದಿನ ವಾರ ನಡೆಯಲಿದೆ.

ಕಂಗನಾ ಮುಖಕ್ಕೆ ಗುದ್ದಿದ ಯೋಧೆಗೆ ರೈತ ಬೆಂಬಲ



ಕಂಗನಾ ರನೌತ್

ಚಂಡೀಗಢ (ಪಿಟಿಐ): ಚಂಡೀಗಢ ವಿಮಾನ ನಿಲ್ದಾಣದಲ್ಲಿ ನಟ ಹಾಗೂ ಬಿಜೆಪಿ ಸಂಸದೆ ಕಂಗನಾ ರನೌತ್ ಮುಖಕ್ಕೆ ಗುದ್ದಿದ ಕೇಂದ್ರೀಯ ಭದ್ರತಾ ಪಡೆಯ (ಸಿಐಎಸ್‌ಎಫ್) ಮಹಿಳಾ ಕಾನ್‌ಸ್ಟೆಬಲ್ ಕುಲ್ವಿಂದರ್ ಕೌರ್ ಅವರನ್ನು ಶುಕ್ರವಾರ ಬಂಧಿಸಲಾಗಿದೆ.

ಸೇವೆಯಿಂದ ಅಮಾನತು ಗೊಂಡಿರುವ ಕುಲ್ವಿಂದರ್ ಪರ ಕೆಲವು ರೈತ ಸಂಘಟನೆಗಳು ಸೇರಿದಂತೆ ವಿವಿಧ ಸಂಘಟನೆಗಳಿಂದ ಭಾರಿ ಬೆಂಬಲ ವ್ಯಕ್ತವಾಗಿದೆ. ಅಲ್ಲದೆ, ಈ ಘಟನೆಗೆ ಕಾರಣವೇನು ಎಂಬುದರ ಕುರಿತು ಸರಿಯಾದ ರೀತಿಯಲ್ಲಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿವೆ.

ಪ್ರಮುಖವಾಗಿ ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ಸಂಘಟನೆಗಳು, ತಾವು ಸಿಐಎಸ್‌ಎಫ್ ಸಿಬ್ಬಂದಿ ಕುಲ್ವಿಂದರ್ ಕೌರ್ ಪರ ನಿಲ್ಲುವುದಾಗಿ ಘೋಷಿಸಿವೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡ ಜಗಜಿತ್ ಸಿಂಗ್ ದಲ್ಲೇವಾಲ್ ಮತ್ತು ಕಿಸಾನ್ ಮಜ್ದೂರ್ ಸಂಘರ್ಷ ಸಮಿತಿಯ ಪ್ರಧಾನ ಕಾರ್ಯದರ್ಶಿ ಸ್ವರಣ್ ಸಿಂಗ್ ಪಾಂಧೇರ್, 'ಘಟನೆ ಕುರಿತು ಪಂಜಾಬ್ ಡಿಜಿಪಿ ಗೌರವ್ ಯಾದವ್ ಅವರನ್ನು ಭೇಟಿಯಾಗಿ, ಸರಿಯಾದ ತನಿಖೆ ನಡೆಸಬೇಕು ಎಂದು ಒತ್ತಾಯಿಸುತ್ತೇವೆ. ಅಲ್ಲದೆ, ಮಹಿಳಾ ಕಾನ್‌ಸ್ಟೆಬಲ್‌ಗೆ ಅನ್ಯಾಯವಾಗಬಾರದು ಎಂದು ಅವರಿಗೆ ತಿಳಿಸುವೆ' ಎಂದು ಹೇಳಿದರು.

ಮಾರ್ಚ್ 9ರಂದು ಮೊಹಾಲಿಯಲ್ಲಿ ಸಿಐಎಸ್‌ಎಫ್ ಕಾನ್‌ಸ್ಟೆಬಲ್ ಪರ 'ನ್ಯಾಯ ಯಾತ್ರೆ' ನಡೆಸಲಾಗುವುದು ಎಂದರು.

ರೈತ ವಿರೋಧಿ ಹೇಳಿಕೆಗಾಗಿ ಕಪಾಳಕ್ಕೆ ಗುದ್ದು: ನಟಿ ಕಂಗನಾ ಅವರಿಗೆ ಕಪಾಳಕ್ಕೆ ಹೊಡೆದ ಬಳಿಕ ಜನರೊಂದಿಗೆ ಮಹಿಳಾ ಕಾನ್‌ಸ್ಟೆಬಲ್ ಮಾತನಾಡಿದ್ದಾರೆ ಎಂಬಂತೆ ಇರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಕುಲ್ವಿಂದರ್ ಅವರಿಗೆ ತಾವು ಕೆಲಸ ಕೊಡಲು ಸಿದ್ಧ ಎಂದು ಸಂಗೀತ ನಿರ್ದೇಶಕ ಹಾಗೂ ಗಾಯಕ ವಿಶಾಲ್ ದದ್‌ಲಾನಿ ಹೇಳಿರುವ ಪೋಸ್ಟರ್‌ಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿವೆ.

ಭಯವಿಲ್ಲ

'ಕೆಲಸ ಕಳೆದುಕೊಂಡಿರುವ ಬಗ್ಗೆ ನನಗೆ ಯಾವುದೇ ಭಯವಿಲ್ಲ. ತಾಯಿಗೆ ಗೌರವ ಸಲ್ಲಿಸುವ ಭಾಗವಾಗಿ ಇಂಥ ಸಾವಿರ ಕೆಲಸ ಕಳೆದುಕೊಳ್ಳಲು ನಾನು ಸಿದ್ಧನಿದ್ದೇನೆ' ಎಂದು 'ಎಕ್ಸ್' ಮೂಲಕ ಕುಲ್ವಿಂದರ್ ಕೌರ್ ತಿಳಿಸಿದ್ದಾರೆ.

'ಹಮಾರೆ ಬಾರಹ್' ಸಿನಿಮಾ ನಿಷೇಧ

ಬೆಂಗಳೂರು: ಶುಕ್ರವಾರ (ಜೂನ್ 7) ಬಿಡುಗಡೆ ಆಗಬೇಕಿದ್ದ 'ಹಮಾರೆ ಬಾರಹ್' ಎಂಬ ಹಿಂದಿ ಸಿನಿಮಾವನ್ನು ಕನಿಷ್ಠ ಎರಡು ವಾರಗಳ ಕಾಲ ಬಿಡುಗಡೆಯಾಗದಂತೆ ರಾಜ್ಯ ಸರ್ಕಾರ ನಿಷೇಧಿಸಿದೆ.

ಮುಸ್ಲಿಂ ಸಂಘಟನೆಗಳ ಮನವಿಯ ಮೇರೆಗೆ ರಾಜ್ಯ ಸರ್ಕಾರ ಈ ಆದೇಶ ಹೊರಡಿಸಿದೆ. 'ಹಮಾರೆ ಬಾರಹ್' ಚಲನಚಿತ್ರವು ಬಿಡುಗಡೆಗೊಂಡಲ್ಲಿ ರಾಜ್ಯದಲ್ಲಿ ಕೋಮುಗಲಭೆಗೆ ಕಾರಣವಾಗುವ ಪರಿಸ್ಥಿತಿ ಉದ್ಭವಿಸಬಹುದೆಂದು ಮನಗಂಡು, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಚಲನಚಿತ್ರವನ್ನು ನಿಷೇಧಿಸಲಾಗಿದೆ' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಸಿನಿಮಾದ ಟ್ರೇಲರ್ ಹಾಗೂ ಸಿನಿಮಾವನ್ನು ಎರಡು ವಾರಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ರಾಜ್ಯದ ಯಾವುದೇ ಎಲೆಕ್ಟ್ರಾನಿಕ್ ಮಾಧ್ಯಮ, ಸಾಮಾಜಿಕ ಜಾಲತಾಣ, ಸಿನಿಮಾ ಮಂದಿರಗಳು, ಖಾಸಗಿ ಟಿವಿ ಚಾನಲ್‌ಗಳು ಹಾಗೂ ಇತರ ಮಾಧ್ಯಮಗಳ ಮೂಲಕ ಪ್ರಸಾರ ಮಾಡುವುದನ್ನು ನಿಷೇಧಿಸಿದೆ.

'ಈ ಚಲನಚಿತ್ರದ ಟ್ರೇಲರ್ ಅನ್ನು ಪರಿಶೀಲಿಸಲಾಗಿ 'ಹಮಾರೆ ಬಾರಹ್' ಚಲನಚಿತ್ರದಲ್ಲಿ ಪ್ರಚೋದನಾತ್ಮಕ ಹಾಗೂ ಅವಹೇಳನಕಾರಿ ಹೇಳಿಕೆ ನೀಡಿ, ಜನರಲ್ಲಿ ಆಕ್ರೋಶ ಉಂಟು ಮಾಡಿ ದ್ವೇಷ ಭಾವನೆಗಳನ್ನು ಪ್ರಚೋದಿಸುವ ಸನ್ನಿವೇಶಗಳು ಕಂಡುಬಂದಿರುತ್ತವೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ತನಿಖೆಗೆ ಸಿದ್ದರಾಮಯ್ಯ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯಕೀಯ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಸಿರುವ ನೀಟ್ ಪರೀಕ್ಷೆಯಲ್ಲಿ ಭಾರಿ ಅಕ್ರಮ ನಡೆದಿರುವ ಶಂಕೆ ದೇಶದಾದ್ಯಂತ ವ್ಯಕ್ತವಾಗಿದೆ. ಕೇಂದ್ರ ಸರ್ಕಾರ ಈ ಬಗ್ಗೆ ಉನ್ನತಮಟ್ಟದ ತನಿಖೆ ನಡೆಸಿ, ನೊಂದ ಪರೀಕ್ಷಾರ್ಥಿಗಳಿಗೆ ನ್ಯಾಯ ದೊರಕಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಶುಕ್ರವಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಪರೀಕ್ಷೆ ಬರೆದಿದ್ದ 24 ಲಕ್ಷ ಅಭ್ಯರ್ಥಿಗಳು ಮತ್ತು ಅವರ ಪೋಷಕರಲ್ಲಿ ಆತಂಕ ಮೂಡಿದೆ. ಪರೀಕ್ಷೆಯ ವಿಶ್ವಾಸಾರ್ಹತೆಯ ಬಗ್ಗೆಯೇ ಪ್ರಶ್ನೆ ಎದ್ದಿದೆ. ಕೃಪಾಂಕ ನೀಡಿರುವುದು, ತರಾತುರಿಯಲ್ಲಿ ಫಲಿತಾಂಶ ಪ್ರಕಟಿಸಿರುವುದು ಸಂಶಯಕ್ಕೆ ಎಡೆಮಾಡಿವೆ' ಎಂದು ದೂರಿದ್ದಾರೆ.

ಹಿಂದಿನ ವರ್ಷಗಳ ಫಲಿತಾಂಶ ಮತ್ತು ಈ ವರ್ಷದ ಫಲಿತಾಂಶ ಹೋಲಿಕೆ ಮಾಡಿದರೆ ಅಕ್ರಮದ ವಾಸನೆ ಹೊಡೆಯುತ್ತದೆ ಎಂದಿದ್ದಾರೆ.

'ನೀಟ್ ಪರೀಕ್ಷೆಯಲ್ಲಿ ಪ್ರತಿ ತಪ್ಪು ಉತ್ತರಕ್ಕೂ ಋಣಾತ್ಮಕ ಅಂಕ ಗಳಿರುತ್ತವೆ. ಆದರೂ, ಇಷ್ಟೊಂದು ಅಭ್ಯರ್ಥಿಗಳು ಶೇ 100ರಷ್ಟು ಅಂಕ ಪಡೆದು, ಅಗ್ರಸ್ಥಾನ ಗಳಿಸಲು ಹೇಗೆ ಸಾಧ್ಯವಾಯಿತು ಎಂಬುದನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮತ್ತು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಸ್ಪಷ್ಟಪಡಿಸಬೇಕು' ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

'2019ರಿಂದ 2023ರ ಅವಧಿಯಲ್ಲಿ 600 ಅಂಕ ಗಳಿಸಿದವರಿಗೆ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ಸಿಕ್ಕಿತ್ತು. ಈ ಬಾರಿ ಅಂಕ ಮಿತಿಯನ್ನು 134ರಿಂದ 164ಕ್ಕೆ ಹೆಚ್ಚಿಸಲಾಗಿದೆ. ಇದರಿಂದ 660 ಅಂಕ ಗಳಿಸಿದವರಿಗೆ ಮಾತ್ರ ಸರ್ಕಾರಿ ಕಾಲೇಜುಗಳಲ್ಲಿ ಸೀಟು ಸಿಗಲಿದೆ. ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ' ಎಂದಿದ್ದಾರೆ.

ನೀಟ್ ಫಲಿತಾಂಶ ಪ್ರಕಟವಾದ ಬಳಿಕ ದೌಸಾದಲ್ಲಿ ಅಜಿತ್ ಎಂಬ ವಿದ್ಯಾರ್ಥಿ, ಮಧ್ಯಪ್ರದೇಶದ ರೇವಾದಲ್ಲಿ ಬಗೀಶಾ ತಿವಾರಿ ಎಂಬ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮತ್ತಷ್ಟು ಯುವಜನರು ಪ್ರಾಣ ಕಳೆದುಕೊಳ್ಳುವ ಮೊದಲು ಕೇಂದ್ರ ಸರ್ಕಾರ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದ್ದಾರೆ.

'ಫಲಿತಾಂಶ ಪ್ರಕಟಣೆಯೂ ಸಂಶಯಾಸ್ಪದ'



'ಜೂನ್ 14ಕ್ಕೆ ಪ್ರಕಟವಾಗಬೇಕಿದ್ದ ನೀಟ್ ಫಲಿತಾಂಶವನ್ನು ಲೋಕಸಭಾ ಚುನಾವಣೆಯ ಮತ ಎಣಿಕೆ ದಿನವಾದ ಜೂನ್ 4ರಂದು ಪ್ರಕಟಿಸಿರುವುದು ಸಂಶಯಾಸ್ಪದವಾಗಿದೆ. ಪರೀಕ್ಷೆಯಲ್ಲಿನ ಅಕ್ರಮಗಳನ್ನು ಮುಚ್ಚಿ ಹಾಕುವುದಕ್ಕಾಗಿಯೇ ತರಾತುರಿಯಲ್ಲಿ ಫಲಿತಾಂಶ ಪ್ರಕಟಿಸಲಾಗಿತ್ತೇ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಮೋದಿ ಸರ್ಕಾರ, ನಾಳೆ ಪ್ರಮಾಣ

ಒಂದನೇ ಪುಟದಿಂದ...

'ಪರಸ್ಪರ ನಂಬಿಕೆಯು ಈ ಮೈತ್ರಿಯ ಮೂಲ ಮತ್ತು 'ಸರ್ವ ಪಂಥ ಸಂಭವ' (ಎಲ್ಲ ಪಂಗಡಗಳು ಸಮಾನರು) ತತ್ವಕ್ಕೆ ಬದ್ಧವಾಗಿದೆ. ಇದು ಬಲಿಷ್ಠ ಸಮ್ಮಿಶ್ರ ಸರ್ಕಾರ' ಎಂದು ಅವರು ಹೇಳಿದರು. 'ನನ್ನ ಪ್ರಕಾರ, ಎನ್‌ಡಿಎ ಎಂದರೆ ನವ ಭಾರತ, ಅಭಿವೃದ್ಧಿ ಹೊಂದಿದ ಭಾರತ ಹಾಗೂ ಮಹತ್ವಾಕಾಂಕ್ಷೆಯ ಭಾರತ' ಎಂದು ವ್ಯಾಖ್ಯಾನಿಸಿದರು.

ಸಭೆಯಲ್ಲಿ ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಮತ್ತು ಜೆಡಿಯುನ ನಿತೀಶ್ ಕುಮಾರ್ ಸೇರಿದಂತೆ ಮೈತ್ರಿಕೂಟದ ನಾಯಕರು ಭಾಗವಹಿಸಿದ್ದರು. ಮೋದಿ ಅವರನ್ನು ಮೈತ್ರಿಕೂಟದ ನಾಯಕರನ್ನಾಗಿ ಮಾಡುವ ಪ್ರಸ್ತಾವವನ್ನು ಪಕ್ಷದ ಹಿರಿಯ ನಾಯಕ ರಾಜನಾಥ ಸಿಂಗ್ ಮಂಡಿಸಿದರು. ಈ ಪ್ರಸ್ತಾವವನ್ನು ಅಮಿತ್ ಶಾ, ನಿತಿನ್ ಗಡ್ಕರಿ, ಚಂದ್ರಬಾಬು ನಾಯ್ಡು, ನಿತೀಶ್ ಕುಮಾರ್, ಏಕನಾಥ ಶಿಂದೆ, ಚಿರಾಗ್ ಪಾಸ್ವಾನ್, ಎಚ್.ಡಿ.ಕುಮಾರಸ್ವಾಮಿ, ಅಜಿತ್ ಪವಾರ್ ಹಾಗೂ ಇತರರು ಬೆಂಬಲಿಸಿದರು.

ಇದೇ ವೇಳೆ, ಮೈತ್ರಿಕೂಟದ ನಾಯಕರನ್ನು ನೂತನ ಸಂಸದರು ಅಭಿನಂದಿಸಿದರು. 'ಅಬ್ ಕಿ ಬಾರ್ ಮೋದಿ ಸರ್ಕಾರ್' ಎಂದು ಘೋಷಣೆಗಳನ್ನು ಕೂಗಿದರು. ಕೆಲವೇ ಕ್ಷಣಗಳಲ್ಲಿ 'ಅಬ್ ಕಿ ಬಾರ್ ಎನ್‌ಡಿಎ ಸರ್ಕಾರ್' ಎಂದೂ ಬದಲಾಯಿಸಿದರು. ನಿಯೋಜಿತ ಪ್ರಧಾನಿ ಅವರು ಸಂವಿಧಾನ ಪ್ರತಿಗೆ ನಮಿಸಿದರು.

ಮೂರನೇ ಬಾರಿ ಪ್ರಧಾನಿಯಾಗುವ ಮೂಲಕ ಜವಾಹರಲಾಲ್ ನೆಹರೂ ಅವರ ಹ್ಯಾಟ್ರಿಕ್ ಸಾಧನೆಯನ್ನು ಸರಿಗಟ್ಟಲಿರುವ ಮೋದಿ ಅವರು ತಮ್ಮ ಆದ್ಯತೆಗಳನ್ನು ಪಟ್ಟಿ ಮಾಡಿದರು. ಜನಸಾಮಾನ್ಯರ ಆಶೋತ್ತರಗಳನ್ನು ಆದಷ್ಟು ಬೇಗ ಈಡೇರಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದರು. 'ನಾವು ದೊಡ್ಡ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಿದೆ ಮತ್ತು ಕ್ಷಿಪ್ರಗತಿಯ ಅಭಿವೃದ್ಧಿಗೆ ಆದ್ಯತೆ ನೀಡಬೇಕಿದೆ. ನಾವು ಸಮಯ ವ್ಯರ್ಥ ಮಾಡಲು ಬಯಸುವುದಿಲ್ಲ. ನಾವು ಐದನೇ ಅತಿದೊಡ್ಡ ಆರ್ಥಿಕತೆಯಿಂದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಬೇಕಿದೆ' ಎಂದು ತಮ್ಮ ಕನಸು ಬಿಚ್ಚಿಟ್ಟರು. 'ಮುಂದಿನ 10 ವರ್ಷಗಳಲ್ಲಿ, ನಾವು ಉತ್ತಮ ಆಡಳಿತ, ಅಭಿವೃದ್ಧಿ ಮತ್ತು ನಾಗರಿಕರ ಜೀವನದ ಗುಣಮಟ್ಟದ ಬಗ್ಗೆ ಹೊಸ ಅಧ್ಯಾಯ ಬರೆಯುತ್ತೇವೆ' ಎಂದು ಹೇಳಿದರು.

ಮೈತ್ರಿಕೂಟದ ನಾಯಕರನ್ನಾಗಿ ಮೋದಿ ಅವರ ಹೆಸರನ್ನು ಅನುಮೋದಿಸುತ್ತಾ ಚಂದ್ರಬಾಬು ನಾಯ್ಡು ಹಾಗೂ ನಿತೀಶ್ ಕುಮಾರ್ ಅವರು ತಮ್ಮ ರಾಜ್ಯಗಳಲ್ಲಿ ಬಾಕಿ ಉಳಿದಿರುವ ಕೆಲಸಗಳ ಬಗ್ಗೆ ಪ್ರಸ್ತಾಪಿಸಿದರು. ತಳಮಟ್ಟದಲ್ಲಿ ಎನ್‌ಡಿಎ ಮೈತ್ರಿಕೂಟದ ಪಕ್ಷಗಳ ಹೊಂದಾಣಿಕೆಯನ್ನು ಉಲ್ಲೇಖಿಸಿದ ಪ್ರಧಾನಿ, 'ಪ್ರಾದೇಶಿಕ ಮತ್ತು ರಾಷ್ಟ್ರೀಯ ಆಕಾಂಕ್ಷೆಗಳ ನಡುವೆ ಬಲವಾದ ಸಂಪರ್ಕವಿರಬೇಕು' ಎಂದು ಪ್ರತಿಪಾದಿಸಿದರು.



ನವದೆಹಲಿಯ 'ಸಂವಿಧಾನ ಸದನ'ದಲ್ಲಿ ನಡೆದ ಎನ್‌ಡಿಎ ಸಂಸದೀಯ ಸಭೆಯಲ್ಲಿ ಭಾಗವಹಿಸಿದ್ದ ಸಂಸದರು —ಪಿಟಿಐ ಚಿತ್ರ

ಕಾಂಗ್ರೆಸ್ ವಿರುದ್ಧ ಮೋದಿ ಚಾಟಿ

- ಈ ಚುನಾವಣೆಯಲ್ಲಿ ವಿರೋಧ ಪಕ್ಷಕ್ಕೆ 100 ಸ್ಥಾನಗಳ ಗಡಿ ತಲುಪಲು ಸಾಧ್ಯವಾಗಿಲ್ಲ. ಕಳೆದ ಮೂರು ಲೋಕಸಭಾ ಚುನಾವಣೆಯಲ್ಲಿ ಅವರ ಒಟ್ಟು ಸ್ಥಾನಗಳು ಈ ಚುನಾವಣೆಯಲ್ಲಿ ಮಾತ್ರ ಬಿಜೆಪಿ ಗಳಿಸಿದ್ದಕ್ಕಿಂತ ಕಡಿಮೆ
- ಪ್ರಜಾಪ್ರಭುತ್ವದ ಮೇಲೆ ಜನರು ಹೊಂದಿರುವ ನಂಬಿಕೆಯನ್ನು ನಾಶ ಮಾಡಲು ಪ್ರತಿಪಕ್ಷಗಳು ಪ್ರಯತ್ನಿಸುತ್ತಿವೆ. ಎನ್‌ಡಿಎ ಮೈತ್ರಿಕೂಟದ ಚುನಾವಣಾ ಗೆಲುವಿನ ಮೇಲೆ ತಮ್ಮ ಸೋಲಿನ ಛಾಯೆ ಬೀರುತ್ತಿವೆ
- ವಿರೋಧ ಪಕ್ಷದ ಮುಖಂಡರು ಇವಿಎಂಗಳ ಶವಯಾತ್ರೆ ನಡೆಸುತ್ತಾರೆ ಎಂದು ನಾವು ಭಾವಿಸಿದ್ದೆವು. ಆದರೆ, ಜೂನ್ 4ರ ಸಂಜೆ ವೇಳೆಗೆ ಫಲಿತಾಂಶಗಳು ಪ್ರಕಟವಾಗುತ್ತಿದ್ದಂತೆ, ಅವರು ಮೌನವಾಗಿದ್ದರು. ಇದು ಭಾರತದ ಪ್ರಜಾಪ್ರಭುತ್ವದ ಶಕ್ತಿ. ಇನ್ನು ಐದು ವರ್ಷ ಇವಿಎಂಗಳ ಬಗ್ಗೆ ತಕರಾರುಗಳು ಇರುವುದಿಲ್ಲ ಎಂದು ಭಾವಿಸಿದ್ದೇನೆ. 2029ರಲ್ಲಿ ಮತ್ತೆ ಗದ್ದಲ ಎಬ್ಬಿಸಬಹುದು

ಅಡ್ವಾಣಿ, ಜೋಶಿ ಭೇಟಿ

ಲೋಕಸಭೆಯಲ್ಲಿ ಬಿಜೆಪಿ ನಾಯಕರಾಗಿ ಆಯ್ಕೆಯಾದ ಬೆನ್ನಲ್ಲೇ, ಮೋದಿ ಅವರು ಪಕ್ಷದ ಹಿರಿಯ ನಾಯಕ ಲಾಲ್ ಕೃಷ್ಣ ಅಡ್ವಾಣಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ನಂತರ ಪಕ್ಷದ ಮಾಜಿ ಅಧ್ಯಕ್ಷ ಮುರಳಿ ಮನೋಹರ್ ಜೋಶಿ ಅವರ ನಿವಾಸಕ್ಕೆ ತೆರಳಿ ಸಮಾಲೋಚಿಸಿದರು. ಇದಾದ ಬಳಿಕ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನೂ ಮೋದಿ ಭೇಟಿ ಮಾಡಿದರು.

'ಭ್ರಮೆಯಿಂದ ಹೊರಬಂದ ಕರ್ನಾಟಕದ ಜನ'

'ಕರ್ನಾಟಕ ಹಾಗೂ ತೆಲಂಗಾಣದಲ್ಲಿ ಇತ್ತೀಚೆಗೆ ನೂತನ ರಾಜ್ಯ ಸರ್ಕಾರಗಳು ರಚನೆಯಾಗಿದ್ದವು. ಆದರೆ. ಜನರ ನಂಬಿಕೆಯು ಕ್ಷಣಗಳಲ್ಲಿ ಮುರಿದು ಬಿದ್ದು ಅವರು ಭ್ರಮೆಯಿಂದ ಹೊರಗೆ ಬಂದರು. ಈ ಚುನಾವಣೆಯಲ್ಲಿ ಎರಡೂ ರಾಜ್ಯಗಳ ಜನರು ಎನ್‌ಡಿಎಯನ್ನು ಒಪ್ಪಿಕೊಂಡರು' ಎಂದು ಮೋದಿ ವಿಶ್ಲೇಷಿಸಿದರು.

'ತಮಿಳುನಾಡಿನಲ್ಲಿ ನಾವು ಯಾವುದೇ ಸ್ಥಾನ ಗಳಿಸಲು ಸಾಧ್ಯವಾಗಿಲ್ಲ. ಆದರೆ, ಮತ ಹಂಚಿಕೆ ಪ್ರಮಾಣ ಹೆಚ್ಚಾಗಿದೆ. ರಾಜ್ಯದಲ್ಲಿ ನಮ್ಮ ಭವಿಷ್ಯ ಏನು ಎಂಬುದಕ್ಕೆ ಸ್ಪಷ್ಟ ಸಂದೇಶ ಸಿಕ್ಕಿದೆ. ಕೇರಳದಲ್ಲಿ ನಮ್ಮ ನೂರಾರು ಕಾರ್ಯಕರ್ತರು ತ್ಯಾಗ ಬಲಿದಾನ ಮಾಡಿದ್ದಾರೆ. ಪ್ರಥಮ ಬಾರಿಗೆ ಕೇರಳದ ಪ್ರತಿನಿಧಿ ಹೊಂದಿದ್ದೇವೆ' ಎಂದರು.

ಭಾರತದ ಆಹ್ವಾನ ಸ್ವೀಕರಿಸಿದ ಮುಯಿಜು

ಮಾಲೆ (ಪಿಟಿಐ): ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರು ಪ್ರಧಾನಿ ನರೇಂದ್ರ ಮೋದಿ ಅವರ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಸ್ಥಳೀಯ ಮಾಧ್ಯಮವೊಂದು ವರದಿ ಮಾಡಿದೆ.

'ಸಮಾರಂಭದಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ಆಹ್ವಾನವನ್ನು ಮುಯಿಜು ಸ್ವೀಕರಿಸಿದ್ದಾರೆ. ಸರ್ಕಾರದ ಇತರ ಕೆಲವು ಹಿರಿಯ ಅಧಿಕಾರಿಗಳೊಂದಿಗೆ ಅವರು ಶನಿವಾರ ನವದೆಹಲಿಗೆ ಪ್ರಯಾಣಿಸಲಿದ್ದಾರೆ' ಎಂದು ಎಡಿಷನ್ ಡಾಟ್ ಎಂವಿ ವೆಬ್‌ಸೈಟ್ ವರದಿ ತಿಳಿಸಿದೆ.

ಆದರೆ ಭಾನುವಾರ ನಡೆಯುವ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿದಂತೆ ಮುಯಿಜು ಅವರ ಕಚೇರಿ ಯಾವುದೇ ಅಧಿಕೃತ ಪ್ರಕಟಣೆ ಹೊರಡಿಸಿಲ್ಲ.



ಮೊಹಮ್ಮದ್ ಮುಯಿಜು

ಕಳೆದ ವರ್ಷದ ನವೆಂಬರ್‌ನಲ್ಲಿ ಮುಯಿಜು ಅವರು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮಾಲ್ದೀವ್ಸ್ ಮತ್ತು ಭಾರತದ ನಡುವಣ ರಾಜತಾಂತ್ರಿಕ ಸಂಬಂಧದಲ್ಲಿ ಬಿಕ್ಕಟ್ಟು ತಲೆದೋರಿತ್ತು.

ಪ್ರಚಂಡ ಭಾಗಿ (ಕಾಠ್ಮಂಡು ವರದಿ): ನೇಪಾಳ ಪ್ರಧಾನ ಮಂತ್ರಿ ಪುಷ್ಪ ಕಮಲ್ ದಹಲ್ ಪ್ರಚಂಡ ಅವರು ಪ್ರಮಾಣವಚಣ ಸ್ವೀಕಾರ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ರಾಜ್ಯಸಭಾ ಸದಸ್ಯೆ ಮಾಲಿವಾಲ್ ಮೇಲೆ ಹಲ್ಲೆ ಪ್ರಕರಣ

ಬಿಭವ್ ಕುಮಾರ್ ಜಾಮೀನು ಅರ್ಜಿ ವಜಾ

ನವದೆಹಲಿ(ಪಿಟಿಐ): ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಅವರ ಮೇಲೆ ಹಲ್ಲೆ ನಡೆಸಿದ ಆರೋಪದ ಪ್ರಕರಣದಲ್ಲಿ, ಜಾಮೀನು ಕೋರಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಆಪ್ತ ಸಹಾಯಕ ಬಿಭವ್ ಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿಯ ಸೆಷನ್ಸ್ ನ್ಯಾಯಾಲಯ ಶುಕ್ರವಾರ ವಜಾಗೊಳಿಸಿದೆ.

ಆರೋಪಿಯು ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಬಗ್ಗೆ ಆತಂಕ ವ್ಯಕ್ತಪಡಿಸಿರುವ ನ್ಯಾಯಾಲಯ, ಜಾಮೀನು ಅರ್ಜಿಯನ್ನು ವಜಾಗೊಳಿಸಿದೆ. ಜಾಮೀನು ಕೋರಿ ಬಿಭವ್ ಕುಮಾರ್ ಎರಡನೇ ಬಾರಿ ಅರ್ಜಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶೆ ಏಕ್ತಾ ಗೌಬಾ ಮಾನ್, 'ಪ್ರಕರಣ ಕುರಿತ ತನಿಖೆ ಆರಂಭಿಕ ಹಂತದಲ್ಲಿದೆ. ಸಂತ್ರಸ್ತೆಗೆ ನಿರಂತರವಾಗಿ ಬೆದರಿಕೆ ಕರೆಗಳು ಬರುತ್ತಿದ್ದು, ತನ್ನ ಹಾಗೂ ತನ್ನ ಕುಟುಂಬದ ಸದಸ್ಯರ ಸುರಕ್ಷತೆ ಬಗ್ಗೆ ಆಕೆಗೆ ಭಯವಿದೆ. ಅಲ್ಲದೇ, ಆರೋಪಿ ಅಥವಾ ಮೇಲ್ಮನವಿದಾರನೂ ಆಗಿರುವ ಬಿಭವ್ ಕುಮಾರ್ ಅವರನ್ನು ಜಾಮೀನಿನ ಬಿಡುಗಡೆ ಮಾಡಿದಲ್ಲಿ, ಅವರು ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಆತಂಕವೂ ಇದೆ' ಎಂದು ಹೇಳಿದರು.

ಬಿಭವ್ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಲಯವು ಮೇ 31ರಂದು ಆದೇಶಿಸಿತ್ತು. ಇನ್ನೊಂದೆಡೆ, ಈ ಪ್ರಕರಣದಲ್ಲಿ ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಬಿಭವ್ ಕುಮಾರ್, ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಯ ಸಮರ್ಥನೀಯತೆ ಕುರಿತ ತನ್ನ ಆದೇಶವನ್ನು ಹೈಕೋರ್ಟ್ ಕಾಯ್ದಿರಿಸಿದೆ.

ಕೇಜ್ರಿವಾಲ್ ಜಾಮೀನಿಗೆ ಇ.ಡಿ ವಿರೋಧ

ಅಬಕಾರಿ ಹಗರಣದ ಜತೆ ನಂಟು ಹೊಂದಿರುವ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾಮೀನು ಕೋರಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಗೆ ಜಾರಿ ನಿರ್ದೇಶನಾಲಯ (ಇ.ಡಿ) ವಿರೋಧ ದಾಖಲಿಸಿದೆ. 'ಕೇಜ್ರಿವಾಲ್ ಅವರು ಗಂಭೀರ ಆರ್ಥಿಕ ಅಪರಾಧಗಳಲ್ಲಿ ಭಾಗಿಯಾಗಿದ್ದಾರೆ. ಅದಕ್ಕೆ ಸಂಬಂಧಿಸಿದ ಸಾಕ್ಷ್ಯಗಳು ತಮ್ಮ ಬಳಿ ಇವೆ. ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ, ಈ ಹಗರಣಕ್ಕೆ ಸಂಬಂಧಿಸಿದ ತನಿಖೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ' ಎಂದು ಇ.ಡಿ ದೆಹಲಿ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರಿಗೆ ತಿಳಿಸಿದೆ. ನ್ಯಾಯಾಧೀಶರು ಈ ಕುರಿತ ಅರ್ಜಿಯ ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಿದರು.

ಪೋಶೆ ಕಾರು ಅಪಘಾತ: ತಂದೆ, ತಾತನ ವಿರುದ್ಧ ಮತ್ತೊಂದು ಪ್ರಕರಣ

ಪುಣೆ (ಪಿಟಿಐ): ಪುಣೆ ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಆರೋಪಿಯಾಗಿರುವ 17 ವರ್ಷದ ವಿಶಾಲ್ ಅಗರ್ವಾಲ್‌ನ ಕುಟುಂಬದವರು ಬೇರೆ ಕಾನೂನುಬಾಹಿರ ಚಟುವಟಿಕೆಯಲ್ಲೂ ಸಿಕ್ಕಿಬೀಳುವುದು ಮುಂದುವರಿದಿದೆ. ಆರೋಪಿಯ ತಂದೆ ಹಾಗೂ ತಾತನ ವಿರುದ್ಧ ಆತ್ಮಹತ್ಯೆಗೆ ಕುಮ್ಮಕ್ಕು ನೀಡಿರುವ ಆರೋಪದ ಪ್ರತ್ಯೇಕ ಪ್ರಕರಣ ದಾಖಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

'ಕಟ್ಟಡ ನಿರ್ಮಾಣದಲ್ಲಿ ತೊಡಗಿರುವ ಉದ್ಯಮಿ ಡಿ.ಎಸ್. ಕಸ್ತೂರೆ ಎಂಬುವವರು ದೂರು ನೀಡಿದ್ದಾರೆ. 'ಕಟ್ಟಡ ನಿರ್ಮಾಣಕ್ಕಾಗಿ ವಿನಯ್ ಕಾಳೆ ಎಂಬಾತನಿಂದ ನನ್ನ ಮಗ ಶಶಿಕಾಂತ್ ಕಸ್ತೂರೆ ಸಾಲ ಪಡೆದಿದ್ದ. ಸಮಯಕ್ಕೆ ಸರಿಯಾಗಿ ಸಾಲ ತೀರಿಸಲು ಆಗಲಿಲ್ಲ. ಕಾಳೆ ತಾನು ಕೊಟ್ಟ ಸಾಲಕ್ಕೆ ಚಕ್ರಬಡ್ಡಿ ಕೇಳಲಾರಂಭಿಸಿದ್ದ. ನನ್ನ ಮಗ ಶಶಿಕಾಂತ್‌ಗೆ ಕಿರುಕುಳ ಕೊಡತೊಡಗಿದ್ದ. ಒತ್ತಡ ತಾಳಲಾರದೆ ಇದೇ ವರ್ಷ ಜನವರಿಯಲ್ಲಿ ಮಗ ಆತ್ಮಹತ್ಯೆ ಮಾಡಿಕೊಂಡ' ಎಂದು ಡಿ.ಎಸ್. ಕಸ್ತೂರೆ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು. ಚಂದ್ರನಗರ ಪೊಲೀಸ್ ಠಾಣೆಯಲ್ಲಿ ಆತ್ಮಹತ್ಯೆಗೆ ಕುಮ್ಮಕ್ಕು ನೀಡಿದ ಹಾಗೂ ಜೀವ ಬೆದರಿಕೆ ಒಡ್ಡಿದ ಕಾರಣಕ್ಕೆ ಆರೋಪಪಟ್ಟಿ ದಾಖಲಿಸಲಾಗಿದೆ ಎಂದು ಹೇಳಿದರು.

'ವಿಚಾರಣೆ ನಡೆಸಿದಾಗ, ಪೋಶೆ ಅಪಘಾತ ಪ್ರಕರಣದ ಆರೋಪಿಯ ತಾತ, ತಂದೆ ಕೂಡ ಆತ್ಮಹತ್ಯೆಗೆ ಕುಮ್ಮಕ್ಕು ನೀಡಿದ ಪ್ರಕರಣದಲ್ಲಿ ಶಾಮೀಲಾಗಿರುವುದು ತಿಳಿದುಬಂದಿದೆ. ಅವರಲ್ಲದೆ ಇನ್ನೂ ಮೂವರ ಪಾತ್ರವೂ ಆತ್ಮಹತ್ಯೆ ಕುಮ್ಮಕ್ಕಿನ ಪ್ರಕರಣದಲ್ಲಿ ಇರುವುದು ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

ಪಕ್ಷವು ಯಂತ್ರದ ಸುಧಾರಣೆಗೆ ಒತ್ತಾಯಿಸಿದೆ: ಚಿದಂಬರಂ

'ಇವಿಎಂ ಬಳಕೆ ತಿರಸ್ಕರಿಸಿಲ್ಲ'



ಪಿ. ಚಿದಂಬರಂ

ಚೆನ್ನೈ (ಪಿಟಿಐ): ಕಾಂಗ್ರೆಸ್ ಪಕ್ಷವು ವಿದ್ಯುನ್ಮಾನ ಮತಯಂತ್ರದ ಬಳಕೆಯನ್ನು ತಿರಸ್ಕರಿಸಿಲ್ಲ. ಬದಲಾಗಿ ವಿವಿಪ್ಯಾಟ್‌ಗಳ ಸುಧಾರಣೆಗೆ ಒತ್ತಾಯಿಸಿತ್ತು ಎಂದು ಪಕ್ಷದ ಹಿರಿಯ ನಾಯಕ ಪಿ. ಚಿದಂಬರಂ ಹೇಳಿದರು.

ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮತಯಂತ್ರಗಳ ಮೇಲಿನ ವಿಪಕ್ಷಗಳ ಆರೋಪಕ್ಕೆ ಉಸ್ತುವಾರಿ ಪ್ರಧಾನಿ ನರೇಂದ್ರ ಮೋದಿ ಅವರು ಮೌನ ವಹಿಸಿರುವ ಕುರಿತ ಪ್ರಶ್ನೆಗೆ ಉತ್ತರಿಸಿದ ಚಿದಂಬರಂ ಅವರು, 'ನಾನು ಎಂದಿಗೂ ಮತಯಂತ್ರವನ್ನು ದೂರಿಲ್ಲ. ಅಲ್ಲದೇ ಪಕ್ಷದ ಪ್ರಣಾಳಿಕೆಯಲ್ಲಿ ನಾವು ಇದನ್ನು ಉಲ್ಲೇಖಿಸಿರಲಿಲ್ಲ' ಎಂದು ತಿಳಿಸಿದರು.

'ದಯವಿಟ್ಟು ಪ್ರಣಾಳಿಕೆಯನ್ನು ಮತ್ತೊಮ್ಮೆ ಓದಿ... ನಾವು ಮತ ಹಾಕಿದ ಬಳಿಕ ವಿವಿಪ್ಯಾಟ್ ಯಂತ್ರದಲ್ಲಿ ನಾವು ಯಾವ ಪಕ್ಷಕ್ಕೆ ಮತ ಹಾಕಿದ್ದೇವೆ ಎಂಬುದನ್ನು (ಪಕ್ಷದ ಚಿಹ್ನೆ ಡಿಸ್‌ಪ್ಲೇ ಆಗುವುದು) ಕನಿಷ್ಠ 4ರಿಂದ 5 ಸೆಕೆಂಡುಗಳ ಕಾಲ ತೋರಿಸಬೇಕು. ನಂತರ ವಿವಿಪ್ಯಾಟ್ ಸ್ಲಿಪ್ ಬಾಕ್ಸ್ ಒಳಗೆ ಬೀಳಬೇಕು. ಮತಯಂತ್ರದಲ್ಲಿ ಈ ಸುಧಾರಣೆಯಾಗಬೇಕು ಎಂದು ನಾವು ಪ್ರಣಾಳಿಕೆಯಲ್ಲಿ ತಿಳಿಸಿದ್ದೇವೆ. ಆದರೆ, ವಿವಿಪ್ಯಾಟ್‌ನ ಸ್ಲಿಪ್ ತಕ್ಷಣವೇ ಬಾಕ್ಸ್‌ನಲ್ಲಿ ಬೀಳುತ್ತದೆ. ಮತದಾರನಿಗೆ ಇದು ಗೊಂದಲವಾಗುತ್ತದೆ. ಈ ಒಂದು ಸುಧಾರಣೆಯಾದರೆ ಮತಯಂತ್ರ–ವಿವಿಪ್ಯಾಟ್ ವ್ಯವಸ್ಥೆ ಕುರಿತು ಯಾರಿಗೂ ಅನುಮಾನ ಇರುವುದಿಲ್ಲ' ಎಂದರು.

ಜೂ.4ರಂದು ಷೇರು ಮಾರುಕಟ್ಟೆ ಕುಸಿತ: ತನಿಖೆ ಕೋರಿ 'ಸುಪ್ರೀಂ'ಗೆ ಅರ್ಜಿ



ನವದೆಹಲಿ: ಲೋಕಸಭಾ ಚುನಾವಣೆಯ ಮತ ಎಣಿಕೆ ನಡೆದ ಜೂನ್ 4ರಂದು ಷೇರು ಮಾರುಕಟ್ಟೆ ಭಾರಿ ಪ್ರಮಾಣದಲ್ಲಿ ಕುಸಿತವಾಗಿದ್ದರ ಕುರಿತು ತನಿಖೆಗೆ ಆದೇಶಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ವಕೀಲ ವಿಶಾಲ್ ತಿವಾರಿ ಎಂಬುವವರು ಈ ಕುರಿತು ಅರ್ಜಿ ಸಲ್ಲಿಸಿದ್ದಾರೆ. 'ಜೂನ್ 4ರಂದು ಷೇರು ಮಾರುಕಟ್ಟೆ ಕುಸಿದ ಪರಿಣಾಮ ಹೂಡಿಕೆದಾರರಿಗೆ ಭಾರಿ ನಷ್ಟ ಉಂಟಾಗಿತ್ತು. ಈ ಕುರಿತು ಸಮಗ್ರ ವರದಿ ಸಲ್ಲಿಸುವಂತೆ ಕೇಂದ್ರ ಸರ್ಕಾರ ಹಾಗೂ ಸೆಬಿಗೆ ನಿರ್ದೇಶನ ನೀಡಬೇಕು' ಎಂದೂ ಅವರು ಕೋರಿದ್ದಾರೆ.



ಸುಭಾಷಿತ

ಮನುಷ್ಯನ ಸ್ವಭಾವ ಮತ್ತು ವಕ್ರ ಗುಣಗಳನ್ನು ಲೆಕ್ಕ ಹಾಕುವುದೇಕೆ? ಸುರೆ, ವಿಷ ಹಾಗೂ ಅಮೃತವು ಸಮುದ್ರದಲ್ಲಿ ಸಹೋದರರಂತೆ ಜೊತೆಯಾಗಿ ಹುಟ್ಟಿದವೇ ತಾನೆ?

-ಡಿ.ವಿ.ಜಿ.

ಜನರ ತೀರ್ಪಿನ ಹಿಂದೆ ಸಂದೇಶ ಕಿವಿಗೊಡುವ ಕೆಲಸ ಆಗಬೇಕಿದೆ

ಎರಡು ರಾಜ್ಯಗಳ ಲೋಕಸಭಾ ಕ್ಷೇತ್ರಗಳಿಂದ ಚುನಾವಣಾ ಕಣಕ್ಕೆ ಇಳಿದಿದ್ದ ಇಬ್ಬರು ಅಭ್ಯರ್ಥಿಗಳ ಗೆಲುವು ದೇಶದ ಗಮನ ಸೆಳೆದಿದೆ. ಇವರಿಬ್ಬರೂ ಜೈಲಿನಿಂದ ಸ್ಪರ್ಧಿಸಿದ್ದರು. ಇಬ್ಬರ ವಿರುದ್ಧವೂ ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ) ಹಾಗೂ ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆಯ (ಯುಎಪಿಎ) ಅಡಿಯಲ್ಲಿ ಗಂಭೀರ ಸ್ವರೂಪದ ಪ್ರಕರಣಗಳು ದಾಖಲಾಗಿವೆ. ಮತೀಯ ತೀವ್ರಗಾಮಿಯಾಗಿ ಗುರುತಿಸಿಕೊಂಡಿರುವ ಇನ್ನೂ ಒಬ್ಬ ವ್ಯಕ್ತಿ ಕೂಡ ಲೋಕಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ. ಇವರೆಲ್ಲರೂ ಪಕ್ಷೇತರ ಅಭ್ಯರ್ಥಿಗಳಾಗಿ ಕಣಕ್ಕೆ ಇಳಿದು, ಮುಖ್ಯವಾಹಿನಿಯ ರಾಜಕೀಯ ಪಕ್ಷಗಳ ಅಭ್ಯರ್ಥಿಗಳ ಎದುರು ಜಯ ಸಾಧಿಸಿದ್ದಾರೆ. ವಾರಿಸ್ ಪಂಜಾಬ್ ದೆ ಮುಖ್ಯಸ್ಥ ಹಾಗೂ ಧಾರ್ಮಿಕ ಬೋಧಕ, ಡಿಬ್ರುಗಢ ಜೈಲಿನಲ್ಲಿ ಬಂಧಿಯಾಗಿರುವ ಅಮೃತಪಾಲ್ ಸಿಂಗ್ ಅವರು ಪಂಜಾಬ್‌ನ ಖಡೂರ್ ಸಾಹಿಬ್ ಕ್ಷೇತ್ರದಲ್ಲಿ ಗೆಲುವು ಕಂಡಿದ್ದಾರೆ. ಇಂದಿರಾ ಗಾಂಧಿ ಅವರನ್ನು ಹತ್ಯೆ ಮಾಡಿದ ಬೇಅಂತ್ ಸಿಂಗ್ ಪುತ್ರ ಸರಬ್ಜಿತ್ ಸಿಂಗ್ ಖಾಲ್ಸಾ ಅವರು ಫರೀದ್‌ಕೋಟ್ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದಾರೆ. ಭಯೋತ್ಪಾದನಾ ಕೃತ್ಯವೊಂದಕ್ಕೆ ಹಣದ ನೆರವು ಒದಗಿಸಿದ ಆರೋಪದ ಅಡಿ ತಿಹಾರ್ ಜೈಲಿನಲ್ಲಿ ಇರುವ ಎಂಜಿನಿಯರ್ ರಶೀದ್ ಅವರು ನ್ಯಾಷನಲ್ ಕಾನ್ಫರೆನ್ಸ್ ಮುಖಂಡ ಒಮರ್ ಅಬ್ದುಲ್ಲಾ ಅವರನ್ನು ಬಾರಾಮುಲ್ಲಾ ಕ್ಷೇತ್ರದಲ್ಲಿ ಸೋಲಿಸಿದ್ದಾರೆ. ಮುಖ್ಯವಾಹಿನಿಯ ರಾಜಕೀಯ ಪಕ್ಷಗಳಿಗೆ ಈ ಕ್ಷೇತ್ರಗಳಲ್ಲಿ ಜನರ ಭಾವನೆಗಳಿಗೆ ಸ್ಪಂದಿಸಲು, ಅವರ ನಿರ್ದಿಷ್ಟ ಸಮಸ್ಯೆಗಳಿಗೆ ಸ್ಪಂದಿಸಲು ಆಗಲಿಲ್ಲ ಎಂಬುದನ್ನು ಈ ಕ್ಷೇತ್ರಗಳ ಚುನಾವಣಾ ಫಲಿತಾಂಶ ಹೇಳುತ್ತಿದೆ.



ಲೋಕಸಭಾ ಚುನಾವಣೆಗೆ ಜೈಲಿನಿಂದ ಸ್ಪರ್ಧಿಸಿ ಗೆದ್ದಿರುವುದರ ಹಿಂದಿನ ಕಾರಣಗಳಿಗೆ ಸ್ಪಂದಿಸುವ ಕೆಲಸ ಆಗಬೇಕು

ಅಮೃತಪಾಲ್ ಸಿಂಗ್ ಮತ್ತು ಸರಬ್ಜಿತ್ ಸಿಂಗ್ ಅವರು ಕಾಂಗ್ರೆಸ್, ಎಎಪಿ ಹಾಗೂ ಅಕಾಲಿದಳದ ಅಭ್ಯರ್ಥಿಗಳನ್ನು ಭಾರಿ ಅಂತರದಿಂದ ಸೋಲಿಸಿದ್ದಾರೆ. ಕಳೆದ ಕೆಲವು ವರ್ಷಗಳ ಅವಧಿಯಲ್ಲಿ ಪಂಜಾಬ್‌ನ ಸಾಮಾಜಿಕ ಹಾಗೂ ರಾಜಕೀಯ ಬದುಕಿನಲ್ಲಿ ಬಹಳಷ್ಟು ಬದಲಾವಣೆಗಳು ಆಗಿವೆ. ಭಿಂದ್ರನ್‌ವಾಲೆ ನೇತೃತ್ವದ ಉಗ್ರವಾದಿ ಚಟುವಟಿಕೆಗಳು 1990ರ ದಶಕದಲ್ಲಿ ಕೊನೆಗೊಂಡಿದ್ದರೂ, ನಂತರದ ವರ್ಷಗಳಲ್ಲಿ ರಾಜ್ಯವು ಆರ್ಥಿಕವಾಗಿ ಕುಸಿತ, ನಿರುದ್ಯೋಗ ಹೆಚ್ಚಳ, ಮಾದಕ ವಸ್ತುಗಳ ವ್ಯಾಪಕ ಬಳಕೆ, ಅಲ್ಲಿ-ಇಲ್ಲಿ ವರದಿಯಾಗುವ ಭಯೋತ್ಪಾದಕ ಕೃತ್ಯಗಳ ಸಮಸ್ಯೆಯನ್ನು ಎದುರಿಸಿದೆ. ಅಕಾಲಿದಳ ಹಾಗೂ ಬಿಜೆಪಿ ನಡುವಿನ ಹೊಂದಾಣಿಕೆಯು ಮುರಿದುಬಿದ್ದಿದ್ದು, ಕೆಲವು ಪ್ರದೇಶಗಳಲ್ಲಿ ರಾಜಕೀಯದ ಹಿಂದೆ ಇರುವ ಕೋಮುವಾದಿ ನೆಲೆಗಳ ಮೇಲೆ ಒಂದಿಷ್ಟು ಬೆಳಕು ಚೆಲ್ಲುವ ಕೆಲಸ ಆಗಿದೆ. ಎಎಪಿಯು ಪ್ರಭಾವಶಾಲಿಯಾಗಿ ಬೆಳೆದ ನಂತರದಲ್ಲಿ ಹಲವು ಕಡೆಗಳಲ್ಲಿ ಮುಖ್ಯವಾಹಿನಿಯ ರಾಜಕಾರಣವು ದುರ್ಬಲಗೊಂಡಿತು. ಅಮೃತಪಾಲ್ ಸಿಂಗ್ ಅವರು ತಮ್ಮ ಚುನಾವಣಾ ಪ್ರಚಾರಗಳಲ್ಲಿ ಹಾಗೂ ತಮ್ಮ ಬಂಧನ ಆಗುವುದಕ್ಕೂ ಮೊದಲು ಪ್ರಮುಖವಾಗಿ ಹೇಳಿದ್ದ ಒಂದು ಸಂಗತಿ ರಾಜ್ಯದಲ್ಲಿ ವ್ಯಾಪಕವಾಗಿರುವ ಮಾದಕವಸ್ತು ಸೇವನೆಯ ಕುರಿತಾಗಿತ್ತು. ಹರಿಯಾಣ ಜೊತೆ ನೀರು ಹಂಚಿಕೆ, 1984ರ ಸಿಖ್ ವಿರೋಧಿ ಗಲಭೆ, ಸಿಖ್ ರಾಜಕೀಯ ಕೈದಿಗಳ ಪೈಕಿ ಹಲವರನ್ನು ಇನ್ನೂ ಜೈಲಿನಲ್ಲಿಯೇ ಇರಿಸಿರುವುದು ಪಂಜಾಬ್‌ನಲ್ಲಿ ಜನರು ಸ್ಪಂದಿಸುವಂತೆ ಮಾಡುವ ಕೆಲವು ಪ್ರಮುಖ ವಿಷಯಗಳು. ರಶೀದ್ ಅವರು ಕಾಶ್ಮೀರದಲ್ಲಿ ಜಯ ಸಾಧಿಸಿರುವುದು ಕೂಡ ಸಾಂಪ್ರದಾಯಿಕ ರಾಜಕಾರಣದ ವಿರುದ್ಧ ದಾಖಲಾಗಿರುವ ಒಂದು ಗೆಲುವು. ಪಿಡಿಪಿ ನಾಯಕಿ, ಕಾಶ್ಮೀರದ ಕುಟುಂಬ ರಾಜಕಾರಣದ ಮುಖವಾಗಿರುವ ಮೆಹಬೂಬಾ ಮುಫ್ತಿ ಅವರು ಅನಂತನಾಗ್-ರಜೌರಿಯಲ್ಲಿ ಸೋಲು ಕಂಡಿದ್ದಾರೆ. ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನವನ್ನು ಮರಳಿ ನೀಡುವುದು, ಅಲ್ಲಿ ವಿಧಾನಸಭಾ ಚುನಾವಣೆಯನ್ನು ನಡೆಸುವುದು ಕೇಂದ್ರ ಸರ್ಕಾರ ಹೇಳಿದಂತೆ ಆಗಿಲ್ಲ. ಆ ಭರವಸೆಗಳು ಈಡೇರಿಲ್ಲ. ಆದರೆ ಲೋಕಸಭಾ ಚುನಾವಣೆಯಲ್ಲಿ ಇಲ್ಲಿ ಜನ ಹೆಚ್ಚಿನ ಪ್ರಮಾಣದಲ್ಲಿ ಮತ ಚಲಾಯಿಸಿದ್ದಾರೆ. ಇಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ನೀಡಿದ ಕೆಲವು ಭರವಸೆಗಳು ಕೂಡ ಈಡೇರಿಲ್ಲ. ಆದರೆ ಕಾಶ್ಮೀರದ ಜನ ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸಿರುವುದು ಅವರು ಪ್ರಜಾತಂತ್ರದಲ್ಲಿ ಇರಿಸಿರುವ ನಂಬಿಕೆಯನ್ನು ತೋರಿಸುತ್ತಿದೆ. ಚುನಾವಣಾ ಫಲಿತಾಂಶವು ಅಲ್ಲಿನ ರಾಜಕಾರಣದ ಕುರಿತು ಜನರಲ್ಲಿ ಆಗಿರುವ ಭ್ರಮನಿರಸನವನ್ನು ತೋರಿಸುತ್ತಿದೆ.

ಸಾಂಪ್ರದಾಯಿಕ ದೃಷ್ಟಿಕೋನದಿಂದ ನೋಡಿದಾಗ, ಜಯ ಸಾಧಿಸಿರುವ ಮೂರೂ ಮಂದಿ ತೀವ್ರಗಾಮಿಗಳಾಗಿ, ಪಕ್ಷಗಳು ಕಟ್ಟಿದ ವ್ಯವಸ್ಥೆಗೆ ಹೊರಗಿನವರಾಗಿ ಕಾಣಿಸುತ್ತಾರೆ. ಆದರೆ ಅವರನ್ನು ಚುನಾಯಿಸಿದ ಜನರು ಒಂದು ಸಂದೇಶವನ್ನು ರವಾನಿಸಿ ಆಗಿದೆ. ಆ ಸಂದೇಶಕ್ಕೆ ಕಿವಿಗೊಡುವ ಕೆಲಸ ಆಗಬೇಕಿದೆ. ಜಯ ಸಾಧಿಸಿರುವವರನ್ನು ಜೊತೆಗೆ ಸೇರಿಸಿಕೊಳ್ಳುವ ಕೆಲಸ ಆಗಬೇಕು, ಅವರ ಜಯದ ಹಿಂದಿನ ಕಾರಣಗಳಿಗೆ ಸ್ಪಂದಿಸುವ ಕೆಲಸವೂ ಆಗಬೇಕು. ಇವನ್ನೆಲ್ಲ ಪ್ರಜಾತಂತ್ರ ವ್ಯವಸ್ಥೆಯ ಚೌಕಟ್ಟಿನಲ್ಲಿ ಮಾತ್ರ ಮಾಡಲು ಸಾಧ್ಯ. ಭಿನ್ನಮತವನ್ನು ಮೃದುವಾಗಿಸುವ ಶಕ್ತಿಯು ಪ್ರಜಾತಂತ್ರ ವ್ಯವಸ್ಥೆಗೆ ಇದೆ.

ದಿನದ ಟ್ವೀಟ್



ಭರವಸೆ ಈಡೇರಲಿ, ವಿಶ್ವಾಸ ಉಳಿಯಲಿ

ಚುನಾವಣಾ ಫಲಿತಾಂಶದಿಂದ ಸಂತೋಷವಾಗಿದೆ ಮತ್ತು ತೃಪ್ತಿಯಾಗಿದೆ. ಹೆಚ್ಚು ಒಳಗೊಳ್ಳುವ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯ ಭರವಸೆಯನ್ನು ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ 3.0 ಈಡೇರಿಸುತ್ತದೆ ಎಂಬ ವಿಶ್ವಾಸವನ್ನು ಹೊಂದಿದ್ದೇನೆ. ಜನರ ಕೈಯಲ್ಲಿ ಹೆಚ್ಚು ಹಣ ಉಳಿಯುವಂತೆ ಮಾಡಲಿ, ತೆರಿಗೆಯನ್ನು ತಗ್ಗಿಸಲಿ, ಇಚ್ಛಾನುಸಾರದ ನಡೆಯನ್ನು ಕಡಿಮೆ ಮಾಡಿಕೊಳ್ಳಲಿ. ಉದ್ಯೋಗಾವಕಾಶ ಸೃಷ್ಟಿ ಮತ್ತು ಬೆಲೆ ಏರಿಕೆ ನಿಯಂತ್ರಣದತ್ತ ಗಮನ ಕೇಂದ್ರೀಕರಿಸಲಿ.

ನವರೂಪ್ ಸಿಂಗ್, ವಕೀಲ

ಕಿಡಿನುಡಿ



ಪ್ರಸಕ್ತ ನೀಟ್ ಫಲಿತಾಂಶದ ಬಗ್ಗೆ ಕೇಳಿಬರುತ್ತಿರುವ ಆಕ್ಷೇಪಗಳು ಈ ಪರೀಕ್ಷೆಗೆ ನಮ್ಮ ವಿರೋಧವನ್ನು ಸಮರ್ಥಿಸುವಂತೆ ಇವೆ. ಪ್ರಶ್ನೆಪತ್ರಿಕೆ ಸೋರಿಕೆ, ನಿರ್ದಿಷ್ಟ ಕೇಂದ್ರಗಳಲ್ಲಿ ಟಾಪರ್‌ಗಳನ್ನು ಗುಂಪುಗೂಡಿಸುವುದು ಮತ್ತು ಅಸಾಧ್ಯ ಎನ್ನುವ ರೀತಿಯಲ್ಲಿ ಅವರಿಗೆ ಅಂಕಗಳನ್ನು ದಯಪಾಲಿಸುವುದು... ಇವೆಲ್ಲವೂ ಕೇಂದ್ರ ಸರ್ಕಾರದ ಕೇಂದ್ರೀಕರಣದ ಅಪಾಯವನ್ನು ಬಹಿರಂಗಪಡಿಸಿವೆ...

ಎಂ.ಕೆ.ಸ್ಟಾಲಿನ್ ತಮಿಳುನಾಡು ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಮಂಗಳವಾರ, 8-6-1999

• ಬಸ್ ಜಲಾಶಯಕ್ಕೆ ಬಿದ್ದು 100 ಸಾವು

ದಾವಣಗೆರೆ, ಜೂನ್ 7– ಹರಿಹರ ತಾಲ್ಲೂಕು ದೇವರ ಬೆಳಕೆರೆ ಬಳಿ ಶ್ಯಾಗಲಹಳ್ಳ ಮತ್ತು ಸೂಳೆಕೆರೆ ಹಳ್ಳದ ಸಂಗಮದಲ್ಲಿ ಕಟ್ಟಿದ ಜಲಾಶಯಕ್ಕೆ ಇಂದು ಸಂಜೆ ಖಾಸಗಿ ಬಸ್ ಬಿದ್ದು ಸುಮಾರು 50 ಶಾಲಾ ಮಕ್ಕಳು ಸೇರಿ 100ಕ್ಕೂ ಹೆಚ್ಚು ಮಂದಿ ಜಲಸಮಾಧಿ ಆಗಿರಬಹುದು ಎಂದು ಶಂಕಿಸಲಾಗಿದೆ.

ಬಸ್ಸಿನಲ್ಲಿ ದಾವಣಗೆರೆ ಜಿಲ್ಲಾ ಪಂಚಾಯಿತಿ ಸದಸ್ಯೆಯೊಬ್ಬರು ಇದ್ದು, ಅವರೂ ನೀರುಪಾಲಾಗಿರುವ ಶಂಕೆ ಇದೆ. ಸತತ ಪ್ರಯತ್ನದಿಂದ ಮಧ್ಯರಾತ್ರಿವರೆಗೆ 40 ಶವಗಳನ್ನು ಮಾತ್ರ ಹೊರತೆಗೆಯಲು ಸಾಧ್ಯವಾಗಿದೆ.

• ದಾಳಿಗೆ ದಿಗಿಲು: ಪಾಕ್ ಸೈನಿಕ ಪರಾರಿ

ನವದೆಹಲಿ, ಜೂನ್ 7– ಭಾರತದ ಗಡಿ ಪ್ರವೇಶಿಸಲು ಪ್ರಯತ್ನ ನಡೆಸಿದ ಪಾಕಿಸ್ತಾನದ ಸೈನಿಕರು ಮತ್ತು ಮುಜಾಹಿದ್ದೀನ್ ಉಗ್ರಗಾಮಿಗಳನ್ನು ಭಾರತೀಯ ಸೈನಿಕರು ಯಶಸ್ವಿಯಾಗಿ ತಡೆದ ಸೇನಾ ಕಾರ್ಯಾಚರಣೆಯಲ್ಲಿ ಪಾಕಿಸ್ತಾನದ ಕಡೆ ಹೆಚ್ಚು ಸಾವು–ನೋವುಗಳು ಸಂಭವಿಸಿವೆ.

ಬಟಾಲಿಕ್ ವಲಯದಲ್ಲಿ ನಡೆದ ಈ ಪ್ರಯತ್ನವನ್ನು ತಡೆಯುವಾಗ ಪಾಕಿಸ್ತಾನದ ಸೈನಿಕರು ಗುಂಡು ಮತ್ತು ಫಿರಂಗಿ ದಾಳಿ ನಡೆಸಿದರೂ, ಭಾರತೀಯ ಸೇನೆಯ ಕಾರ್ಯಾಚರಣೆಯು ಅವರು, ಹಿಮ್ಮೆಟ್ಟುವಂತೆ ಮಾಡಿದ್ದಾಗಿ ಸೇನಾಧಿಕಾರಿಗಳು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 8-6-1974

• ಶೀಘ್ರ ಚುನಾವಣೆ ವಚನ ಪಡೆಯಲು ವಿಫಲ ಯತ್ನ: ಮೇಲ್ಮನೆಯಲ್ಲಿ ಧರಣಿ

ಬೆಂಗಳೂರು, ಜೂನ್ 7– ಹುಬ್ಬಳ್ಳಿ–ಧಾರವಾಡ ನಗರಸಭೆಯ ಮೇಯರ್, ಉಪ ಮೇಯರ್ ಸ್ಥಾನಗಳಿಗೆ ಶೀಘ್ರ ಚುನಾವಣೆ ಸಂಬಂಧದಲ್ಲಿ, ಸರ್ಕಾರದಿಂದ ಸ್ಪಷ್ಟ ಭರವಸೆ ಪಡೆಯಲು ಅಸಮರ್ಥರಾದ ಜನಸಂಘದ ಇಬ್ಬರು ಸದಸ್ಯರು ಇಂದು ವಿಧಾನಪರಿಷತ್ತಿನಲ್ಲಿ ಧರಣಿ ಸತ್ಯಾಗ್ರಹ ಕುಳಿತರು.

ಚುನಾವಣೆ ನಡೆಯಲು ಜೂನ್ ಅಂತ್ಯದವರೆಗೆ ಕಾಲಾವಧಿ ಇರುವಾಗ, ಸರ್ಕಾರ ಈ ಘಟ್ಟದಲ್ಲಿ ಯಾವ ರೀತಿಯಲ್ಲಿಯೂ ಹಸ್ತಕ್ಷೇಪ ಮಾಡುವಂತಿಲ್ಲ ಎಂಬುದು ಕಾನೂನು ಮಂತ್ರಿ ಡಿ.ಕೆ. ನಾಯ್ಕರ್ ಅವರ ನಿಲುವು.

• ಅಣ್ವಸ್ತ್ರ ಸೇನಾಪಡೆಗೆ ಭಾರತದ ಸಿದ್ಧತೆ

ನವದೆಹಲಿ, ಜೂನ್ 7– ಶಾಂತಿಯುತ ಬಳಕೆಗಾಗಿ ಭಾರತ ಕೈಗೊಂಡ ಪ್ರಯೋಗಾರ್ಥ ಅಣುಸ್ಫೋಟಕ್ಕೆ ಸೇನಾ ಸಜ್ಜಿನ ಉದ್ದೇಶಗಳನ್ನು ಕಲ್ಪಿಸಿ ಪಾಕ್ ಪ್ರಧಾನಿ ಭುಟ್ಟೊ ಇಂದು ಪ್ರಧಾನಿ ಇಂದಿರಾ ಗಾಂಧಿ ಅವರ ಪತ್ರಕ್ಕೆ ಉತ್ತರವಿತ್ತಿದ್ದಾರೆ.

ಶಾಂತಿ, ಪ್ರಗತಿಯ ಉದ್ದೇಶ ಪ್ರತಿಪಾದಿಸಿ ಇಂದಿರಾ ಗಾಂಧಿ ಅವರು ಬರೆದಿದ್ದ ಪತ್ರಕ್ಕೆ 16 ದಿನಗಳ ಬಳಿಕ ಇಂದು ಭುಟ್ಟೊ ಇತ್ತಿರುವ ಉತ್ತರದಲ್ಲಿ ಅಡಕವಾಗಿರುವ ಶಂಕೆಗಳು 'ಆಧಾರರಹಿತ ಆಪಾದನೆಗಳು' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಸ್ವರಣ್ ಸಿಂಗ್ ವಿವರಿಸಿದರು.

ವೈದ್ಯಕೀಯ ವಿದ್ಯಾರ್ಥಿಗಳು ಬರೀ 'ಬೌದ್ಧಿಕ ವೈದ್ಯ'ರಾದರೆ ಸಾಕೆ?

'ನೀಟ್' ಎಂಬ ಕನಸಿನ ಹಿಂದೆ...



ವಿಶ್ಲೇಷಣೆ

ಡಾ. ಕೆ.ಎಸ್.ಪವಿತ್ರ

'ನೀಟ್' ಫಲಿತಾಂಶ ಹೊರಬಿದ್ದಿದೆ. 17- 18ರ ಹರೆಯದ ವಿದ್ಯಾರ್ಥಿಗಳ ಕನಸುಗಳು ವಿವಿಧ ರೂಪ ತಾಳಿವೆ. ಚಿತ್ತಚಂಚಲತೆಗೆ ಕಾರಣವಾಗಬಹುದಾದ ಅನ್ಯ ವಿಷಯಗಳತ್ತ ಹೆಚ್ಚು ಗಮನಹರಿಸದೆ, ವರ್ಷಗಟ್ಟಲೆ ಬರೀ ಪುಸ್ತಕದ ಸಾಂಗತ್ಯದಲ್ಲೇ ಕಳೆದವರು ಈ ಮಕ್ಕಳು!

ಅಪ್ಪ– ಅಮ್ಮಂದಿರಿಗೆ ಅವರವರ ಮಕ್ಕಳ ಚಿಂತೆಯಾದರೆ, ಮನೋವೈದ್ಯೆಯಾದ ನನಗೆ, ಈ ಸಮಯದಲ್ಲಿ 'ನೀಟ್' ಸೃಷ್ಟಿಸುವ ಅತಿಯಾದ ಒತ್ತಡದ ಕಾರಣದಿಂದಲೇ ನನ್ನ ಬಳಿ ಚಿಕಿತ್ಸೆಗಾಗಿ ಬರುತ್ತಿರುವ ಯುವಕ- ಯುವತಿಯರೆಲ್ಲರ ಬಗ್ಗೆ ಚಿಂತೆ. ಅವರ ಫಲಿತಾಂಶ ಏನಾಗಿರಬಹುದು, ನೀಟ್ ಬಗ್ಗೆ ಅಪಾರವಾದ ನಿರೀಕ್ಷೆ ಹೊಂದಿದ್ದ ಅವರಿಗೆ ಅಕಸ್ಮಾತ್ ಕಡಿಮೆ ರ‍್ಯಾಂಕ್ ಬಂದುಬಿಟ್ಟಿದ್ದರೆ ಅದನ್ನು ಅವರು ಹೇಗೆ ಸ್ವೀಕರಿಸಬಹುದು, ವೈದ್ಯಕೀಯ ಸೀಟು ಸಿಗದೇಹೋದರೆ ಅವರ ಮನಃಸ್ಥಿತಿ ಹೇಗಿರಬಹುದು, ಅವರು ಮತ್ತು ಅವರ ಪೋಷಕರು ಆ ಹತಾಶೆಯನ್ನು ಎದುರಿಸಲಾರದೆ, ಕ್ಷಣಿಕ ಆವೇಶಕ್ಕೆ ಒಳಗಾಗಿ ಏನಾದರೂ ಮಾಡಿಕೊಂಡುಬಿಟ್ಟರೆ ಎಂಬೆಲ್ಲ ಚಿಂತೆ.

ಮನೋವೈದ್ಯರ ಈ ಚಿಂತೆ ಸಾಧುವಾದದ್ದೇ ಎಂಬುದನ್ನು ಯುವಕ–ಯುವತಿಯರ ಹೇಳಿಕೆಗಳು, ಅವರ ಕುರಿತು ಇತ್ತೀಚೆಗೆ ಬರುತ್ತಿರುವ ವರದಿಗಳು ಸ್ಪಷ್ಟಪಡಿಸುತ್ತವೆ. ನೀಟ್ ಫಲಿತಾಂಶದ ನಂತರ ಮಕ್ಕಳು ಇನ್‌ಸ್ಟಾಗ್ರಾಂ, ಎಕ್ಸ್ ವೇದಿಕೆಯ ಮೂಲಕ ಹೇಳಿಕೊಳ್ಳುವ 'ಐ ಫೀಲ್ ಲೈಕ್ ಟೇಕಿಂಗ್ ಎ 'ಡ್ರಾಪ್'; ಫ್ರಂ ದಿ ಟೆರೇಸ್'... ಎಂಬ ವಾಕ್ಯ ನೆನಪಾಗುತ್ತದೆ. ಇಲ್ಲಿ 'ಡ್ರಾಪ್' ಎಂಬ ಪದಕ್ಕೆ ಎರಡು ಅರ್ಥಗಳು! ಸಾಮಾನ್ಯವಾಗಿ 'ನೀಟ್'ನಲ್ಲಿ ಚೆನ್ನಾಗಿ ಮಾಡದಿದ್ದವರು ಮತ್ತೊಂದು ವರ್ಷ ಕುಳಿತು ಓದುವುದನ್ನು 'ಯುವ ಭಾಷೆ'ಯಲ್ಲಿ 'ಡ್ರಾಪ್' ಎನ್ನಲಾಗುತ್ತದೆ. ಆದರೆ ಯುವಕನೊಬ್ಬ 'ಡ್ರಾಪ್' ಎಂದು ಹೇಳಿದ್ದರ ಅರ್ಥ ಬೇರೆಯದೇ ಇತ್ತು. ಅಂದರೆ ತಾನು 'ಡ್ರಾಪ್' ಆಗಲು ಹೊರಟಿರುವುದು ಮೇಲ್ಮಹಡಿಯಿಂದ ಅರ್ಥಾತ್ ಪ್ರಾಣ ಕಳೆದುಕೊಳ್ಳಲು ಎಂಬರ್ಥದಲ್ಲಿ!

ನೀಟ್ ಫಲಿತಾಂಶದ ರ‍್ಯಾಂಕ್ ಪಟ್ಟಿ ಹೊರಬಿದ್ದ ನಂತರ, ರಾಜಸ್ಥಾನದ ಕೋಟಾದಲ್ಲಿನ ಯುವತಿಯೊಬ್ಬಳು ಆ ಕುರಿತ ತನ್ನ ಅಸಮಾಧಾನ, ಅನಿಸಿಕೆಯನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಬರೆಯುವ ಗೋಜಿಗೇ ಹೋಗಲಿಲ್ಲ. ಬದಲಾಗಿ, ಸದ್ದಿಲ್ಲದೇ ಬಹುಮಹಡಿ ಕಟ್ಟಡವೊಂದರಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಳು. ಒಂದು ವರ್ಷದ ಈಚೆಗೆ ನೀಟ್‌ಗೆ ಸಂಬಂಧಿಸಿದಂತೆ ಇದು ಹನ್ನೊಂದನೇ ಆತ್ಮಹತ್ಯೆ ಎನ್ನುವುದು ಉಲ್ಲೇಖಾರ್ಹ.

ಈ ಬಾರಿ ನೀಟ್ ಪರೀಕ್ಷೆಯನ್ನು ಸುಮಾರು 24 ಲಕ್ಷ ವಿದ್ಯಾರ್ಥಿಗಳು ತೆಗೆದುಕೊಂಡಿದ್ದರು ಎನ್ನುವುದೇ ಒಂದು ವಿಸ್ಮಯಕಾರಿ ಸಂಗತಿ. ಅವರಲ್ಲಿ ಬಹುಶಃ ಹೆಚ್ಚಿನವರು ವೈದ್ಯಕೀಯ ಕ್ಷೇತ್ರವನ್ನು ಪ್ರವೇಶಿಸುವ ಹಂಬಲದಿಂದಲೇ ಪರೀಕ್ಷೆ ಬರೆದವರು. ಯಾವುದೇ ಪರೀಕ್ಷೆಯ ಫಲಿತಾಂಶ ಹೊರಬಿದ್ದಾಗ ನಡೆಯುವ ದೂಷಾರೋಪಣ, ಹಲವು ರೀತಿಯ ಗೊಂದಲಗಳು ಈ ಬಾರಿಯೂ ಸಹಜವಾಗಿ ನಡೆದಿವೆ. ಪ್ರಶ್ನೆಪತ್ರಿಕೆ ಬಯಲಾಗಿರಬಹುದು ಎಂಬ ಎಂದಿನ ಅನುಮಾನ, ಹಲವು ಬಾರಿ ಪ್ರಯತ್ನಿಸಿದವರಿಗೆ ಉತ್ತಮವಾದ ರ‍್ಯಾಂಕ್ ಬರುವುದು, ನೀಟ್ ನಡೆಸುವ ಎನ್‌ಟಿಎ ಹೆಸರನ್ನು 'ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ' ಎಂಬುದಕ್ಕೆ ಬದಲಾಗಿ 'ನ್ಯಾಷನಲ್ ಟ್ರೌಮಾ ಏಜೆನ್ಸಿ' ಎಂದು ವಿದ್ಯಾರ್ಥಿಗಳು ಅಣಕವಾಡುವುದು, ಮತ್ತೊಂದು ವರ್ಷ ಬರೆದೇಬಿಡೋಣ ಎಂದು ಹಲವರು ಮತ್ತೆ ಓದಲು ಆರಂಭಿಸುವಂತಹ ವಿದ್ಯಮಾನಗಳೆಲ್ಲವೂ ಹಿಂದಿನ ವರ್ಷಗಳಂತೆಯೇ ಈಗಲೂ ಕಂಡುಬಂದಿವೆ.

ಇವುಗಳೊಂದಿಗೆ 'ನೀಟ್ ಒತ್ತಡ' ಹೊಸ ಹೊಸ ರೂಪಗಳನ್ನು ಪಡೆದುಕೊಳ್ಳುತ್ತಿದೆ. ನೀಟ್ ಬರೆಯುವ ಸಲುವಾಗಿ ಸುಮಾರು ಎರಡು ವರ್ಷಗಳ ಕಾಲ ಅವಿರತವಾಗಿ ಶ್ರಮಿಸುವ ಹದಿಹರೆಯದ ಮಕ್ಕಳಲ್ಲಿ ಒತ್ತಡ ಎಂದು ಹೊರನೋಟಕ್ಕೆ ಗೊತ್ತಾಗದ, ಆದರೆ ಒತ್ತಡವೇ ಮೂಲವಾದ ಹಲವು ಕಾಯಿಲೆಗಳು ಕಂಡುಬರುತ್ತಿವೆ. ದೈಹಿಕ ವ್ಯಾಯಾಮವಿರದೆ ಬೊಜ್ಜು, ದೇಹಕ್ಕೆ ಸೂರ್ಯನ ಬೆಳಕು ಬೀಳದೆ ವಿಟಮಿನ್ 'ಡಿ' ಕೊರತೆ, ನಿದ್ರಾಹೀನತೆಯಿಂದ ತಲೆನೋವು, ಆತಂಕ, ಅಪೌಷ್ಟಿಕತೆ, ಚರ್ಮದ ತೊಂದರೆಯಂತಹ ಸಮಸ್ಯೆಗಳು ಅವರನ್ನು ಕಾಡುತ್ತವೆ. ಇವೆಲ್ಲದರ ಮೂಲವೇ ಒತ್ತಡ ಎಂಬುದನ್ನು ಸ್ವತಃ ವಿದ್ಯಾರ್ಥಿಗಳಾಗಲಿ, ಅವರ ತಂದೆ-ತಾಯಿಯಾಗಲಿ ಅರ್ಥ ಮಾಡಿಕೊಳ್ಳದೆ, ಜೀವನಶೈಲಿಯ ಬಗೆಗೆ ತಲೆಕೆಡಿಸಿಕೊಳ್ಳದೆ, ವಿವಿಧ ಆಸ್ಪತ್ರೆಗಳಿಗೆ ಸುತ್ತಾಡಿ ಈ ಸಮಸ್ಯೆಗಳಿಗೆ ಆ ಕ್ಷಣದ ಚಿಕಿತ್ಸೆ ಪಡೆದು, ಓದುವ ಸಲುವಾಗಿ ಮತ್ತೆ ಓಡಲು ಮುಂದಾಗುತ್ತಾರೆ.

ನೀಟ್‌ಗಾಗಿ ನಡೆಸುವ ಸಿದ್ಧತೆಯು ತಂದೊಡ್ಡುವ ಒತ್ತಡವನ್ನು ಹೊರಹಾಕಲಾಗದ, ನೀಟ್‌ನಲ್ಲಿ ರ‍್ಯಾಂಕ್ ಗಳಿಕೆಗೆ ಸಂಬಂಧಿಸಿದಂತೆ ತಮಗಾಗುವ ನಿರಾಶೆ, ಓದಲಾಗದ ತಮ್ಮ ಅಸಾಮರ್ಥ್ಯವನ್ನು ಒಪ್ಪಿಕೊಳ್ಳಲಾಗದ ಕೆಲವು ವಿದ್ಯಾರ್ಥಿಗಳು ಮೈ ಮೇಲೆ ದೇವರು, ದೆವ್ವ, ಆತ್ಮಗಳನ್ನು ಆವಾಹಿಸಿಕೊಳ್ಳುವುದೂ ಉಂಟು! 'ದೇವರು, ದೆವ್ವ, ಆತ್ಮಗಳೆಲ್ಲವೂ ನಮ್ಮ ಮೆದುಳು–ಮನಸ್ಸುಗಳ ಒಳಗಿವೆ. ದೇವರಿಗೆ ಕೈಮುಗಿದರೆ ಸಾಕು. ನಿಮಗೆ ಆದಷ್ಟು ಓದಿ. ಇತರ ವೃತ್ತಿಗಳು ಬೇಕಾದಷ್ಟಿವೆ. ಅವುಗಳಲ್ಲಿ ಒಂದನ್ನು ನೀವು ಆಯ್ದುಕೊಳ್ಳಬಹುದು' ಎಂಬ ಸಲಹೆಯನ್ನು ವಿದ್ಯಾರ್ಥಿಗಳಷ್ಟೇ ಅಲ್ಲ, ಅವರ ಪೋಷಕರೂ ಬಡಪೆಟ್ಟಿಗೆ ಒಪ್ಪಲಾರರು!


ವೈದ್ಯಕೀಯ ವೃತ್ತಿ ಇಂದು 'ಸುಲಭ' ಎನ್ನುವಂತೇನೂ ಉಳಿದಿಲ್ಲ. ವೈದ್ಯ ವೃತ್ತಿಯ ಬಗ್ಗೆ ಸಮಾಜದಲ್ಲಿ ನಕಾರಾತ್ಮಕ ಧೋರಣೆ ಧಾರಾಳವಾಗಿದೆ. ಹಾಗೆಯೇ ವೈದ್ಯ ವೃತ್ತಿಯಲ್ಲಿ ಹೆಚ್ಚಿನ ಗಳಿಕೆಯೂ ಇಂದು ಸುಲಭಸಾಧ್ಯ ಎನ್ನುವಂತಿಲ್ಲ. ಇತರ ವೃತ್ತಿಗಳಿಗೆ ಹೋಲಿಸಿದರೆ ಈ ವೃತ್ತಿಯಲ್ಲಿ 'ಪರಿಶ್ರಮ ಹೆಚ್ಚು, ಪರಿಶ್ರಮಕ್ಕೆ ತಕ್ಕಂತೆ ಬರುವ ಆದಾಯ ಕಡಿಮೆ' ಎನ್ನುವುದನ್ನು ಹೆಚ್ಚಿನ ವೈದ್ಯರು ಒಪ್ಪುತ್ತಾರೆ. ಸೇವಾ ಮನೋಭಾವವಂತೂ ಇಡೀ ಸಮಾಜದಲ್ಲಿಯೇ ವಿರಳವಾಗಿ ನೋಡುವಂಥ ಮೌಲ್ಯವಾಗುತ್ತಿದೆ. ಹೀಗಿರುವಾಗ, ವೈದ್ಯ ವೃತ್ತಿಯ ಬಗೆಗಿನ 'ಹಂಬಲ', 'ಆಕರ್ಷಣೆ' ಎಂಬುದು ಯಾವ ಅಂಶಗಳನ್ನು ಈ ಯುವಜನರಿಗೆ ಸೂಚಿಸುತ್ತಿರಬಹುದು?!

ನೀಟ್ ಮೂಲಕ ವೈದ್ಯಕೀಯ ವೃತ್ತಿಗಾಗಿ ಸಮಾಜ ಆಯ್ದುಕೊಳ್ಳುತ್ತಿರುವ ವಿದ್ಯಾರ್ಥಿಗಳು ನಾಳೆ ಬರೀ 'ಬೌದ್ಧಿಕ ವೈದ್ಯ'ರಾದರೆ? ಹತಾಶೆ, ನಿರಾಸೆಯನ್ನು ಎದುರಿಸುವ ಜೀವನಕೌಶಲವನ್ನೇ ಕಲಿಯದ ಮಕ್ಕಳು ಯಾವುದೇ ವೃತ್ತಿಯನ್ನು ಹೊಕ್ಕರೂ ಅವರ ಭವಿಷ್ಯದ ಮತ್ತು ಆ ವೃತ್ತಿಯ ಗತಿ ಏನು? ಕೋಚಿಂಗ್ ಕೇಂದ್ರಗಳ ಮೂಲಕ ನಾವು ಹೀಗೆ ಸಿದ್ಧಪಡಿಸುತ್ತಿರುವ ಯುವ ಪ್ರಜೆಗಳು, ದೇಶ ಒತ್ತಟ್ಟಿಗಿರಲಿ, ತಮ್ಮ ದೇಹ, ಮನಸ್ಸನ್ನಾದರೂ ಹೇಗೆ ಕಾಯ್ದುಕೊಂಡಾರು? ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಾದಂತಹ ಅಂಶಗಳು ಇವು.

ಶಿಕ್ಷಣ ಕ್ಷೇತ್ರವು 'ನೀಟ್' ಪರೀಕ್ಷೆಯನ್ನೇ ವಾಣಿಜ್ಯೋದ್ಯಮವಾಗಿ ಮಾಡಿಕೊಂಡ ಬಗೆಯೂ ಬೆರಗು ಮೂಡಿಸುವಂಥದ್ದೇ. ವಿಜ್ಞಾನದ ಕಲಿಕೆಗೆಂದು ಕಾಲೇಜು ಮೆಟ್ಟಿಲು ಹತ್ತಿದ ಮಕ್ಕಳಿದ್ದರೆ ಪ್ರತಿದಿನವೂ 'ನಿಮ್ಮ ಮಗ ಅಥವಾ ಮಗಳು ಇಂತಹ ಕ್ಲಾಸಿನಲ್ಲಿದ್ದಾರೆ ತಾನೆ, ಅವರನ್ನು ಕೋಚಿಂಗ್‌ಗೆ ಸೇರಿಸಿ, ಮೆಡಿಕಲ್ ಸೀಟು ಗ್ಯಾರಂಟಿ' ಎಂಬಂಥ ಕನಿಷ್ಠ 10 ಕರೆಗಳಾದರೂ ಪೋಷಕರಿಗೆ ಬರುತ್ತವೆ! ಆದರೆ ಒಂದು ಉದ್ಯಮ ಬೃಹದಾಕಾರವಾಗಿ ಬೆಳೆಯಲು ಗ್ರಾಹಕರಿಂದ ಬೇಡಿಕೆ ಇರಬೇಕಷ್ಟೆ!

ಇದಕ್ಕೆಲ್ಲ ಪರಿಹಾರ? ಮತ್ತೆ ಅದೇ ಮೂಲಭೂತ ತತ್ವಗಳೇ. ಮಕ್ಕಳ ಬಗೆಗಿನ ಆಸೆ, ನಿರೀಕ್ಷೆಗಳಿಗೆ ಮಿತಿ ಹಾಕಿಕೊಳ್ಳುವುದು, ವೈದ್ಯವೃತ್ತಿಯ ವಾಸ್ತವ ಸ್ಥಿತಿಯ ಬಗೆಗೆ ಅರಿವು ಹೊಂದುವುದು, ಉತ್ಪ್ರೇಕ್ಷೆಯನ್ನು ದೂರವಿಡುವುದು, ಮಕ್ಕಳ ಓದುವಿಕೆಯ ಸಾಮರ್ಥ್ಯದ ಸರಿಯಾದ ಅಂದಾಜು, ಮಕ್ಕಳಲ್ಲಿ ತಮ್ಮ ಸಾಮರ್ಥ್ಯ, ಅವಕಾಶಗಳಿಗೆ ಅನುಗುಣವಾಗಿ ವೃತ್ತಿಯನ್ನು ಆಯ್ದುಕೊಳ್ಳುವ ಧೈರ್ಯ, ಯಾವುದೇ ವೃತ್ತಿಯನ್ನು ಪ್ರೀತಿಸುವ, ಅದರಲ್ಲಿ ಸಾಧಿಸುವ ಮನಸ್ಸು, ಜೀವನದಲ್ಲಿ ಸಂತೋಷವಾಗಿರುವ ಗುರಿ, 'ಸಂತೋಷ' ಎಂದರೆ ಏನು ಎಂಬುದರ ಸರಿಯಾದ ಪರಿಕಲ್ಪನೆ ಇರಬೇಕಾದುದು ಬಹಳ ಮುಖ್ಯ.

ಸಾಮಾನ್ಯವಾಗಿ ನಾವು ಅಂದುಕೊಳ್ಳುವಂತೆ, ನೀಟ್ ಸುತ್ತಲಿನ ಸುಖಾಂತ- ದುಃಖಾಂತವು ಜೀವನದ ಸುಖ- ದುಃಖದ ಅಂತ್ಯವೇನಲ್ಲ! ಈ ಅರಿವು ಮೊದಲು ಅಪ್ಪ-ಅಮ್ಮನಲ್ಲಿ, ಆ ಮೂಲಕ ಅವರ ಮಕ್ಕಳಲ್ಲಿ ಮೂಡಬೇಕಾದ ಹೊತ್ತು ಇದು.



ಚುರುಮುರಿ



ಕಿಂಗ್‌ಮೇಕರ್!

• ಗುರು ಪಿ.ಎಸ್.

ಮನೆಯಲ್ಲಿನ ಫೋನ್‌ಗಳೆಲ್ಲ ಒಂದೇ ಸಮನೆ ರಿಂಗಣಿಸತೊಡಗಿದವು. ಪಿ.ಎ. ಓಡಿ ಬಂದು ಒಂದೇ ಉಸಿರಲ್ಲಿ ಹೇಳತೊಡಗಿದ, 'ಸರ್, ಎರಡೂ ಪಾರ್ಟಿಯವರು ಕಾಲ್ ಮಾಡ್ತಿದಾರೆ'

'ಯಾಕಂತೆ?'

'ನಿಮ್ಮ ಸಪೋರ್ಟ್ ಬೇಕಂತೆ ಸರ್, ನೀವೀಗ ಕಿಂಗ್‌ಮೇಕರ್?'

'ಹೌದಾ?!' ಖುಷಿಯಲ್ಲಿ ಎದ್ದು ನಿಂತೆ.

'ಹೌದು ಸರ್, ನಿಮ್ಮ ಸಪೋರ್ಟ್ ಯಾರಿಗೆ ಸಿಗುತ್ತೋ ಅವರೇ ಸರ್ಕಾರ ರಚಿಸೋದು?'

'ಹೌದಾ?! ಯಾರಿಗೆ ಬೆಂಬಲ ಕೊಡಲಿ?'

'ಸಿಂಪಲ್ ಸರ್, ಯಾರಿಂದ ಜಾಸ್ತಿ ಲಾಭ ಸಿಗುತ್ತೋ ಅವರಿಗೆ ಕೊಡಿ'.

'ಕರೆಕ್ಟ್, ಈ ಪಾರ್ಟಿಯವರಿಗೆ ಕಾಲ್ ಮಾಡಿಕೊಡು, ಮಾತಾಡ್ತೀನಿ'.

ಪಿ.ಎ. ಫೋನ್ ಕೊಟ್ಟ. 'ನಮ್ಮ ಪಾರ್ಟಿಯವರು ನಾಲ್ಕು ಜನ ಕ್ಯಾಬಿನೆಟ್ ಮಿನಿಸ್ಟರ್, ಆರು ಜನ ಸ್ಟೇಟ್ ಮಿನಿಸ್ಟರ್ ಆಗಬೇಕು, ಒಬ್ಬರನ್ನ ಸ್ಪೀಕರ್ ಮಾಡಬೇಕು' ಎನ್ನುತ್ತಿದ್ದಂತೆ, ಎಲ್ಲ ಕಂಡೀಷನ್‌ಗಳಿಗೂ ಗ್ರೀನ್ ಸಿಗ್ನಲ್ ಸಿಕ್ತು. 'ಇಷ್ಟು ಬೇಗ ಓಕೆ ಆಯ್ತಲ್ಲ' ಅಂದ್ಕೊಂಡು, 'ನನ್ನವು ಇನ್ನೊಂದೆರಡು ಕಂಡೀಷನ್‌ಗಳಿವೆ' ಎಂದೆ.

'ಬೋಲೋ ಜೀ' ಎಂದಿತು ಆ ಕಡೆಯ ಧ್ವನಿ.

'ನೀವು ದಿನಕ್ಕೆ ಒಂದೇ ಡ್ರೆಸ್ ಹಾಕಬೇಕು, ಮನ್ ಕಿ ಬಾತ್‌ನಲ್ಲಿ ನಾನೂ ಮಾತನಾಡಬೇಕು...' ಕಷ್ಟದಲ್ಲೇ ಒಪ್ಪಿದರು ಅತ್ತಲಿನ ವ್ಯಕ್ತಿ.

ಮತ್ತೊಂದು ಕಂಡೀಷನ್, 'ಕ್ಯಾಮೆರಾದಲ್ಲಿ ನೀವೊಬ್ಬರೇ ಕಾಣೋ ಹಾಗಿಲ್ಲ, ನಾನೂ ಇರಲೇಬೇಕು' ಎನ್ನುತ್ತಿದ್ದಂತೆ ಕರೆ ಕಟ್ ಆಯ್ತು!

'ಇವರು ಒಪ್ಪಲಿಲ್ಲ ಅಂದ್ರೆ ಏನಾಯ್ತು, ಇನ್ನೊಂದು ಪಾರ್ಟಿಯವರು ಲೈನ್‌ನಲ್ಲಿದ್ದಾರೆ ಸರ್' ಎಂದು ಫೋನ್ ಕೈಗಿತ್ತ ಪಿ.ಎ.

'ನೋಡಿ ಸರ್, ನಿಮ್ಮ ಪಾರ್ಟಿಗೆ ಸಪೋರ್ಟ್ ಮಾಡಬೇಕೆಂದರೆ ನನ್ನನ್ನೇ ಪ್ರೈಮ್ ಮಿನಿಸ್ಟರ್ ಮಾಡಬೇಕು'.

'ಓಕೆ, ಡನ್'.

'ಹ್ಞಾಂ! ಓಕೆ ಅಂದುಬಿಟ್ರು' ಎಂದು ಕುಣಿಯುತ್ತಿದ್ದಂತೆ ಮುಖದ ಮೇಲೆ ನೀರು ಬಿತ್ತು.

'ಸಾಕು ಮೇಲೇಳ್ರೀ, ನಿದ್ದೆಯಲ್ಲಿ ಅದೇನ್ ಬಡಬಡಿಸ್ತೀರ್ತೀರ ಯಾವಾಗ್ಲೂ' ಎಂದು ಎದ್ದೇಳಿಸಿದಳು ಹೆಂಡತಿ!

ಸಂಗತ

ಅರಿಯಬೇಕಿದೆ 'ಒಳೇಟು' ಮರ್ಮ

ವಿರೋಧ ಪಕ್ಷಗಳ ನಾಯಕರನ್ನು ಮಣಿಸುವ 'ಚಾಣಕ್ಯ ತಂತ್ರ'ವನ್ನು ತಾವು ಸಹಿಸುವುದಿಲ್ಲ ಎಂಬುದನ್ನು ಮತದಾರರು ಸ್ಪಷ್ಟಪಡಿಸಿದ್ದಾರೆ

• ನಾ.ದಿವಾಕರ

ಬಹುಪಾಲು ಎಲ್ಲ ರಾಜಕೀಯ ಪಕ್ಷಗಳಲ್ಲೂ ಗೆಲ್ಲುವ ಅವಕಾಶ ಇರುವ ಅಭ್ಯರ್ಥಿಗಳು ಟಿಕೆಟ್ ವಂಚಿತರ ಒಳ ಏಟಿನಿಂದಲೇ ಸೋಲುವ ಸಾಧ್ಯತೆ ಇರುವುದು, ಭಾರತದ ಅಧಿಕಾರ ರಾಜಕಾರಣದ ವಿಶಿಷ್ಟ ಲಕ್ಷಣ. 2024ರ ನಿರ್ಣಾಯಕ ಮಹಾ ಚುನಾವಣೆಯ ಹಲವು ಕ್ಷೇತ್ರಗಳಲ್ಲಿ ಇಂತಹದ್ದೊಂದು ಬೆಳವಣಿಗೆ ಕಂಡುಬಂದಿದೆ. ಪಕ್ಷಗಳ ನಾಯಕತ್ವದ ಪರಮಾಧಿಪತ್ಯಕ್ಕೆ ಮಣಿದು ಕೆಲವು ಅರ್ಹ ಅಭ್ಯರ್ಥಿಗಳು ಹಿಂದೆ ಸರಿದಿರುವ ಉದಾಹರಣೆಗಳೂ ಇವೆ. ಆದರೆ ಎಲ್ಲಕ್ಕಿಂತ ಮುಖ್ಯವಾಗಿ, ಈ ಚುನಾವಣೆಯಲ್ಲಿ ಭಾರತದ ಸಾರ್ವಭೌಮ ಮತದಾರರು 'ಒಳೇಟು' ಎಂಬ ಈ ರಾಜಕೀಯ ಪರಿಭಾಷೆಗೆ ಹೊಸ ಅರ್ಥವನ್ನೇ ನೀಡಿರುವುದು ಸ್ಪಷ್ಟವಾಗಿ ತಿಳಿಯುತ್ತದೆ.

'ಏನೇ ಆದರೂ ನಾವು 400 ಸ್ಥಾನಗಳನ್ನು ಗೆಲ್ಲುತ್ತೇವೆ', 'ಏಕರೂಪ ನಾಗರಿಕ ಸಂಹಿತೆಯೂ ಒಳಗೊಂಡಂತೆ ಹಲವು ಕಾಯ್ದೆಗಳನ್ನು ಜಾರಿಗೊಳಿಸಿಯೇ ತೀರುತ್ತೇವೆ' ಎಂದೆಲ್ಲ ಆರ್ಭಟಿಸುತ್ತಿದ್ದ ಬಿಜೆಪಿ ನಾಯಕತ್ವಕ್ಕೆ ಈ ಬಾರಿ ಮತದಾರರೇ ದೊಡ್ಡ 'ಒಳೇಟು' ನೀಡಿದ್ದಾರೆ.

ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಮೂರನೇ ಎರಡರಷ್ಟು ಸ್ಥಾನಗಳನ್ನು ಖಚಿತವಾಗಿ ಗಳಿಸುವ ವಿಶ್ವಾಸದಿಂದಲೇ ಬಿಜೆಪಿಯ ಕೆಲವು ಮುಖಂಡರು ಬಿಜೆಪಿಯೇತರ ಪಕ್ಷಗಳ ನೇತೃತ್ವದ ಸರ್ಕಾರಗಳನ್ನು ಉರುಳಿಸುವ ಮಾತುಗಳನ್ನಾಡಿದ್ದರು. ಕರ್ನಾಟಕದಲ್ಲಿ ಸಹ ಬಿಜೆಪಿ ನಾಯಕರು 25ಕ್ಕೂ ಹೆಚ್ಚು ಲೋಕಸಭಾ ಸ್ಥಾನಗಳಲ್ಲಿ ಜಯ ಗಳಿಸಿ, ರಾಜ್ಯದಲ್ಲಿನ ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ಪದಚ್ಯುತಗೊಳಿಸುವ ಮಹದಾಕಾಂಕ್ಷೆಯನ್ನು ವ್ಯಕ್ತಪಡಿಸಿದ್ದರು. ಆದರೆ ಕರ್ನಾಟಕವನ್ನು ರಾಜಕೀಯವಾಗಿ ಮಹಾರಾಷ್ಟ್ರ ಮಾಡುವ ಈ ನಾಯಕರ ಕನಸಿಗೆ ಮತದಾರರ ಒಳೇಟು ತಣ್ಣೀರು ಎರಚಿದೆ.

ಅಪ್ರಜಾತಾಂತ್ರಿಕ ಮಾರ್ಗಗಳ ಮೂಲಕ ಚುನಾಯಿತ ಸರ್ಕಾರಗಳನ್ನು ಪಲ್ಲಟಗೊಳಿಸಲು ಬಿಜೆಪಿ ಪ್ರಾಯೋಜಿಸಿದ್ದ 'ಮಹಾರಾಷ್ಟ್ರ ಮಾದರಿ'ಗೆ ಅಲ್ಲಿನ ಮತದಾರರೇ ದೊಡ್ಡ ಒಳೇಟು ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರನ್ನೂ ಒಳಗೊಂಡಂತೆ ಬಿಜೆಪಿ ಅನುಸರಿಸಿದ ಮಂಗಳಸೂತ್ರ, ಮುಜ್ರಾ (ನೃತ್ಯ), ಮೀನು, ಮಟನ್, ಪಾಕಿಸ್ತಾನದಂತಹ ವಿಷಯಗಳ ಪ್ರಸ್ತಾಪ ಎಲ್ಲವೂ ಜನಸಾಮಾನ್ಯರನ್ನು ಪಕ್ಷದಿಂದ ಇನ್ನೂ ದೂರ ಸರಿಸಿರುವುದು ಫಲಿತಾಂಶದಿಂದ ಸ್ಪಷ್ಟವಾಗಿದೆ.

ಭಾರತದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಧರ್ಮರಾಜಕಾರಣಕ್ಕಿಂತಲೂ ಜಾತಿರಾಜಕಾರಣವೇ ಪ್ರಧಾನ ಎನ್ನುವುದನ್ನು ಮತದಾರರು ಈ ಒಳೇಟಿನ ಮುಖಾಂತರ ಖಚಿತಪಡಿಸಿದ್ದಾರೆ. ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡುವ ಸಂಘ ಪರಿವಾರದ ಕನಸಿನ ಕೂಸು ಅಯೋಧ್ಯೆಯ ರಾಮಮಂದಿರದ ಸಂಗತಿಯೂ ಬಿಜೆಪಿಗೆ ರಾಜಕೀಯವಾಗಿ ನೆರವಾಗದಿರುವುದು, ಅಯೋಧ್ಯೆಯನ್ನು ಒಳಗೊಂಡ ಫೈಜಾಬಾದ್ ಕ್ಷೇತ್ರದಲ್ಲಿ ಸಮಾಜವಾದಿ ಪಕ್ಷದ ಅಭ್ಯರ್ಥಿ ಗೆಲುವು ಸಾಧಿಸಿರುವುದು ಒಬಿಸಿ-ದಲಿತ-ಮುಸ್ಲಿಂ ಸುತ್ತಲಿನ ತಳಸಮುದಾಯ ರಾಜಕಾರಣದ ದ್ಯೋತಕವಾಗಿದೆ. ತಳಮಟ್ಟದ ಸಮಾಜದಲ್ಲಿ ಶ್ರೀಸಾಮಾನ್ಯರಿಗೆ ಮಂದಿರ, ಮಸೀದಿ, ಸೆಂಗೋಲು, ಪಾಕಿಸ್ತಾನಕ್ಕಿಂತಲೂ ಮುಖ್ಯವಾಗಿ ಬೇಕಿರುವುದು ರೋಟಿ, ಕಪಡಾ ಮತ್ತು ಮಕಾನ್ ಎನ್ನುವುದನ್ನು ಉತ್ತರಪ್ರದೇಶ, ರಾಜಸ್ಥಾನ, ಪಂಜಾಬ್, ಹರಿಯಾಣ, ಮಹಾರಾಷ್ಟ್ರದ ಮತದಾರರು ಮತ್ತೆ ನೆನಪಿಸಿದ್ದಾರೆ.

ಮತ್ತೊಂದೆಡೆ, ಇಡೀ ಭಾರತವನ್ನು ಆಕ್ರಮಿಸಿಕೊಂಡು 'ಒಂದು ದೇಶ, ಒಂದು ಭಾಷೆ, ಒಂದು ಚುನಾವಣೆ' ಎಂಬ ಘೋಷಣೆಯ ಮೂಲಕ ಏಕಕಾಲಕ್ಕೆ ಮತದಾರರ ಬಳಿಗೆ ಹೋಗುವ ಬಿಜೆಪಿಯ ಮಹತ್ವಾಕಾಂಕ್ಷೆಗೆ ದಕ್ಷಿಣ ರಾಜ್ಯಗಳ ಮತದಾರರು ದೊಡ್ಡ ಒಳೇಟು ನೀಡಿದ್ದಾರೆ. ಆಂಧ್ರಪ್ರದೇಶವನ್ನು ಹೊರತುಪಡಿಸಿದರೆ ದಕ್ಷಿಣದ ಯಾವುದೇ ರಾಜ್ಯದಲ್ಲೂ ಬಿಜೆಪಿ ಹೆಚ್ಚಿನ ಸ್ಥಾನ ಗಳಿಸದೇ ಇರುವುದರ ಹಿಂದೆ, ಒಕ್ಕೂಟ ವ್ಯವಸ್ಥೆಯನ್ನು ಶಿಥಿಲಗೊಳಿಸುವ ಹಿಂದಿನ ಸರ್ಕಾರದ ಪ್ರಯತ್ನಗಳೂ ಕಾರಣ ಎನ್ನುವುದು ಸುಸ್ಪಷ್ಟ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯು ಪಕ್ಷಕ್ಕೆ ಕಲಿಸಿರುವ ಪಾಠ.

ಹಾಗೆಯೇ ಭಾರತದ ಮತದಾರರು ಇತರ ಪಕ್ಷಗಳಿಗೂ ಪಾಠ ಕಲಿಸಿದ್ದಾರೆ. ಒಡಿಶಾದಲ್ಲಿ 24 ವರ್ಷಗಳ ಕಾಲ ರಾಜ್ಯಭಾರ ಮಾಡಿದ ನವೀನ್ ಪಟ್ನಾಯಕ್ ತಮ್ಮನ್ನು ಶಾಶ್ವತ ಮುಖ್ಯಮಂತ್ರಿ ಎಂದೇ ಭಾವಿಸಿ ನಿಶ್ಚಿತ ಗೆಲುವಿಗಾಗಿ ಎದುರುನೋಡುತ್ತಿದ್ದರು. ಮತ್ತೊಂದೆಡೆ, ಆಂಧ್ರಪ್ರದೇಶದ ಜಗನ್ಮೋಹನ್ ರೆಡ್ಡಿ ಚುನಾವಣೆ ಹೊಸಿಲಲ್ಲಿದ್ದಾಗ ವಿರೋಧ ಪಕ್ಷದ ನಾಯಕ ಜೈಲು ಸೇರುವಂತೆ ಮಾಡುವ ಮೂಲಕ ತಮ್ಮ ನಿರಂಕುಶಾಧಿಕಾರವನ್ನು ಪ್ರದರ್ಶಿಸಿದ್ದರು. ಜಗನ್ಮೋಹನ್ ಈ ಪ್ರಜಾತಂತ್ರ ವಿರೋಧಿ ಕಲೆಯನ್ನು ನರೇಂದ್ರ ಮೋದಿ ನೇತೃತ್ವದ ಸರ್ಕಾರದಿಂದಲೇ ರೂಢಿಸಿಕೊಂಡಿದ್ದಿರಬಹುದು. ಆದರೆ ಎರಡೂ ರಾಜ್ಯಗಳ ಮತದಾರರು ನೀಡಿರುವ ಒಳೇಟಿಗೆ ನವೀನ್ ಮತ್ತು ಜಗನ್ ಇಬ್ಬರೂ ಅಧಿಕಾರದಿಂದ ಕೆಳಗಿಳಿಯುವಂತಾಗಿದೆ.



ಮತದಾರರ ಈ ಒಳೇಟು ಎಲ್ಲ ಪಕ್ಷಗಳಿಗೂ ಎಚ್ಚರಿಕೆಯ ಗಂಟೆಯಾಗಿದೆ. ವಿರೋಧ ಪಕ್ಷಗಳ ನಾಯಕರನ್ನು, ಮುಖ್ಯಮಂತ್ರಿಗಳನ್ನು ಅಸಾಂವಿಧಾನಿಕ ಮಾರ್ಗಗಳ ಮೂಲಕ ಮಣಿಸುವ ಚಾಣಕ್ಯ ತಂತ್ರವನ್ನು ತಾವು ಸಹಿಸುವುದಿಲ್ಲ ಎಂದು ಮತದಾರರು ಸ್ಪಷ್ಟವಾಗಿ ಹೇಳಿದ್ದಾರೆ. ಅನ್ನ, ನೀರು, ಸೂರು, ಉದ್ಯೋಗ ಕಲ್ಪಿಸದ ಸರ್ಕಾರಗಳನ್ನು ಯಾವತ್ತಾದರೂ ಕೆಳಗಿಳಿಸಿಯೇ ತೀರುತ್ತೇವೆ ಎಂಬ ಮತದಾರರ ಸಂದೇಶದಿಂದ ರಾಜಕೀಯ ನಾಯಕರು ಇನ್ನಾದರೂ ಪಾಠ ಕಲಿಯಬೇಕಿದೆ. ಪ್ರಜಾಪ್ರಭುತ್ವದಲ್ಲಿ ಕುರ್ಚಿ ಶಾಶ್ವತವಲ್ಲ ಎಂಬ ವಾಸ್ತವವನ್ನು ಎಲ್ಲ ಪಕ್ಷಗಳೂ ಅರಿಯಬೇಕಿದೆ. 2024ರ ಸಂದೇಶವೂ ಇದೇ ಆಗಿದೆ.

ವಾಚಕರ ವಾಣಿ

ಅಯೋಧ್ಯೆ ಮತದಾರರ ಮೇಲೆ ಯಾಕಿಷ್ಟು ಆಕ್ರೋಶ?

ಲೋಕಸಭಾ ಚುನಾವಣೆಯ ಹಲವು ಅಚ್ಚರಿಯ ಫಲಿತಾಂಶಗಳಲ್ಲಿ ಅಯೋಧ್ಯೆಯನ್ನು ಒಳಗೊಂಡ ಫೈಜಾಬಾದ್ ಕ್ಷೇತ್ರದ ಫಲಿತಾಂಶವೂ ಒಂದಾಗಿದೆ. ಒಬ್ಬ ದಲಿತ ಅಭ್ಯರ್ಥಿಯಾದ ಸಮಾಜವಾದಿ ಪಕ್ಷದ ಅವಧೇಶ್ ಪ್ರಸಾದ್, ಬಿಜೆಪಿ ಅಭ್ಯರ್ಥಿ ಲಲ್ಲು ಸಿಂಗ್ ಅವರನ್ನು ಸುಮಾರು 50 ಸಾವಿರ ಮತಗಳ ಅಂತರದಿಂದ ಸೋಲಿಸಿದ್ದು ಹಲವರ ಆಕ್ರೋಶಕ್ಕೆ ಕಾರಣವಾಗಿದೆ. ಫೇಸ್‌ಬುಕ್, ಎಕ್ಸ್, ಇನ್‌ಸ್ಟಾಗ್ರಾಂ, ಯೂಟ್ಯೂಬ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ಮೂರು ದಿನಗಳಿಂದಲೂ ಸತತವಾಗಿ, 'ಅಯೋಧ್ಯೆಯ ಜನ ಬೆನ್ನಿಗೆ ಚೂರಿ ಹಾಕಿದ್ದಾರೆ, ಅಲ್ಲಿ ಹೋದರೆ ರಾತ್ರಿ ಉಳಿಯಬೇಡಿ, ಅಲ್ಲಿ ಯಾವುದನ್ನೂ ಖರೀದಿಸಬೇಡಿ, ಬರೀ ರಾಮನ ದರ್ಶನ ಮಾಡಿ ಹಿಂತಿರುಗಿ, ಅವರು ನಂಬಿಕೆಗೆ ಯೋಗ್ಯರಲ್ಲ' ಎಂಬಂತಹ ಅತ್ಯಂತ ಕೆಳಮಟ್ಟದ ನಿಂದನೆಗಳನ್ನು ಮಾಡುತ್ತಿರುವುದು ಕಂಡುಬರುತ್ತಿದೆ.

ಅಲ್ಲಿನ ಜನರು ಎದುರಿಸುತ್ತಿರುವ ವಾಸ್ತವ ಸಮಸ್ಯೆಗಳ ಬಗ್ಗೆ ಅರಿಯದೆ, ಮಾಧ್ಯಮಗಳು ಆ ಕ್ಷೇತ್ರದ ಬಗ್ಗೆ ಬಿಂಬಿಸಿರುವ ಅತಿಶಯೋಕ್ತಿಯ ಚಿತ್ರಣವನ್ನು ಮಾತ್ರ ಗಮನಿಸಿ ಹೀಗೆ ನಿಂದನೆ ಮಾಡುವುದು ಎಷ್ಟು ಸರಿ? ಅಯೋಧ್ಯೆಯ ಜನರಿಗೆ ತಮ್ಮಿಷ್ಟದಂತೆ ಮತ ಚಲಾಯಿಸುವ ಸ್ವಾತಂತ್ರ್ಯ ಇಲ್ಲವೇ? ನಾವು ಹೇಳಿದಂತೆಯೇ ಅವರು ಕೇಳಬೇಕೆಂಬ ಮನೋಧರ್ಮ ಇದ್ದರೆ, ಅವರ ಸಾಂವಿಧಾನಿಕ ಹಕ್ಕುಗಳಿಗೆ ಚ್ಯುತಿ ತರುವ ಪ್ರಯತ್ನದಂತೆ ಅಲ್ಲವೇ?

ಸುರೇಂದ್ರ ಪೈ, ಭಟ್ಕಳ

ಆಡಿ ಕೆಟ್ಟರು?!

ಅವರು ಸೋತು ಗೆದ್ದರು
ಇವರು ಗೆದ್ದು ಸೋತರು!
ಫಲಿತಾಂಶಕ್ಕೂ ಮುನ್ನ
ಅಡಿಗಡಿಗೂ ಪೈಪೋಟಿಗೆ
ಬಿದ್ದವರಂತೆ, ಲೆಕ್ಕದ
ಮಿತಿಯಿಲ್ಲದಂತೆ ಆಡಿದ
ಮತಗಟ್ಟೆ ಸಮೀಕ್ಷಕರು
ಮಾತ್ರ ಆಡಿ ಕೆಟ್ಟರು!

ಮ.ಗು.ಬಸವಣ್ಣ
ಮೈಸೂರು

ಶಿಕ್ಷಕರಲ್ಲಿ ಮೂಡಬೇಕು ಮತದಾನದ ಅರಿವು

ವಿಧಾನಪರಿಷತ್‌ನ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳ ಚುನಾವಣೆಯ ಫಲಿತಾಂಶ ಹೊರಬಿದ್ದಿರುವ ಈ ಹೊತ್ತಿನಲ್ಲಿ 'ಮತವು ನಿನ್ನದೆ ಮತಿಯೂ ನಿನ್ನದೆ, ಯೋಚಿಸಿ ಮತ ಚಲಾಯಿಸು, ಮತ ಚಲಾಯಿಸಿ ಯೋಚಿಸಬೇಡ' ಎಂಬ ಮಾತು ನೆನಪಾಗುತ್ತಿದೆ. ಈ ಕ್ಷೇತ್ರಗಳಲ್ಲಿ ಚಲಾವಣೆಯಾದ ಸಾವಿರಾರು ಮತಗಳು ಅಸಿಂಧುವಾಗಿರುವುದನ್ನು ನೋಡಿದರೆ ದಿಗಿಲಾಗುತ್ತದೆ. ದೇಶದ ಚುನಾವಣೆಗಳು ಯಶಸ್ವಿಯಾಗಿ ನಡೆಯುವಲ್ಲಿ ಪ್ರಮುಖ ಪಾತ್ರ ವಹಿಸುವ ಎಷ್ಟೋ ಶಿಕ್ಷಕರಿಗೆ ಮತ ಚಲಾಯಿಸುವ ಬಗ್ಗೆ ಅರಿವಿಲ್ಲದಿರುವುದು ನೋವಿನ ಸಂಗತಿ. ಧರ್ಮ, ಜನಾಂಗ, ಜಾತಿ, ಮತ, ಭಾಷೆ ಅಥವಾ ಯಾವುದೇ ಪ್ರೇರೇಪಣೆಗಳ ದಾಕ್ಷಿಣ್ಯಕ್ಕೆ ಒಳಗಾಗಬಾರದೆಂಬ ಮತದಾರರ ಪ್ರತಿಜ್ಞಾವಿಧಿಯನ್ನು ಶಾಲಾಕಾಲೇಜುಗಳಲ್ಲಿ ಬೋಧಿಸುವ ಶಿಕ್ಷಕರೇ ಇಂತಹ ದಾಕ್ಷಿಣ್ಯಗಳಿಗೆ ಒಳಗಾಗಿದ್ದಾರೆ ಎಂಬ ಆಪಾದನೆ ಇದೆ. ಇಂತಹ ಹೊತ್ತಿನಲ್ಲಿ, ಇಷ್ಟೊಂದು ಪ್ರಮಾಣದಲ್ಲಿ ಅಸಿಂಧು ಮತಗಳನ್ನು ಚಲಾಯಿಸುವ ಮೂಲಕ ಶಿಕ್ಷಕರು ಅಪಹಾಸ್ಯಕ್ಕೆ ಈಡಾಗಿರುವುದು ದುರಂತವೇ ಸರಿ.

ಚುನಾವಣಾ ಹಕ್ಕು, ಮತದಾನದ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ, ಗ್ರಾಮೀಣ ಸಮುದಾಯಗಳಿಗೆ ಅರಿವು ಮೂಡಿಸುತ್ತಾ ಬಂದಿರುವ ಚುನಾವಣಾ ಆಯೋಗವು ಈ ಕಾರ್ಯಕ್ರಮದಡಿ ಇನ್ನು ಮುಂದೆ ಶಿಕ್ಷಕರಿಗೂ ಅರಿವು ಮೂಡಿಸುವ ಅನಿವಾರ್ಯ ಇದೆ ಅನ್ನಿಸುತ್ತಿದೆ.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ

'ಇಂಡಿಯಾ' ಜವಾಬ್ದಾರಿಯುತ ಮೈತ್ರಿಕೂಟವಾಗಲಿ

ಕೇಂದ್ರದಲ್ಲಿ ಸರ್ಕಾರ ರಚನೆಗೆ ಪ್ರಯತ್ನ ನಡೆಸದಿರುವ 'ಇಂಡಿಯಾ' ಮೈತ್ರಿಕೂಟದ ನಡೆಯನ್ನು ಸಂಪಾದಕೀಯ ಸಮರ್ಥಿಸಿರುವುದು (ಪ್ರ.ವಾ., ಜೂನ್ 6) ಸಮಯೋಚಿತವಾಗಿದೆ. ಸರ್ಕಾರ ರಚಿಸಲು ಎನ್‌ಡಿಎ ಮೈತ್ರಿಕೂಟಕ್ಕೆ ಅಗತ್ಯವಿರುವ ಬಹುಮತದ ಸಂಖ್ಯೆ ಈಗ ಲಭಿಸಿದೆ. ಆದರೆ ಸುಸೂತ್ರವಾಗಿ ಆಡಳಿತ ನಡೆಸಲು ಬಹುಮತವಷ್ಟೇ ಸಾಲದು. ಮಿತ್ರಪಕ್ಷಗಳೊಂದಿಗೆ ಒಮ್ಮತ ಇರಬೇಕಾಗುತ್ತದೆ. ಅದನ್ನು ಎಲ್ಲ ಪಕ್ಷಗಳು ವಿಶೇಷವಾಗಿ ಬಿಜೆಪಿಯು ತನ್ನ ಪ್ರತಿಷ್ಠೆಯನ್ನು ಬದಿಗಿರಿಸಿ ಸಾಧಿಸಬೇಕು.

ತೆಲುಗುದೇಶಂ ಹಾಗೂ ಜೆಡಿಯು ಪಕ್ಷಗಳು ಬಿಜೆಪಿಯೊಂದಿಗೆ ಚುನಾವಣಾಪೂರ್ವ ಮೈತ್ರಿ ಮಾಡಿಕೊಂಡಿದ್ದರೂ ಕೆಲವು ಪ್ರಮುಖ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಇರುವುದು ಎಲ್ಲರಿಗೂ ತಿಳಿದಿದೆ. 2020ರಲ್ಲಿಯೇ ಬಿಹಾರದಲ್ಲಿ ಎನ್‌ಆರ್‌ಸಿ ಅನುಷ್ಠಾನವನ್ನು ವಿರೋಧಿಸಿ ನಿತೀಶ್ ಕುಮಾರ್ ನೇತೃತ್ವದ ಸರ್ಕಾರ ಸರ್ವಾನುಮತದ ತೀರ್ಮಾನ ತೆಗೆದುಕೊಂಡಿತ್ತು. ಮುಸ್ಲಿಮರಿಗೆ ಮೀಸಲಾತಿ, ಜಾತಿ ಗಣತಿ, ಅಗ್ನಿವೀರ್ ಯೋಜನೆಯಂತಹ ವಿಚಾರಗಳಲ್ಲಿ ಪಕ್ಷಗಳ ನಡುವೆ ಪರಸ್ಪರ ತದ್ವಿರುದ್ಧ ಅಭಿಪ್ರಾಯವಿದೆ. ಆದರೂ ಇದೀಗ ಕೇಂದ್ರ ಸರ್ಕಾರದ ಭಾಗವಾಗುವುದರಿಂದ ನಾಯ್ಡು ಮತ್ತು ನಿತೀಶ್ ಅವರಿಗೆ ಹೆಚ್ಚು ಅನುಕೂಲವಿದೆ. 2025ಕ್ಕೆ ಬಿಹಾರ ವಿಧಾನಸಭಾ ಚುನಾವಣೆ ನಡೆಯಲಿದೆ. ಬಿಹಾರಕ್ಕೆ ವಿಶೇಷ ಪ್ಯಾಕೇಜ್ ಪಡೆದು, ಲೋಕಸಭಾ ಚುನಾವಣೆಯ ಗೆಲುವಿನ ಸದ್ಭಾವನೆ ಮಾಸುವ ಮುನ್ನವೇ ಸ್ವಲ್ಪ ಮುಂಚಿತವಾಗಿ ವಿಧಾನಸಭಾ ಚುನಾವಣೆಯನ್ನು ಎದುರಿಸುವುದು ನಿತೀಶ್ ಅವರಿಗೆ ಅನುಕೂಲಕರ. ಇನ್ನು ನಾಯ್ಡು ಅವರಿಗೆ, ಆರ್ಥಿಕವಾಗಿ ಬಸವಳಿದಿರುವ ತಮ್ಮ ರಾಜ್ಯಕ್ಕೆ ಕೇಂದ್ರದಿಂದ ವಿಶೇಷ ಅನುದಾನ ಪಡೆದು, ಅಮರಾವತಿಯನ್ನು ರಾಜಧಾನಿಯಾಗಿ ರೂಪಿಸುವ ತಮ್ಮ ಮಹತ್ವಾಕಾಂಕ್ಷೆಯ ಯೋಜನೆಯನ್ನು ಜಾರಿ ಮಾಡುವ ಗುರಿ ಇದೆ. ಅಲ್ಲದೆ ಬಿಜೆಪಿಯೊಂದಿಗೆ ಮೈತ್ರಿ ಏರ್ಪಡಲು ಮುಖ್ಯ ಕಾರಣಕರ್ತರಾದ ಜನಸೇನಾ ಮುಖ್ಯಸ್ಥ ಪವನ್ ಕಲ್ಯಾಣ್ ಅವರ ಒಪ್ಪಿಗೆ ಇಲ್ಲದೆ ನಾಯ್ಡು ಸ್ವತಂತ್ರ ತೀರ್ಮಾನ ತೆಗೆದುಕೊಳ್ಳುವ ಸ್ಥಿತಿಯಲ್ಲಿ ಈಗ ಇಲ್ಲ. ಈ ಕಾರಣದಿಂದ ಬಿಜೆಪಿಗೆ ಈ ಎರಡೂ ಪಕ್ಷಗಳ ಬೆಂಬಲ ಸದ್ಯಕ್ಕೆ ಅಬಾಧಿತ. ಹೀಗಾಗಿ, ಇಂಡಿಯಾ ಮೈತ್ರಿಕೂಟವು ಸರ್ಕಾರ ರಚನೆಗೆ ವ್ಯರ್ಥ ಪ್ರಯತ್ನ ಮಾಡದೆ, ಜವಾಬ್ದಾರಿಯುತ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸಿ ಪ್ರಜಾಪ್ರಭುತ್ವವನ್ನು ಬಲಪಡಿಸಲಿ ಎಂಬ ಸಂಪಾದಕೀಯದ ಆಶಯ ವಿವೇಕಯುತವಾಗಿದೆ.

ಟಿ.ಜಯರಾಂ, ಕೋಲಾರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಜ್ಯ: ಸಚಿವರ ಕ್ಷೇತ್ರಗಳಲ್ಲಿ ಹಿನ್ನಡೆಯೇ ಅಧಿಕ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಮನೆಯ ಸದಸ್ಯರೇ ಅಭ್ಯರ್ಥಿಗಳಾಗಿದ್ದರೂ ಸಚಿವರು ತಾವು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರದಲ್ಲಿ ಮುನ್ನಡೆ ತಂದುಕೊಡುವಲ್ಲಿ ವಿಫಲರಾಗಿದ್ದಾರೆ. ಪತ್ನಿ, ಮಗ, ಮಗಳು, ಸಹೋದರಿ ಕಣದಲ್ಲಿದ್ದರೂ ಎದುರಾಳಿಗಳಿಗೆ ಅಧಿಕ ಮತಗಳು ಬಿದ್ದಿವೆ.

ಗಣಿ, ಭೂವಿಜ್ಞಾನ ಮತ್ತು ತೋಟಗಾರಿಕೆ ಸಚಿವ ಎಸ್. ಎಸ್ ಮಲ್ಲಿಕಾರ್ಜುನ ಅವರ ಪತ್ನಿ ಪ್ರಭಾ ಮಲ್ಲಿಕಾರ್ಜುನ ಅವರು ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಪ್ರಭಾ ಗೆದ್ದಿದ್ದಾರಾದರೂ ಮಲ್ಲಿಕಾರ್ಜುನ ಅವರು ಪ್ರತಿನಿಧಿಸುವ ದಾವಣಗೆರೆ ಉತ್ತರ ಲೋಕಸಭಾ ಕ್ಷೇತ್ರದಲ್ಲಿ ಸುಮಾರು 25 ಸಾವಿರ ಮತಗಳ ಹಿನ್ನಡೆ ಅನುಭವಿಸಿದ್ದರು. ಸಚಿವರ ತಂದೆ ಶಾಮನೂರು ಶಿವಶಂಕರಪ್ಪ ಅವರು ಪ್ರತಿನಿಧಿಸುವ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ 21 ಸಾವಿರಕ್ಕೂ ಅಧಿಕ ಮುನ್ನಡೆ ಸಿಕ್ಕಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಮಗ ಮೃಣಾಲ್ ಹೆಬ್ಬಾಳಕರರನ್ನೇ ಕಣಕ್ಕೆ ಇಳಿಸಿದ್ದರು. ಆದರೆ ಲಕ್ಷ್ಮೀ ಹೆಬ್ಬಾಳಕರ ಪ್ರತಿನಿಧಿಸುವ ಬೆಳಗಾವಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿಯೇ ಬಿಜೆಪಿಯ ಜಗದೀಶ ಶೆಟ್ಟರ್ ಅವರಿಗೆ 50 ಸಾವಿರಕ್ಕೂ ಅಧಿಕ ಮುನ್ನಡೆ ಸಿಕ್ಕಿದೆ.

ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಮಗಳು ಸೌಮ್ಯಾ ರೆಡ್ಡಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದರು. ಅವರಿಗೆ ರಾಮಲಿಂಗಾರೆಡ್ಡಿ ಅವರು ಪ್ರತಿನಿಧಿಸುವ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರದಲ್ಲಿ ಕೂಡ ಮುನ್ನಡೆ ಕೊಡಿಸುವಲ್ಲಿ ಸಚಿವರು ವಿಫಲರಾಗಿದ್ದಾರೆ. ಬಿಜೆಪಿಯ ತೇಜಸ್ವಿ ಸೂರ್ಯ ಅವರಿಗೆ ಇಲ್ಲಿ 9 ಸಾವಿರಕ್ಕೂ ಅಧಿಕ ಮುನ್ನಡೆ ಲಭಿಸಿತ್ತು.


ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಸಹೋದರಿ ಗೀತಾ ಶಿವರಾಜಕುಮಾರ್ ಅವರು ಶಿವಮೊಗ್ಗದಲ್ಲಿ ಸ್ಪರ್ಧಿಸಿದ್ದರು. ಸಚಿವರು ಪ್ರತಿನಿಧಿಸುವ ಸೊರಬ ವಿಧಾನಸಭಾ ಕ್ಷೇತ್ರದಲ್ಲಿಯೇ ಬಿಜೆಪಿಯ ಬಿ.ವೈ. ರಾಘವೇಂದ್ರ ಅವರು 17 ಸಾವಿರಕ್ಕೂ ಅಧಿಕ ಮುನ್ನಡೆ ಪಡೆದಿದ್ದರು.


ಚಲುವರಾಯಸ್ವಾಮಿ, ಕೆ.ಎನ್. ರಾಜಣ್ಣ, ಜಿ. ಪರಮೇಶ್ವರ, ಡಿ. ಸುಧಾಕರ್, ಆರ್.ಬಿ. ತಿಮ್ಮಾಪುರ, ಎಚ್.ಕೆ. ಪಾಟೀಲ, ಸಂತೋಷ್ ಲಾಡ್, ಮಂಕಾಳ ವೈದ್ಯ, ಎಂ.ಬಿ. ಪಾಟೀಲ, ಕೆ.ಎಚ್. ಮುನಿಯಪ್ಪ, ಎಂ.ಸಿ. ಸುಧಾಕರ್, ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ಶಿವಾನಂದ ಪಾಟೀಲ ತಮ್ಮ ತಮ್ಮ ಕ್ಷೇತ್ರದಲ್ಲಿ ಮತಗಳ ಮುನ್ನಡೆ ತಂದು ಕೊಡುವಲ್ಲಿ ವಿಫಲರಾದ ಸಚಿವರು.

ಡಾ.ಎಚ್.ಸಿ. ಮಹದೇವಪ್ಪ ಪ್ರತಿನಿಧಿಸುವ ಕ್ಷೇತ್ರದಲ್ಲಿ ಅವರ ಮಗ ಸುನೀಲ್ ಬೋಸ್‌ಗೆ ಕೇವಲ 2 ಸಾವಿರ ಮುನ್ನಡೆ ಸಿಕ್ಕಿದೆ. ಸತೀಶ್ ಜಾರಕಿಹೊಳಿ ಅವರು ಚಿಕ್ಕೋಡಿಯಲ್ಲಿ ಸ್ಪರ್ಧಿಸಿರುವ ತನ್ನ ಮಗಳು ಪ್ರಿಯಾಂಕಾ ಜಾರಕಿಹೊಳಿಗೆ ಯಮಕನಮರಡಿ ವಿಧಾನಸಭಾ ಕ್ಷೇತ್ರದಲ್ಲಿ 23 ಸಾವಿರಕ್ಕೂ ಅಧಿಕ ಮತಗಳ ಮುನ್ನಡೆ ತಂದು ಕೊಟ್ಟಿದ್ದಾರೆ. ಈಶ್ವರ ಖಂಡ್ರೆ ಅವರು ಮಗ ಸಾಗರ್ ಖಂಡ್ರೆಗೆ ಹಾಗೂ ಪ್ರಿಯಾಂಕ್ ಖರ್ಗೆ ತನ್ನ ಸಂಬಂಧಿ ರಾಧಾಕೃಷ್ಣ ದೊಡ್ಡಮನಿ ಅವರಿಗೆ ತಮ್ಮ ಕ್ಷೇತ್ರಗಳಲ್ಲಿ 16 ಸಾವಿರಕ್ಕೂ ಅಧಿಕ ಮತಗಳ ಮುನ್ನಡೆಯನ್ನು ತಂದುಕೊಡುವಲ್ಲಿ ಸಫಲರಾಗಿದ್ದಾರೆ.


ಬೇರೆ ಪಕ್ಷಗಳಿಗೆ ಲೀಡ್ ತಂದುಕೊಟ್ಟ ಸಚಿವರ ಕ್ಷೇತ್ರಗಳು


(ಆವರಣದಲ್ಲಿ ಇರುವುದು ಆಯಾ ಸಚಿವರ ವಿಧಾನಸಭಾ ಕ್ಷೇತ್ರ)






ಪತ್ನಿ, ಮಗ, ಮಗಳು, ಸಹೋದರಿಗೂ ಮುನ್ನಡೆ ತಂದುಕೊಡುವಲ್ಲಿ ಸಚಿವರು ವಿಫಲ





ಪ್ರಜಾ ಮತ ಜನತಂತ್ರದ ಹಬ್ಬ — ಲೋಕಸಭಾ ಚುನಾವಣೆ - 2024





ಪೂರಕ ಮಾಹಿತಿ: ಬೆಂಗಳೂರು ಗ್ರಾಮಾಂತರ, ಹುಬ್ಬಳ್ಳಿ, ದಾವಣಗೆರೆ, ಮೈಸೂರು, ಕಲಬುರಗಿ ಬ್ಯೂರೊಗಳಿಂದ

ಮುನ್ನಡೆ ಕೊಟ್ಟವರು

ಸಿ.ಎಂ. ಸಿದ್ದರಾಮಯ್ಯ ವರುಣ ವಿಧಾನಸಭಾ ಕ್ಷೇತ್ರದಲ್ಲಿ (33,352 ಮತ), ಡಿ.ಸಿ.ಎಂ ಡಿ.ಕೆ. ಶಿವಕುಮಾರ್ ಅವರು ಕನಕಪುರ ವಿಧಾನಸಭಾ ಕ್ಷೇತ್ರದಲ್ಲಿ (25,677 ಮತ), ಸಚಿವರಾದ ಬೈರತಿ ಸುರೇಶ್ ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿ (2,162 ಮತ), ಕೆ.ಜೆ. ಜಾರ್ಜ್ ಅವರು ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದಲ್ಲಿ (74,244 ಮತ), ಜಮೀರ್ ಅಹಮದ್ ಖಾನ್ ಅವರು ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ (42,953), ಡಾ.ಶರಣಪ್ರಕಾಶ ಪಾಟೀಲ ಅವರು ಸೇಡಂ ವಿಧಾನಸಭಾ ಕ್ಷೇತ್ರದಲ್ಲಿ (9,207 ಮತ), ಶಿವರಾಜ ತಂಗಡಗಿ ಅವರು ಕನಕಗಿರಿ ವಿಧಾನಸಭಾ ಕ್ಷೇತ್ರದಲ್ಲಿ (4,438), ಶರಣಬಸಪ್ಪ ದರ್ಶನಾಪುರ ಶಹಾಪುರ ವಿಧಾನಸಭಾ ಕ್ಷೇತ್ರದಲ್ಲಿ (9,585), ಬಿ.ನಾಗೇಂದ್ರ ಅವರು ಬಳ್ಳಾರಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ (25,875 ಮತ), ಕೆ.ವೆಂಕಟೇಶ್ ಅವರು ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ (11,744 ಮತ), ರಹೀಂ ಖಾನ್ ಅವರು ಬೀದರ್ ವಿಧಾನಸಭಾ ಕ್ಷೇತ್ರದಲ್ಲಿ (32,477 ಮತ), ಡಾ.ಎಚ್.ಸಿ.ಮಹದೇವಪ್ಪ ಅವರು ತಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ (2,921 ಮತ), ಸತೀಶ ಜಾರಕಿಹೊಳಿ ಅವರು ಯಮಕನಮರಡಿ ವಿಧಾನಸಭಾ ಕ್ಷೇತ್ರದಲ್ಲಿ (23,587 ಮತ), ಪ್ರಿಯಾಂಕ್ ಖರ್ಗೆ ಅವರು ಚಿತ್ತಾಪುರ ಎಸ್‌ಸಿ ಮೀಸಲು ಕ್ಷೇತ್ರದಲ್ಲಿ (16,340 ಮತ), ಈಶ್ವರ ಖಂಡ್ರೆ ಅವರು ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ (16,743 ಮತ) ಕಾಂಗ್ರೆಸ್ ಅಭ್ಯರ್ಥಿಗೆ ಮುನ್ನಡೆ ತಂದುಕೊಟ್ಟಿದ್ದಾರೆ.

ಪದಬಂಧ 5705


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಹೆರಿಗೆ ಕೋಣೆಯಿದು (5)
4. ಬಿಡಿಸಲು ಕಷ್ಟವಾಗಿರುವ ಪ್ರಶ್ನೆ (3)
5. ವರ ಮಾಡಿರುವ ಒತ್ತಾಯ (3)
6. ವನದಲ್ಲಿ ಕಾಣಿಸಿರುವ ಮುಖ (3)
7. ನೂಲು ತೆಗೆಯುವ ಸಾಧನ (3)
9. ಸಂದೇಹ ಈ ರೀತಿ ಬಂದಿದೆ (2)
10. ಪ್ರಹರಿಗೆ ವಿಷ್ಣು ಪ್ರತ್ಯಕ್ಷನಾಗಿರುವನಲ್ಲಾ? (2)
12. ಇದು ಶ್ರೇಷ್ಠವಾದುದು (3)
14. ಭಾವ ಬೀರಿರುವ ವರ್ಚಸ್ಸು! (3)
15. ಇದು ಕಷ್ಟವೇ ಅಲ್ಲ ಬಿಡಿ! (3)
16. ತಪರಾಕು ಆದ ಮೇಲೆಯೇ ಈ ಹೊಗಳಿಕೆ !(3)
17. ಈತ ಮಾತಿಗೆ ತಪ್ಪುವವನು (5))

ಮೇಲಿಂದ ಕೆಳಕ್ಕೆ

1. ಪ್ರವಾಸದ ಸಮಯದಲ್ಲಿ ಈ ಅಲಂಕಾರ! (4)
2. ಅರಿವಳಿಕೆ ಕೊಟ್ಟ ನಂತರ ಬಂದಿರುವ ಅರಿವು! (5)
3. ವನದಲ್ಲಿ ಮಾಡಿರುವ ಯಜ್ಞ (3)
4. ನಿರಂತರ ಎಂದು ಹೀಗೆನ್ನಿ (3)
8. ಕೆಲಸವನ್ನು ಮಾಡುವ ನಿಶ್ಚಿತ ಸ್ಥಳ (3)
9. ಕೊನೆಗೆ ಬರವಿದ್ದಾಗ ಮೋಡ ಕಾಣುತ್ತಿದೆಯಲ್ಲಾ! (3)
10. ಇದು ಕುದುರೆಯ ಮುಖ (5)
11. ದೃಢಕಾಯವನ್ನು ಈ ರೀತಿ ಹೇಳಿ (4)
13. ಕುಸುಮವು ಅಸ್ಪಷ್ಟವಾಗಿ ಕಾಣುತ್ತಿದೆ! (3)
14. ಮೊದಲನೆ ಹಿಂದೂ ಸಂವತ್ಸರ (3)



5704ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1. ಸರಸ್ವತಿ 3. ಅಂತರ್ಯಾಮಿ 4. ಮಿಡಿತ 5. ವನಚರ 7. ರಜತ 9. ವಾನಪ್ರಸ್ಥ 10. ಹತಬಲ 11. ಸುಗಮ 13. ಮನೋಹರ 15. ಮಲರು 16. ಮಾದಕತೆ 17. ಕಡಿವಾಣ

ಮೇಲಿಂದ ಕೆಳಕ್ಕೆ:

1. ಸಚಿವ 2. ತಿಮಿರ 3. ಅಂತರ 6. ನಳನಳಿಸು 8. ತಲೆಬರಹ 12. ಮಮತೆ 13. ಮರುಕ 14. ರಮಣ

ಸುಡೊಕು 6090

		1		7		6		2
			2		9			
2	8			1			9	5
	5		7		4	8		
				8		5		9
8		6	5					4
6				5		9		7
	7		1	3			5	
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6089 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಜೂನ್ 8, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ದ್ವಿತೀಯ ಗಂ. 15-56 ನಕ್ಷತ್ರ: ಆದ್ರಾ ಗಂ. 19-43 ಯೋಗ: ಗಂಡ ಗಂ. 18-27 ಕರಣ: ಕೌಲವ ಗಂ. 15-56, ವೃಷಭ ಮಾಸದ ನೇ 25 ದಿನ, ಮಳೆನಕ್ಷತ್ರ: ಮೃಗಶಿರ 1.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-07 **ಸೂರ್ಯಾಸ್ತ :** 06-53
ಮುಸ್ಲಿಂ ದಿನಾಂಕ : 01 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 11, 5

ಮೇಷ: ನಿಮ್ಮ ಸೃಜನಶೀಲತೆ, ಚಿಂತನಾ ಲಹರಿಗಳು ಹಾಗೂ ಕಾರ್ಯ ವೈಖರಿಯು ಇತರರಿಗೆ ವಿಭಿನ್ನವೆನಿಸಲಿದೆ. ಇತರರನ್ನು ಗೌರವಿಸುವುದು ಮತ್ತು ಮಾತು ಪರಾಮರ್ಶಿಸುವುದರ ಜೊತೆಗೆ ಮನ್ನಣೆಯೂ ಇರಲಿ.

ವೃಷಭ: ನಿಮ್ಮನ್ನು ಸಂದರ್ಶಿಸಲು ಬರುವ ವ್ಯಕ್ತಿಯ ಬಳಿ ದರ್ಪದಿಂದ ನಡೆದುಕೊಳ್ಳುವುದು ಸರಿಯಾದ ವರ್ತನೆ ಅಲ್ಲ. ಪ್ರಯಾಣ ವೇಳೆ ಸ್ನೇಹಿತರೊಂದಿಗೆ ಭೋಗ ವಸ್ತುವಿನ ಖರೀದಿಸುವ ಅವಕಾಶವು ಈ ದಿನ ನಿಮ್ಮದಾಗಲಿದೆ.

ಮಿಥುನ: ಹಿರಿಯರ ಜೊತೆಯಲ್ಲಿ ತೀರ್ಥಯಾತ್ರೆಯಲ್ಲಿ ಪಾಲ್ಗೊಂಡು ದೇವರ ದರ್ಶನ ಮಾಡುವುದರಿಂದ ದಿವ್ಯ ಅನುಭೂತಿಯೊಂದಿಗೆ ಮನಸ್ಸಿಗೆ ನೆಮ್ಮದಿ ಸಿಗಲಿದೆ. ಮೊಮ್ಮಕ್ಕಳ ಬಹಳ ದಿನದ ನಂತರದ ಭೇಟಿಯು ಸಂತಸ ತರಲಿದೆ.

ಕರ್ಕಾಟಕ: ನೀವು ನಿಮ್ಮ ನೀತಿ ನಿಯಮಗಳಿಗೆ ಬದ್ಧರಾದರೆ, ಸತ್ಯ ನಿಮ್ಮದಾಗಿದ್ದರೆ ಉದ್ಯೋಗದಲ್ಲಿ ಹೆದರುವ ಅಗತ್ಯವಿಲ್ಲ. ಚಾಣಕ್ಷತನದ ನಿಮ್ಮ ಮಾತುಗಳನ್ನು ಸರಿಯಾದ ಸಮಯದಲ್ಲಿ ಆಡುವುದು ಒಳಿತು.

ಸಿಂಹ: ಈ ದಿನ ನಿಮ್ಮನ್ನು ಎದುರು ಹಾಕಿಕೊಳ್ಳುವವರಿಗೆ ದೇವರು ತಕ್ಕ ಉತ್ತರ ನೀಡುತ್ತಾನೆ. ಆಶ್ಚರ್ಯಕರ ಘಟನೆ ನಡೆದು ದೇವರಿದ್ದಾನೆ ಎಂಬ ನಂಬಿಕೆ ವೈದ್ಯರ ಅನುಭವಕ್ಕೆ ಬರುವಂತಾಗಲಿದೆ.

ಕನ್ಯಾ: ಹೊಸ ವಾಹನ ಖರೀದಿಗೆ ಯೋಚಿಸಿದವರು ಸ್ವಲ್ಪ ದಿನಗಳ ಮಟ್ಟಿಗೆ ತಟಸ್ಥರಾಗಿರಿ. ನಿಮ್ಮ ಕೆಲಸಗಳ ಬಗೆಗೆ ಸಾರ್ವಜನಿಕರಿಂದ ನೇರವಾಗಿ ಪ್ರತಿಕ್ರಿಯೆ ಪಡೆಯುವುದರಿಂದ ಗುಣಮಟ್ಟ ವೃದ್ಧಿಸಿಕೊಳ್ಳಲು ಸಾಧ್ಯ.

ತುಲಾ: ಹೂವು-ಹಣ್ಣುಗಳ ಮಾರಾಟಗಾರರಿಗೆ ತಾವು ನಿರೀಕ್ಷಿಸಿದಕ್ಕಿಂತ ಹೆಚ್ಚಿನ ಲಾಭವನ್ನು ವ್ಯಾಪಾರದಲ್ಲಿ ಪಡೆದುಕೊಳ್ಳುವುದರಿಂದ ಸಂತೋಷ ಇರುವುದು. ಋಣಾತ್ಮಕ ಚಿಂತನೆಯು ಮಹಿಳೆಯರ ಆರೋಗ್ಯ ಹಾಳು ಮಾಡುತ್ತದೆ.

ವೃಶ್ಚಿಕ: ಮನೆ ಜಾಗದ ಪಾಲುದಾರಿಕೆ ವಿಷಯದಲ್ಲಿ ಕೆಲವು ಬದಲಾವಣೆ ಮಾಡಿಕೊಳ್ಳುವ ಸ್ಥಿತಿ ಬರಲಿದೆ. ಯಾರೋ ಮಾಡಿದ ತಪ್ಪುಗಳಿಗೆ ಅಧಿಕಾರಿಗಳ ಜೊತೆ ನೀವೂ ಸಂಕಷ್ಟಕ್ಕೆ ಸಿಲುಕುವ ಸನ್ನಿವೇಶಗಳು ಎದುರಾಗಬಹುದು.

ಧನು: ದೈವಬಲದ ಕಾರಣ ಕೈಗೊಂಡ ಕೆಲಸ-ಕಾರ್ಯಗಳಲ್ಲಿ ಜಯ ಅಥವಾ ಹೊಸ ಕಾರ್ಯ ಕೈಗೊಳ್ಳಲು ಧೈರ್ಯ ಉಂಟಾಗಲಿದೆ. ನಿಮ್ಮ ಈ ದಿನದ ಪ್ರಮುಖ ಕೆಲಸಗಳಿಗೆ ಪೂರ್ವ ತಯಾರಿ ಅಗತ್ಯವೆನಿಸಲಿದೆ.

ಮಕರ: ನಿಮ್ಮ ಸಂಗಾತಿಯೊಂದಿಗೆ ಇದ್ದ ದೀರ್ಘಕಾಲದ ಸಮಸ್ಯೆ ಸಮಾಧಾನದಿಂದ ಮಾತನಾಡಿ ಪರಿಹರಿಸಿಕೊಳ್ಳುವಿರಿ. ನಿಮ್ಮಿಂದಾದ ಗಡಿಬಿಡಿಯನ್ನು ಇತರರ ಹೆಗಲ ಮೇಲೆ ಹೊರೆಸುವ ಮೂರ್ಖತನದ ಕೆಲಸ ಮಾಡದಿರಿ.

ಕುಂಭ: ಲೋಕದಲ್ಲಿ ಸಾಮಾನ್ಯವಾಗಿರುವ ಬದುಕಿನ ಪರಿಭಾಷೆಯಂತಲ್ಲದೆ ವಿಭಿನ್ನವಾಗಿ ಬದುಕಿ ತೋರಿಸುತ್ತೇವೆಂಬ ಕಲ್ಪನೆ ಹುಸಿಯಾಗಲಿದೆ. ಮಾಧ್ಯಮ ಸಂಸ್ಥೆಗಳಲ್ಲಿರುವವರಿಗೆ ಉತ್ತಮ ದಿನವಾಗಿ ಪರಿಣಮಿಸಲಿದೆ.


ಮೀನ: ಕುಟುಂಬದಲ್ಲಿ ಮನಸ್ತಾಪಕ್ಕೆ ಕಾರಣವಾಗದಂತೆ ಎಲ್ಲದರಲ್ಲೂ ಹೆಚ್ಚಿನ ಜಾಗ್ರತೆ ವಹಿಸಿರಿ. ಅವರೊಂದಿಗೆ ಉತ್ತಮ ಸಮಯ ಕಳೆಯುವ ಅವಕಾಶ ಇದ್ದರೂ, ಅನಿವಾರ್ಯ ಕಾರಣಗಳಿಂದಾಗಿ ತಪ್ಪಿಸಿಕೊಳ್ಳಬೇಕಾಗಬಹುದು.

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಸಿ.ಬಿ)	₹312-505
ದ್ವಿತಳಿ (ಬಿ.ವಿ)	₹360-625

ಎನ್.ಆರ್.ಪುರ ರಬ್ಬರ್	
ಆರ್‌ಎಸ್‌ಎಸ್-4	₹192 (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-5	₹185
ಗುಡ್ ಲಾಟ್	₹175

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹8000-9020
ಕೆ. ಆರ್.ಪೇಟೆ	₹9403-9403
ತಿಪಟೂರು	₹8700-9200

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	22,821
ಇಂದಿನ ಅಂತ್ಯ	23,290
▲	468
ದಿನದ ಗರಿಷ್ಠ	23,290

ವಿನಿಮಯ ದರ	
$ ಡಾಲರ್	83.40
£ ಪೌಂಡ್	106.70
€ ಯುರೊ	90.83
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100ಕ್ಕೆ	₹510
12 ಕ್ಕೆ	₹70
ಮೈಸೂರು	
100ಕ್ಕೆ	₹515

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)	
ಶೇಂಗಾ (ರಿಫೈನ್ಡ್)	₹1470 (1480)
ಸೋಯಾ (ರಿಫೈನ್ಡ್)	₹960 (955)
ಸೂರ್ಯಕಾಂತಿ (ರಿಫೈನ್ಡ್)	₹977 (970)
ಪಾಮೋಲಿನ್	₹917 (910)

ಹಣದುಬ್ಬರ ಶೇ 4ರ ಮಿತಿಗೆ ತಲುಪಿದರಷ್ಟೇ ಇಳಿಕೆಗೆ ಕ್ರಮ: ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್

8ನೇ ಬಾರಿ ರೆಪೊ ದರ ಯಥಾಸ್ಥಿತಿ

ಮುಂಬೈ (ಪಿಟಿಐ): ಕ್ರೆಡಿಟ್ ರೇಟಿಂಗ್ ಸಂಸ್ಥೆಗಳು ಮತ್ತು ಆರ್ಥಿಕ ತಜ್ಞರ ನಿರೀಕ್ಷೆಯಂತೆ ಭಾರತೀಯ ರಿಸರ್ವ್ ಬ್ಯಾಂಕ್, ಸತತ ಎಂಟನೇ ಬಾರಿಗೆ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ.

ಶುಕ್ರವಾರ ಮುಕ್ತಾಯಗೊಂಡ ಆರ್‌ಬಿಐನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯಲ್ಲಿ ಆರು ಸದಸ್ಯರ ಪೈಕಿ ನಾಲ್ವರು, ರೆಪೊ ದರವನ್ನು ಶೇ 6.5ರಲ್ಲಿಯೇ ಕಾಯ್ದುಕೊಳ್ಳಲು ಒಪ್ಪಿಗೆ ನೀಡಿದ್ದಾರೆ. ಸಮಿತಿಯ ಬಾಹ್ಯ ಸದಸ್ಯರಾದ ಅಶಿಮಾ ಗೋಯಲ್ ಮತ್ತು ಜಯಂತ್ ವರ್ಮಾ ಬಡ್ಡಿದರ ಕಡಿತದ ಪರವಾಗಿ ಮತ ಚಲಾಯಿಸಿದ್ದಾರೆ.

ರೆಪೊ ಆಧಾರಿತ ಗೃಹ, ವಾಹನ ಮತ್ತು ಇತರೆ ಸಾಲ ಪಡೆದಿರುವ ಸಾಲಗಾರರು ಬಡ್ಡಿದರ ಇಳಿಕೆಯಾಗಲಿದೆ ಎಂಬ ನಿರೀಕ್ಷೆ ಹೊಂದಿದ್ದರು. ಸಮಿತಿಯ ನಿರ್ಧಾರವು ಅವರಿಗೆ ತೀವ್ರ ನಿರಾಸೆ ತಂದಿದೆ.

ಚಿಲ್ಲರೆ ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ರೆಪೊ ದರದಲ್ಲಿ ಬದಲಾವಣೆ ಮಾಡಿಲ್ಲ. ಅಲ್ಲದೆ, ನರೇಂದ್ರ ಮೋದಿ ನೇತೃತ್ವದ ಹೊಸ ಸರ್ಕಾರವು ದೇಶದ ಆರ್ಥಿಕತೆ ಬೆಳವಣಿಗೆಗೆ ಉತ್ತೇಜನ ನೀಡಲಿದೆ ಎಂಬ ನಿರೀಕ್ಷೆಯೊಂದಿಗೆ ಸಮಿತಿಯು ಈ ನಿರ್ಣಯ ಕೈಗೊಂಡಿದೆ.

‘ದೇಶೀಯ ಬೆಳವಣಿಗೆ ಮತ್ತು ಹಣದುಬ್ಬರ ಆಧಾರದ ಮೇಲೆ ಆರ್‌ಬಿಐನ ಹಣಕಾಸು ನೀತಿಗಳನ್ನು ನಿರ್ಧರಿಸಲಾಗುತ್ತದೆ’ ಎಂದು ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.


ಹಾಗಾಗಿ, ಅಮೆರಿಕದ ಫೆಡರಲ್ ರಿಸರ್ವ್‌ನ ಬಡ್ಡಿದರ ಕಡಿತಕ್ಕೂ ಮೊದಲೇ ರೆಪೊ ದರವನ್ನು ಕಡಿತಗೊಳಿಸುವ ಸಾಧ್ಯತೆಯಿದೆ ಎಂಬ ಆಶಾಭಾವವೂ ಚಿಗುರೊಡೆದಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಹಣದುಬ್ಬರವು ಶೇ4ರ ಮಿತಿ ಅಥವಾ ಅದಕ್ಕಿಂತ ಕೆಳಗೆ ಇಳಿಕೆ ಯಾದರಷ್ಟೇ ಆರ್‌ಬಿಐನ ಹಣಕಾಸು ನೀತಿಯಲ್ಲಿ ಬದಲಾವಣೆ ಮಾಡಲು ಸಾಧ್ಯ’ ಎಂದು ಸ್ಪಷ್ಟಪಡಿಸಿದರು.

‘ಆಗಸದಲ್ಲಿ ಮೋಡಗಳು ದಟ್ಟವಾಗಿ ಆವರಿಸುತ್ತಿವೆಯೇ ಅಥವಾ ದೂರ ಪ್ರದೇಶಗಳಿಗೆ ಸರಿದು ಹೋಗುತ್ತಿವೆಯೇ ಎಂಬುದನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತೇವೆ. ಸ್ಥಳೀಯ ಹವಾಮಾನ ಹಾಗೂ ಪಿಚ್‌ನ ಸ್ಥಿತಿಗತಿ ನೋಡಿ ಕೊಂಡು ಆಟ ಆಡುತ್ತೇವೆ’ ಎಂದರು.

‘ಡಿಸೆಂಬರ್ ತ್ರೈಮಾಸಿಕದಲ್ಲಿ ಹಣದುಬ್ಬರವು ಶೇ 3.8ರಷ್ಟು ಇಳಿಕೆ ಯಾಗಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ, ಶೇ 5ಕ್ಕಿಂತ ಹೆಚ್ಚು ದಾಖಲಾ ಯಿತು. ನಿಗದಿತ ಮಿತಿಗೆ ತಲುಪಿ ಸ್ಥಿರಗೊಂಡರೆ ನಮಗೆ ಆತ್ಮವಿಶ್ವಾಸ ಮೂಡುತ್ತದೆ’ ಎಂದರು.

ಆರ್‌ಬಿಐ ಹಣಕಾಸು ನೀತಿ ಸಮಿತಿ ಅಂದಾಜು



ಜಿಡಿಪಿ ಶೇ 7.2ರಷ್ಟು ಪ್ರಗತಿ: ಆರ್‌ಬಿಐ

ಮುಂಬೈ (ಪಿಟಿಐ): 2024–25ನೇ ಆರ್ಥಿಕ ವರ್ಷದ ಜಿಡಿಪಿ ಬೆಳವಣಿಗೆಯನ್ನು ಹಣಕಾಸು ನೀತಿ ಸಮಿತಿಯು ಪರಿಷ್ಕರಿಸಿದ್ದು, ಶೇ 7.2ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಿದೆ.

ಈ ಮೊದಲ ಶೇ 7ರಷ್ಟು ಪ್ರಗತಿ ದಾಖಲಿಸಲಿದೆ ಎಂದು ಹೇಳಿತ್ತು. ಆದರೆ, ದಿನಬಳಕೆಯ ಸರಕು ಮತ್ತು ಸೇವೆಯಲ್ಲಿನ ವೆಚ್ಚದ ಏರಿಕೆ ಹಾಗೂ ಗ್ರಾಮೀಣ ಪ್ರದೇಶದಲ್ಲಿನ ಬೇಡಿಕೆ ಹೆಚ್ಚಳದಿಂದಾಗಿ ಈ ಪ್ರಗತಿ ಸಾಧ್ಯವಾಗಲಿದೆ ಎಂದು ಹೇಳಿದೆ.

‘2023–24ನೇ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿಯು ಶೇ 8.2ರಷ್ಟು ಪ್ರಗತಿ ಕಂಡಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ ವರದಿ ತಿಳಿಸಿದೆ. 2024–25ರಲ್ಲಿಯೂ ದೇಶದ ಆರ್ಥಿಕ ಚಟುವಟಿಕೆಗಳು ಚೇತರಿಕೆ ಕಾಣಲಿವೆ. ದೇಶೀಯ ಮಟ್ಟದಲ್ಲಿನ ಬೇಡಿಕೆ ಹೆಚ್ಚಳದಿಂದಾಗಿ ತಯಾರಿಕಾ ಚಟುವಟಿಕೆಗಳು ಲಾಭದ ಪಥದಲ್ಲಿ ಸಾಗಲಿವೆ’ ಎಂದು ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಸೇವಾ ವಲಯ ಕೂಡ ಬೆಲೆ ಇಳಿಕೆಯ ಪರಧಿಯಿಂದ ಹೊರಬಂದು ಮೊದಲಿನ ದೃಢತೆಯ ಮಟ್ಟಕ್ಕೆ ತಲುಪಲಿದೆ ಎಂದು ಹೇಳಿದ್ದಾರೆ.

ನಗರ ಪ್ರದೇಶದಲ್ಲಿಯೂ ಸರಕು ಮತ್ತು ಸೇವಾ ವೆಚ್ಚ ಮತ್ತು ಬೇಡಿಕೆಯು ಚೇತರಿಸಿಕೊಳ್ಳುತ್ತಿದೆ. ಕೃಷಿ ಮತ್ತು ಹೂಡಿಕೆ ವಲಯಗಳಲ್ಲಿನ ಸುಧಾರಣೆಯಿಂದಾಗಿ ಗ್ರಾಮೀಣ ಪ್ರದೇಶದಲ್ಲಿನ ಬೇಡಿಕೆ ಹೆಚ್ಚಲಿದೆ. ಇದು ಕೃಷಿ, ಕೈಗಾರಿಕೆ, ಸೇವೆ ವಲಯ ಹಾಗೂ ವೈಯಕ್ತಿಕ ಸಾಲದ ಪ್ರಮಾಣವನ್ನು ವಿಸ್ತರಿಸಲು ವಾಣಿಜ್ಯ ಬ್ಯಾಂಕ್‌ಗಳಿಗೆ ನೆರವಾಗಲಿದೆ ಎಂದು ತಿಳಿಸಿದ್ದಾರೆ.

ಆಹಾರ ಪದಾರ್ಥ ಬೆಲೆ ಏರಿಕೆ ಸವಾಲು

ಮುಂಬೈ (ಪಿಟಿಐ): 2024–25ನೇ ಆರ್ಥಿಕ ವರ್ಷದಲ್ಲಿ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವು, ಶೇ 4.5ರಷ್ಟು ಇರಲಿದೆ ಎಂದು ಹಣಕಾಸು ನೀತಿ ಸಮಿತಿ ಅಂದಾಜಿಸಿದೆ.



ಈ ಬಾರಿ ಮುಂಗಾರು ಸಾಮಾನ್ಯವಾಗಿರಲಿದೆ ಎಂಬ ಭಾರತೀಯ ಹವಾಮಾನ ಇಲಾಖೆಯು ಹೇಳಿದೆ. ಆದರೆ, ಆಹಾರ ಪದಾರ್ಥಗಳ ಬೆಲೆಯು ಅನಿಶ್ಚಿತತೆಯಿಂದ ಕೂಡಿದ್ದು, ಇದರ ಮೇಲೆ ನಿಗಾವಹಿಸಲಾಗಿದೆ ಎಂದು ತಿಳಿಸಿದೆ.

‘ಚಿಲ್ಲರೆ ಹಣದುಬ್ಬರ ಕುರಿತ ಅಪಾಯಗಳು ಕೂಡ ಸಮತೋಲಿತವಾಗಿವೆ’ ಎಂದು ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಆಹಾರ ಪದಾರ್ಥಗಳ ಬೆಲೆ ಏರಿಕೆ ನಡುವೆಯೂ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಹಣದುಬ್ಬರವು ಇಳಿಕೆಯಾಗಿದೆ. ಬೇಳೆಕಾಳು ಮತ್ತು ತರಕಾರಿಗಳ ಹಣದುಬ್ಬರವು ಎರಡಂಕಿ ದಾಟಿದೆ.

ಸರಕು ಮತ್ತು ಸೇವೆಗಳ ವೆಚ್ಚದಲ್ಲಿನ ಬದಲಾವಣೆಯ ಸೂಚಕವಾದ ಮೂಲ ಹಣದುಬ್ಬರ (ಕೋರ್ ಹಣದುಬ್ಬರ) 2023ರ ಜೂನ್‌ನಿಂದ ಮಂದಗತಿಯಲ್ಲಿದೆ. ಇದು ಆಹಾರ ಮತ್ತು ಇಂಧನ ಕ್ಷೇತ್ರವನ್ನು ಒಳಗೊಂಡಿಲ್ಲ. ಸೇವಾ ಹಣದುಬ್ಬರವು ಇಳಿಕೆಯಾಗಿದ್ದರೆ, ಸರಕುಗಳ ಬೆಲೆಯಲ್ಲಿ ಏರಿಕೆ ಮುಂದುವರಿದಿದೆ.

‘ಈ ಬಾರಿಯ ಬೇಸಿಗೆಯಲ್ಲಿ ತಾಪಮಾನ ಹೆಚ್ಚಿದೆ. ಮತ್ತೊಂದೆಡೆ ಜಲಾಶಯಗಳಲ್ಲಿ ನೀರಿನ ಸಂಗ್ರಹ ಮಟ್ಟ ಕಡಿಮೆಯಿದೆ. ಇದು ತರಕಾರಿಗಳು ಮತ್ತು ಹಣ್ಣುಗಳ ದರ ಏರಿಕೆಗೆ ಕಾರಣವಾಗಲಿದೆ’ ಎಂದು ಶಕ್ತಿಕಾಂತ ದಾಸ್ ಹೇಳಿದ್ದಾರೆ. ಜಾಗತಿಕ ಮಟ್ಟದಲ್ಲಿಯೂ ಆಹಾರ ಪದಾರ್ಥಗಳ ಬೆಲೆಯು ನಿಧಾನಗತಿಯಲ್ಲಿ ಏರಿಕೆಯಾಗುತ್ತಿದೆ. ಕೈಗಾರಿಕೆಯಲ್ಲಿ ಬಳಸುವ ಲೋಹಗಳ ಬೆಲೆಯು ಏರಿಕೆ ಆಗಿದೆ. ಇದರಿಂದ ಕಾರ್ಖಾನೆಗಳ ಉತ್ಪಾದನಾ ವೆಚ್ಚದಲ್ಲಿ ಹೆಚ್ಚಳವಾಗಿದೆ ಎಂದು ಹೇಳಿದ್ದಾರೆ.

‘ಸರ್ಕಾರವು ಕಳೆದ ವರ್ಷಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಗೋಧಿ ಸಂಗ್ರಹಣೆ ಮಾಡಿದೆ. ಗೋಧಿ ಮತ್ತು ಅಕ್ಕಿಯ ಕಾಪು ದಾಸ್ತಾನು ಹೆಚ್ಚಿದೆ. ಇದರಿಂದ ಆಹಾರದ ಹಣದುಬ್ಬರ ಇಳಿಕೆಯಾಗಬಹುದು. ಆದರೆ, ಜಾಗತಿಕ ಬಿಕ್ಕಟ್ಟಿನಿಂದಾಗಿ ಕಚ್ಚಾ ತೈಲದ ಬೆಲೆಯು ಅನಿಶ್ಚಿತತೆಯಿಂದ ಕೂಡಿದೆ’ ಎಂದು ಹೇಳಿದ್ದಾರೆ.

ಬೆಳ್ಳಿ ದರ ಮತ್ತೆ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸತತ ಎರಡನೇ ದಿನವಾದ ಶುಕ್ರವಾರವೂ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಆಗಿದೆ.

ಬೆಳ್ಳಿ ದರವು ಕೆ.ಜಿಗೆ ₹2,600 ಹೆಚ್ಚಳವಾಗಿ ₹95,900ರಂತೆ ಮಾರಾಟವಾಗಿದೆ. ಚಿನ್ನದ ಧಾರಣೆಯು 10 ಗ್ರಾಂ ಗೆ ₹150 ಏರಿಕೆಯಾಗಿದ್ದು, ₹73,650ಕ್ಕೆ ಮುಟ್ಟಿದೆ.


ಸೆನ್ಸೆಕ್ಸ್, ನಿಫ್ಟಿ ಸಾರ್ವಕಾಲಿಕ ದಾಖಲೆ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ 2024–25ನೇ ಆರ್ಥಿಕ ವರ್ಷದ ಜಿಡಿಪಿ ಬೆಳವಣಿಗೆಯನ್ನು ಪರಿಷ್ಕರಿಸಿದ್ದರಿಂದ ಷೇರು ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಶೇ 2ರಷ್ಟಕ್ಕೂ ಹೆಚ್ಚು ಏರಿಕೆ ಕಂಡಿವೆ.

ಸೆನ್ಸೆಕ್ಸ್ 1,618 ಅಂಶ ಏರಿಕೆ (ಶೇ 2.16ರಷ್ಟು) ಕಂಡು 76,693 ಅಂಶಕ್ಕೆ ಮುಟ್ಟಿದೆ. ವಹಿವಾಟಿನ ಒಂದು ಸಂದರ್ಭದಲ್ಲಿ 1,720 ಅಂಶ ಏರಿಕೆ ಕಂಡಿತ್ತು. ನಿಫ್ಟಿ 468 ಅಂಶ ಏರಿಕೆಯಾಗಿ, 23,290 ಅಂಶಗಳಲ್ಲಿ ಸ್ಥಿರಗೊಂಡಿತು. ತನ್ನ ಹಿಂದಿನ ಸಾರ್ವಕಾಲಿಕ ದಾಖಲೆ ಮಟ್ಟಕ್ಕಿಂತ 18.5 ಅಂಶದಷ್ಟು ಏರಿಕೆಯಾಗಿದೆ. ವಹಿವಾಟಿನ ಒಂದು ಸಂದರ್ಭದಲ್ಲಿ 489 ಅಂಶ ಏರಿಕೆ ಕಂಡಿತ್ತು.

ಐ.ಟಿ, ಬ್ಯಾಂಕ್, ರಿಯಾಲ್ಟಿ ಹಾಗೂ ಆಟೊ ವಲಯದ ಷೇರುಗಳ ಮೌಲ್ಯದಲ್ಲಿ ಏರಿಕೆಯಾಗಿದೆ.



ಬಿಎಸ್‌ಇ ಸ್ಮಾಲ್ ಕ್ಯಾಪ್ ಶೇ 2.18ರಷ್ಟು ಹಾಗೂ ಮಿಡ್ ಕ್ಯಾಪ್ ಸೂಚ್ಯಂಕ ಶೇ1.28 ರಷ್ಟು ಏರಿಕೆ ಕಂಡಿದೆ. ಬಿಎಸ್‌ಇಯಲ್ಲಿ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯವು ₹421 ಲಕ್ಷ ಕೋಟಿಗೆ ತಲುಪಿದೆ.

‘ಕೇಂದ್ರದಲ್ಲಿ ಎನ್‌ಡಿಎ ಮೈತ್ರಿಕೂಟದ ಸರ್ಕಾರ ಅಧಿಕಾರ ಹಿಡಿಯಲಿದ್ದು, ಹೂಡಿಕೆದಾರರ ನಿರೀಕ್ಷೆಗಳನ್ನು ಹೆಚ್ಚಿಸಿದೆ. ಆರ್‌ಬಿಐ ಕೂಡ ಜಿಡಿಪಿ ಬೆಳವಣಿಗೆಯನ್ನು ಪರಿಷ್ಕರಿಸಿದೆ. ಹಾಗಾಗಿ, ದೇಶೀಯ ಷೇರುಪೇಟೆಗಳು ಹೊಸ ದಾಖಲೆ ಮಟ್ಟಕ್ಕೆ ಏರಿಕೆ ಕಂಡಿವೆ’ ಎಂದು ಜಿಯೋಜಿತ್‌ಫೈನಾನ್ಶಿಯಲ್‌ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಎಲ್ಲಾ ಕಂಪನಿಗಳ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಮಹೀಂದ್ರ ಆ್ಯಂಡ್ ಮಹೀಂದ್ರ, ವಿಪ್ರೊ, ಟೆಕ್ ಮಹೀಂದ್ರ, ಭಾರ್ತಿ ಏರ್‌ಟೆಲ್, ಇನ್ಫೊಸಿಸ್ ಮತ್ತು ಟಾಟಾ ಸ್ಟೀಲ್ ಹೆಚ್ಚಿನ ಲಾಭ ಕಂಡಿವೆ. ಸೋಲ್, ಶಾಂಘೈ ಮಾರುಕಟ್ಟೆ ಏರಿಕೆ ದಾಖಲಿಸಿದರೆ, ಟೋಕಿಯೊ, ಹಾಂಗ್‌ಕಾಂಗ್ ಹಾಗೂ ಯುರೋಪಿಯನ್ ಮಾರುಕಟ್ಟೆಗಳು ಕುಸಿತ ಕಂಡಿವೆ.

ಗುರುವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹6,867 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಮಾರುಕಟ್ಟೆ ಧಾರಣೆ (₹ಗಳಲ್ಲಿ)

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	1300-1400
ನಡುಗೋಲು	1550-1600
ರಾಶಿ	1700-1800
ರಾಶಿ ಉತ್ತಮ	1800-1900
ಹೆರಕಿದ್ದು	2100-2300
ಹಸಿರು ಸಾಧಾರಣ	2000-2050
ಹಸಿರು ಉತ್ತಮ	2300-2400
ಹಸಿರು ಅತಿ ಉತ್ತಮ	2600-2700
ಕಾಳು ಮೆಣಸು	620
ಅಡಿಕೆ ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಕುಮಟ	
ಚಿಪ್ಪು	25999-29099
ಕೋಕ	14019-27869
ಫ್ಯಾಕ್ಟರಿ	10869-19249
ಹಳೆಚಾಲಿ	37899-39299
ಹೊಸಚಾಲಿ	31609-35569
ಶಿವಮೊಗ್ಗ	
ಬೆಟ್ಟೆ	48069-55332
ಗೊರಬಲು	16009-35599
ರಾಶಿ	34699-53559
ಸರಕು	61599-70009
ಸಿದ್ದಾಪುರ	
ಬಿಳಿಗೋಟು	26509-32699
ಚಾಲಿ	34109-36299
ಕೋಕ	26019-29619
ಕೆಂಪುಗೋಟು	26219-29019
ರಾಶಿ	43099-49899
ತಟ್ಟಿಬೆಟ್ಟೆ	35300-48459
ಶಿರಸಿ	
ಬೆಟ್ಟೆ	32899-44889
ಬಿಳಿಗೋಟು	20900-31299
ಚಾಲಿ	33099-37581
ಕೆಂಪುಗೋಟು	18600-28699
ರಾಶಿ	45018-50525
ಯಲ್ಲಾಪುರ	
ಅಪಿ	56139-60699
ಬಿಳಿಗೋಟು	22899-31920
ಕೋಕ	8899-27199
ಹಳೆಚಾಲಿ	37501-38101
ಹೊಸಚಾಲಿ	32099-37180
ಕೆಂಪುಗೋಟು	24016-32560
ರಾಶಿ	44000-54288
ತಟ್ಟಿಬೆಟ್ಟೆ	34179-43319


ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,800	15,800	-	234.20
ಎಸಿ	8,260	340 on OT	-	
ಆರ್‌ಪಿ	9,000	14,000	-	ಲಂಡನ್
ಆರ್‌ಸಿ	4,200	395 on OT	-	4,425 ಡಾಲರ್ಸ್

ಹೆರಿಟೇಜ್ ಫುಡ್ಸ್ ಷೇರಿನ ಮೌಲ್ಯ ಶೇ 55ರಷ್ಟು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದ ತೆಲುಗು ದೇಶಂ ಪಕ್ಷದ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಒಡೆತನದ ಹೆರಿಟೇಜ್ ಫುಡ್ಸ್ ಲಿಮಿಟೆಡ್‌ನ ಷೇರಿನ ಮೌಲ್ಯ ಶೇ 55ರಷ್ಟು ಏರಿಕೆಯಾಗಿದೆ.



ಚಂದ್ರಬಾಬು ನಾಯ್ಡು

ಲೋಕಸಭೆ ಮತ್ತು ಆಂಧ್ರದ ವಿಧಾನಸಭೆ ಚುನಾವಣೆಯಲ್ಲಿ ತೆಲುಗು ದೇಶಂ ಪಕ್ಷವು ಜಯ ಸಾಧಿಸಿದೆ. ಚುನಾವಣೆಯ ಫಲಿತಾಂಶದ ಮುನ್ನಾ ದಿನವಾದ ಜೂನ್ 3ರಂದು ₹424 ಇದ್ದ ಪ್ರತಿ ಷೇರಿನ ಬೆಲೆ ಶುಕ್ರವಾರದ ವಹಿವಾಟಿನಲ್ಲಿ ₹661ಕ್ಕೆ ಮುಟ್ಟಿದೆ.

ಕಂಪನಿಯ ಪ್ರವರ್ತಕರಾದ ಚಂದ್ರಬಾಬು ನಾಯ್ಡು ಅವರ ಪತ್ನಿ ನಾರಾ ಭುವನೇಶ್ವರಿ ಅವರು ಕಂಪನಿಯಲ್ಲಿ 2.26 ಕೋಟಿ ಷೇರುಗಳನ್ನು ಹೊಂದಿದ್ದು, ಸಂಪತ್ತಿನ ಮೌಲ್ಯ ₹579 ಕೋಟಿಗೆ ಮುಟ್ಟಿದೆ.

ಪುತ್ರ ನಾರಾ ಲೋಕೇಶ್ 1 ಕೋಟಿಗೂ ಹೆಚ್ಚು ಷೇರುಗಳನ್ನು ಹೊಂದಿದ್ದು, ಅವರ ಸಂಪತ್ತಿನ ಮೌಲ್ಯ ₹237 ಕೋಟಿ ಆಗಿದೆ.

1992ರಲ್ಲಿ ನವೀಕರಿಸ ಬಹುದಾದ ಇಂಧನ ಉತ್ಪಾದನೆ ಮತ್ತು ಹಾಲು, ಹಾಲಿನ ಉತ್ಪನ್ನಗಳ ಮಾರಾಟಕ್ಕಾಗಿ ಚಂದ್ರಬಾಬು ನಾಯ್ಡು, ಈ ಕಂಪನಿ ಸ್ಥಾಪಿಸಿದ್ದರು.

ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಒಡಿಶಾ, ನವದೆಹಲಿ, ಹರಿಯಾಣ, ರಾಜಸ್ಥಾನ, ಉತ್ತರಾಖಂಡ ಮತ್ತು ಉತ್ತರಪ್ರದೇಶದಲ್ಲಿ ಹೈನು ಮಾರುಕಟ್ಟೆಯನ್ನು ವಿಸ್ತರಿಸಲಾಗಿದೆ ಎಂದು ಕಂಪನಿಯ ವೆಬ್‌ಸೈಟ್ ತಿಳಿಸಿದೆ.

ಬಾಹ್ಯಾಕಾಶ ನಿಲ್ದಾಣ ತಲುಪಿದ ಸುನಿತಾ

ಹ್ಯೂಸ್ಟನ್ (ಪಿಟಿಐ): ಭಾರತ ಮೂಲದ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಮತ್ತು ಅವರ ಸಹಯಾತ್ರಿ ಬಚ್ ವಿಲ್ಮೋರ್ ಅವರು ಗುರುವಾರ ಯಶಸ್ವಿಯಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ತಲುಪಿದ್ದಾರೆ.

ಇವರಿಬ್ಬರು ಪ್ರಯಾಣಿಸಿದ ‘ಸ್ಟಾರ್‌ಲೈನರ್’ ಗಗನನೌಕೆಯನ್ನು ಗುರುವಾರ ಮಧ್ಯಾಹ್ನ 1.34ಕ್ಕೆ ಬಾಹ್ಯಾಕಾಶ ನಿಲ್ದಾಣಕ್ಕೆ ಡಾಕ್ (ಕೂಡಿಕೊಳ್ಳುವ ಪ್ರಕ್ರಿಯೆ) ಮಾಡಲಾಯಿತು. ಡಾಕಿಂಗ್ ವೇಳೆ ತಾಂತ್ರಿಕ ದೋಷ ಕಂಡುಬಂದರೂ, ಅದನ್ನು ಸರಿಪಡಿಸಲಾಯಿತು.

58 ವರ್ಷದ ಸುನಿತಾ ಮತ್ತು 61 ವರ್ಷದ ವಿಲ್ಮೋರ್ ಅವರಿದ್ದ ‘ಸ್ಟಾರ್‌ಲೈನರ್’ ನೌಕೆಯನ್ನು ಫ್ಲಾರಿಡಾದ ‘ಕೇಪ್ ಕ್ಯಾನವೆರಲ್ ಸ್ಪೇಸ್ ಫೋರ್ಸ್’ ಕೇಂದ್ರದಿಂದ ಬುಧವಾರ ಉಡಾವಣೆ ಮಾಡಲಾಗಿತ್ತು. 26 ಗಂಟೆಗಳ ಪ್ರಯಾಣದ ಬಳಿಕ ನೌಕೆಯು ಬಾಹ್ಯಾಕಾಶ ಕೇಂದ್ರ ತಲುಪಿದೆ ಎಂದು ನಾಸಾ ಪ್ರಕಟಣೆ ತಿಳಿಸಿದೆ.



ಸುನಿತಾ ವಿಲಿಯಮ್ಸ್ ಬಾಹ್ಯಾಕಾಶ ನಿಲ್ದಾಣ ಪ್ರವೇಶಿಸಿದ ಕ್ಷಣ—ಪಿಟಿಐ ಚಿತ್ರ

ಡಾಕಿಂಗ್ ಪ್ರಕ್ರಿಯೆ ನಿಖರವಾಗಿ ನಡೆದಿದೆಯೇ ಎಂಬುದನ್ನು ಖಚಿತ-ಪಡಿಸಿಕೊಳ್ಳಲು ಕ್ರಮಬದ್ಧ ತಪಾಸಣೆ ನಡೆಸಲಾಯಿತು. ಇದಕ್ಕಾಗಿ ಒಂದೆರಡು ಗಂಟೆಗಳು ಬೇಕಾದವು. ಬಾಹ್ಯಾಕಾಶ ನಿಲ್ದಾಣ ಮತ್ತು ಗಗನನೌಕೆಯಲ್ಲಿರುವ ಗಾಳಿ ಸೋರಿ ಹೋಗುವುದಿಲ್ಲ ಎಂಬುದು ಖಚಿತವಾದ ಬಳಿಕ ಇಬ್ಬರೂ ಬಾಹ್ಯಾಕಾಶ ನಿಲ್ದಾಣ ಪ್ರವೇಶಿಸಿ, ಅಲ್ಲಿದ್ದ ಇತರ ಏಳು ಗಗನಯಾತ್ರಿಗಳ ಜತೆಯಾದರು.

ನಿಲ್ದಾಣ ಪ್ರವೇಶಿಸುತ್ತಿದ್ದಂತೆಯೇ ನೃತ್ಯ ಮಾಡಿದ ಸುನಿತಾ ಅವರು ಇತರ ಗಗನಯಾತ್ರಿಗಳನ್ನು ತಬ್ಬಿಕೊಂಡು ಸಂಭ್ರಮಿಸಿದರು.

ಸುನಿತಾ ಅವರಿಗೆ ಇದು ಮೂರನೇ ಬಾಹ್ಯಾಕಾಶ ಯಾನ ಆಗಿತ್ತು. ಸುನಿತಾ ಮತ್ತು ವಿಲ್ಮೋರ್ ಕನಿಷ್ಠ ಒಂದು ವಾರ ಬಾಹ್ಯಾಕಾಶ ನಿಲ್ದಾಣದಲ್ಲಿ ತಂಗಲಿದ್ದು, ಅಲ್ಲಿರುವ ಗಗನಯಾತ್ರಿಗಳ ಜತೆ ವಿವಿಧ ಪರೀಕ್ಷೆಗಳು ಮತ್ತು ವೈಜ್ಞಾನಿಕ ಪ್ರಯೋಗಗಳನ್ನು ನಡೆಸಲಿದ್ದಾರೆ.

ರಷ್ಯಾ: ಭಾರತದ 4 ವಿದ್ಯಾರ್ಥಿಗಳು ನೀರುಪಾಲು

ಮಾಸ್ಕೊ (ಪಿಟಿಐ): ಭಾರತ ಮೂಲದ ನಾಲ್ವರು ವೈದ್ಯಕೀಯ ವಿದ್ಯಾರ್ಥಿಗಳು ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್‌ನ ವೊಲ್ಖೋವ್ ನದಿಯಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಮತ್ತೊಬ್ಬ ವಿದ್ಯಾರ್ಥಿಯನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಮೃತಪಟ್ಟ ನಾಲ್ವರೂ ಮಹಾರಾಷ್ಟ್ರದವರಾಗಿದ್ದು, ಅವರನ್ನು ಹರ್ಷಲ್ ಅನಂತರಾವ್ ದೇಸಾಲೆ, ಜೀಶನ್ ಅಶ್ಫಾಕ್ ಪಿಂಜಾರಿ, ಜಿಯಾ ಫಿರೋಜ್ ಪಿಂಜಾರಿ ಮತ್ತು ಮಾಲಿಕ್ ಗುಲಾಮ್ ಗೌಸ್ ಎಂದು ಗುರುತಿಸಲಾಗಿದೆ. ಜಿಯಾ ಮತ್ತು ಜೀಶನ್ ಅಣ್ಣತಮ್ಮಂದಿರು ಎಂದು ತಿಳಿದು ಬಂದಿದೆ. ಎಲ್ಲರೂ ನೊವ್‌ಗೊರೊಡ್ ನಗರದ ನೊವ್‌ಗೊರೊಡ್ ಸ್ಟೇಟ್ ಯೂನಿವರ್ಸಿಟಿಯಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದರು. ಮತ್ತೊಬ್ಬ ವಿದ್ಯಾರ್ಥಿನಿ ನಿಶಾ ಭೂಪೇಶ್ ಸೋನವಾನೆ ಅವರನ್ನು ರಕ್ಷಿಸಲಾಗಿದೆ.

ಬೆಂಗಳೂರಿನಿಂದ ಪಾಕ್ ಪಂದ್ಯದವರೆಗೆ ಕೆಂಜಿಗೆ ಪಯಣ...



ಅಮೆರಿಕ ತಂಡದ ನಾಸ್ತುಷ್ ಕೆಂಜಿಗೆ. ಪಿಟಿಐ ಚಿತ್ರ

ಬೆಂಗಳೂರು (ಪಿಟಿಐ): ಹತ್ತು ವರ್ಷಗಳ ಹಿಂದೆ ನಗರದ ಪಿ.ಜಿ.ಯೊಂದರಲ್ಲಿ ನೆಲೆಸಿದ್ದ 22 ವರ್ಷದ ಯುವಕ ವೃತ್ತಿಪರ ಕ್ರಿಕೆಟಿನಾಗುವ ಕನಸು ಹೊಂದಿದ್ದರು. ಅದಕ್ಕಾಗಿ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕ್ರಿಕೆಟ್‌ನಲ್ಲಿ ತರಬೇತಿ ಸಹ ಪಡೆಯುತ್ತಿದ್ದರು. ಗುರುವಾರ ಪಾಕಿಸ್ತಾನ ವಿರುದ್ಧ ಅಮೆರಿಕದ ಚಾರಿತ್ರಿಕ ಟಿ20 ವಿಶ್ವಕಪ್ ಲೀಗ್ ಪಂದ್ಯದ ಗೆಲುವಿನಲ್ಲಿ ಮಿಂಚಿದ ನಾಸ್ತುಷ್ ಕೆಂಜಿಗೆ ಅಂದಿನ ದಿನಗಳಲ್ಲಿ ರಾಜ್ಯ ತಂಡಕ್ಕೆ ಸಹ ಆಯ್ಕೆಯಾಗುವ ಆಸೆ ಕೈಬಿಟ್ಟು ನಿರಾಶರಾಗಿದ್ದರು.

ಹುಟ್ಟಿನಿಂದ ಅಮೆರಿಕ ಪೌರತ್ವ ಪಡೆದಿದ್ದ ಅವರು ಕನಸಿನಿಂದ ಹೊಬಂದು ದಯಾನಂದಸಾಗರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬಯೊ ಟೆಕ್ನಾಲಜಿ ಎಂಜಿನಿಯರಿಂಗ್ ಪದವಿಯೊಡನೆ ತಾಯ್ನಾಡು ಅಮೆರಿಕಕ್ಕೆ ಮರಳಿದ್ದರು.

ಒಳಮನಸ್ಸಿನಲ್ಲಿ ಕ್ರಿಕೆಟಿನಾಗುವ ಆಸೆ ಬತ್ತಿರಲಿಲ್ಲ. ನ್ಯೂಯಾರ್ಕ್‌ನಲ್ಲಿ ವೈದ್ಯಕೀಯ ಉಪಕರಣಗಳ ಪರೀಕ್ಷಕನ ಕೆಲಸದೊಡನೆ ಉದ್ಯೋಗ ಆರಂಭಿಸಿದರು. ಕೆಂಜಿಗೆ ಪೋಷಕರು ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆಯವರು.

'ಈ ಅವಧಿಯಲ್ಲಿ ನನ್ನ ಗುರಿಯತ್ತ ಗಮನಕೊಟ್ಟೆ. ವರ್ಷದ ನಂತರ ನ್ಯೂಯಾರ್ಕ್‌ನ ಕೊಲಂಬಿಯಾ ಕ್ರಿಕೆಟ್ ಕ್ಲಬ್ ಸೇರಿದೆ. ನನ್ನ ಆಸೆಗೆ ಮತ್ತೆ ಜೀವ ಬಂತು' ಎಂದು ಎಡಗೈ ಸ್ಪಿನ್ನರ್ ಕೆಂಜಿಗೆ ಸುದ್ದಿಸಂಸ್ಥೆ ಜೊತೆ ನೆನಪಿಸಿಕೊಂಡರು.

'ನೊ ೀ ಶ್ ಪ್ರತಿಭಾನ್ವಿತ. ನೆಟ್ಸ್ ವೇಳೆ ತುಂಬಾ ಶ್ರಮ ಹಾಕುತ್ತಿದ್ದರು. ಕೆಎಸ್‌ಸಿಎ ಲೀಗ್‌ನಲ್ಲೂ ಆಡಿದ್ದರು. ಆದರೆ ಇಲ್ಲಿ ಹಲವಾರು ಮಂದಿ ರಾಜ್ಯ ತಂಡಕ್ಕೆ ಬರಲು ಹಾತೊರೆಯುತ್ತಿರುತ್ತಾರೆ. ದುರದೃಷ್ಟವಶಾತ್ ಅವರಿಗೆ ಅವಕಾಶ ಸಿಗಲಿಲ್ಲ' ಎಂದು ಕೆಐಒಸಿಯಲ್ಲಿ ಕೋಚ್ ಆಗಿರುವ ಇರ್ಫಾನ್ ಸೇಠ್ ನೆನಪಿಸಿಕೊಂಡರು.

ಮುಂದಿನ ಕೆಲವೇ ವರ್ಷಗಳಲ್ಲಿ ಅವರು ಹಂತಹಂತವಾಗಿ ಪ್ರಗತಿ ಕಂಡರು. ಅಮೆರಿಕ ರಾಷ್ಟ್ರೀಯ ತಂಡದ ಜೊತೆ ಕೇಂದ್ರಿಯ ಗುತ್ತಿಗೆ ಪಡೆದರು. ಮೇಜರ್ ಲೀಗ್‌ನಲ್ಲಿ ಎಂಐ ನ್ಯೂಯಾರ್ಕ್‌ಗೆ ಆಡುವ ಅವಕಾಶ ಪಡೆದರು. ಅಲ್ಲಿ ಅವರು ಪರಿಣಾಮಕಾರಿಯಾಗಿದ್ದು 6 ಪಂದ್ಯಗಳಿಂದ 5.76 ಇಕಾನಮಿ ದರದಲ್ಲಿ ಆರು ವಿಕೆಟ್ ಪಡೆದರು. ನ್ಯೂಜಿಲೆಂಡ್‌ನ ಅನುಭವಿ ಮಾರ್ಟಿನ್ ಗಪ್ಟಿಲ್ ಅವರ ವಿಕೆಟ್ ಕೂಡ ಒಳಗೊಂಡಿತ್ತು.

'ಆ ಅನುಭವ ನನಗೆ ತುಂಬಾ ನೆರವಾಯಿತು. ದೊಡ್ಡ ಆಟಗಾರರ ಮತ್ತು ಮಹತ್ವದ ಸಂದರ್ಭದಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸ ಮೂಡಿಸಿತು' ಎಂದು ಕೆಂಜಿಗೆ ಹೇಳಿದರು. ಅವರ ಪ್ರದರ್ಶನ ಗಮನಿಸಿದ ವೆಸ್ಟ್ ಇಂಡೀಸ್ ಆಟಗಾರ ಡ್ವೇನ್ ಬ್ರೇವೊ ಅವರು ಫ್ಲಾರಿಡಾದಲ್ಲಿ ನಡೆದ ಅಮೆರಿಕ ಓಪನ್ ಟಿ20 ಟೂರ್ನಿಯಲ್ಲಿ ಆಡುವ ಅವಕಾಶ ನೀಡಿದರು. ಅಲ್ಲಿ ವಿವಿಧ ರಾಷ್ಟ್ರಗಳ ಆಟಗಾರರಿದ್ದರು.

'ಅಮೆರಿಕ ತಂಡಕ್ಕೆ ಆಯ್ಕೆಯಾಗಲು ನಾನು 800 ಗಂಟೆಗಳ ಸಮುದಾಯ ಸೇವೆ ಮಾಡಬೇಕಿತ್ತು. ಅವುಗಳಲ್ಲಿ ಕಿರಿಯ ಕ್ರಿಕೆಟಿಗರಿಗೆ ಕಲಿಸುವುದೂ ಒಳಗೊಂಡಿತ್ತು. ಆದರೆ ರಾಷ್ಟ್ರೀಯ ತಂಡಕ್ಕೆ ಸೇರಿದ್ದರಿಂದ ಇವ್ಯಾವುದೂ ವ್ಯರ್ಥ ಪ್ರಯತ್ನವಾಗಲಿಲ್ಲ' ಎಂದರು. 2019ರಲ್ಲಿ ಅವರು ಯುಎಇ ತಂಡದ ವಿರುದ್ಧ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು. ಅಂದಿನಿಂದ ಇಲ್ಲಿಯವರೆಗೆ 40 ಏಕದಿನ ಮತ್ತು ಏಳು ಟಿ20 ಪಂದ್ಯಗಳನ್ನು ಆಡಿದ್ದಾರೆ.

'ಅಸೋಸಿಯೇಟ್ ತಂಡದ ಆಟಗಾರರಿಗೆ ದೊಡ್ಡ ತಂಡಗಳ ವಿರುದ್ಧ ಆಡುವ ಅವಕಾಶ ಸಿಗುವುದಿಲ್ಲ. ಹೀಗಾಗಿ ನಾನು ಪಾಕ್ ವಿರುದ್ಧದ ಪಂದ್ಯದ ಅವಕಾಶವನ್ನು ಎರಡೂ ಕೈಗಳಲ್ಲಿ ಬಾಚಿಕೊಂಡೆ. ನನ್ನಂಥ ಆಟಗಾರರಿಗೆ ಇದು ಸವಾಲು ಕೂಡ' ಎಂದು ಕೆಂಜಿಗೆ ಅಭಿಪ್ರಾಯಪಟ್ಟರು. ಐಸಿಸಿ ಕ್ವಾಲಿಫೈಯರ್‌ನಲ್ಲಿ ಅವರು ಅಮೆರಿಕ ಪರ ಅತ್ಯಧಿಕ ವಿಕೆಟ್ ಪಡೆದವರು. ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಅವರು ಮಧ್ಯಮ ಹಂತದ ಓವರುಗಳಲ್ಲಿ ಉಸ್ಮಾನ್ ಖಾನ್, ಆಜಂ ಖಾನ್ ಮತ್ತು ಶದಾಬ್ ಖಾನ್ ಅವರ ವಿಕೆಟ್‌ಗಳನ್ನು ಪಡೆದಿದ್ದರು.

ಗೆಲುವಿನಲ್ಲಿ ಮುಂಬೈ ಎಂಜಿನಿಯರ್ ಕೈಚಳಕ

ಮುಂಬೈ (ಪಿಟಿಐ): ಹಗಲು ಹೊತ್ತಿನಲ್ಲಿ ಓರಾಕಲ್‌ನಲ್ಲಿ ಎಂಜಿನಿಯರ್ ಕೆಲಸ. ಬಿಡುವಿನ ವೇಳೆ ಕ್ರಿಕೆಟ್ ಆ್ಯಪ್ ಅಭಿವೃದ್ಧಿ, ಗಿಟಾರ್ ನುಡಿಸುವ ಹುಚ್ಚು. ಕ್ರಿಕೆಟ್ ಅವರ ಹವ್ಯಾಸ. ಅಮೆರಿಕದ ತಂಡದಲ್ಲಿರುವ ಮುಂಬೈ ಮೂಲದ ಸೌರಭ್ ನೇತ್ರಾವಲ್ಕರ್ ಗುರುವಾರ ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನ ವಿರುದ್ಧ ಐತಿಹಾಸಿಕ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಅಮೆರಿಕದ ಪರ 'ಸೂಪರ್ ಓವರ್' ಮಾಡಿದ ಸೌರಭ್ ಕೆಲವೇ ಹೊತ್ತಿನಲ್ಲಿ 'ಸ್ಟಾರ್' ಆಗಿ ಹೊರಹೊಮ್ಮಿದ್ದಾರೆ. ನಿಗದಿತ 20 ಓವರ್‌ಗಳಲ್ಲಿ 159 ರನ್‌ಗೆ ಪಂದ್ಯ ಟೈ ಆದ ಬಳಿಕ ಸೂಪರ್ ಓವರ್‌ನಲ್ಲಿ ಪಾಕ್ ತಂಡವನ್ನು 13 ರನ್‌ಗಳಿಗೆ ನಿಯಂತ್ರಿಸಿ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದವರು ಸೌರಭ್.

32 ವರ್ಷದ ಸೌರಭ್ ಅವರು 2010ರಲ್ಲಿ 19 ವರ್ಷದೊಳಗಿನ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಆ ವೇಳೆಯಲ್ಲಿ ಕೆ.ಎಲ್. ರಾಹುಲ್, ಮಯಾಂಕ್ ಅಗರ್‌ವಾಲ್ ಅವರೊಂದಿಗೆ ಡ್ರೆಸ್ಸಿಂಗ್ ಕೊಠಡಿಯನ್ನು ಹಂಚಿಕೊಂಡಿದ್ದ ಸೌರವ್, ರಣಜಿ ಟ್ರೋಫಿ ಯಲ್ಲಿ ಮುಂಬೈ ತಂಡಕ್ಕೂ ಆಡಿದ್ದಾರೆ.



ಸೌರಭ್ ನೇತ್ರಾವಲ್ಕರ್

ಕುತೂಹಲದ ಸಂಗತಿಯೆಂದರೆ ಸೌರಭ್ ಮತ್ತು ಪಾಕಿಸ್ತಾನದ ನಾಯಕ ಬಾಬರ್ ಆಜಂ 2010ರಲ್ಲಿ 19 ವರ್ಷದೊಳಗಿನ ವಿಶ್ವಕಪ್‌ನಲ್ಲೂ ಮುಖಾಮುಖಿಯಾಗಿದ್ದರು. ಸೌರಭ್ ಒಳಗೊಂಡಿದ್ದ ಭಾರತ ತಂಡವು ಅಂದು ಪಾಕಿಸ್ತಾನದ ವಿರುದ್ಧ ಸೋತಿತು.

'ಸೌರಭ್ ಶಾಂತ ಸ್ವಭಾವದ ವ್ಯಕ್ತಿ. ಯಾವ ಸಂದರ್ಭದಲ್ಲೂ ಅವರು ಒತ್ತಡಕ್ಕೆ ಒಳಗಾಗುವುದಿಲ್ಲ. ಯೋಗದೊಂದಿಗೆ ದಿನವನ್ನು ಆರಂಭಿಸುತ್ತಾರೆ. ಯಾವುದೇ ಪರಿಸ್ಥಿತಿಯನ್ನು ಸುಲಭವಾಗಿ ಎದುರಿಸುವುದು ಹೇಗೆ ಎಂದು ಅವರಿಗೆ ತಿಳಿದಿದೆ' ಎಂದು ಮುಂಬೈನಲ್ಲಿ ಕುಟುಂಬದ ಸದಸ್ಯರೊಂದಿಗೆ ಟಿವಿಯಲ್ಲಿ ಪಂದ್ಯ ವೀಕ್ಷಿಸಿದ್ದ ಅವರ ತಂದೆ ನರೇಶ್ ಪ್ರತಿಕ್ರಿಯಿಸಿದ್ದಾರೆ.

ಪಾಕ್ ವಿರುದ್ಧ ಸೂಪರ್ ಓವರ್ ಮಾಡುವ ವೇಳೆಯೂ ಸೌರಭ್ ತಲೆಕೆಡಿಸಿಕೊಂಡಂತೆ ಕಾಣಲಿಲ್ಲ. ಪ್ರತಿ ಎಸೆತದ ಮುನ್ನ ಬಹಳಷ್ಟು ಯೋಚನೆ ಮಾಡುತ್ತಿದ್ದರು ' ಎಂದು ಅವರು ಹೇಳಿದರು.


2015ರಲ್ಲಿ ಅಮೆರಿಕಕ್ಕೆ ತೆರಳಿದ ಅವರು, ಅಲ್ಲಿಯೇ ಉನ್ನತ ವ್ಯಾಸಂಗ ಮಾಡಿ ಉದ್ಯೋಗ ಪಡೆದರು. 2019ರಿಂದ ರಾಷ್ಟ್ರೀಯ ಕ್ರಿಕೆಟ್ ತಂಡದ ಭಾಗವಾಗಿರುವ ಸೌರಭ್ 48 ಏಕದಿನ ಪಂದ್ಯಗಳಲ್ಲಿ 73 ವಿಕೆಟ್ ಪಡೆದಿದ್ದಾರೆ. ಚುಟುಕು ಮಾದರಿಯ 20 ಪಂದ್ಯಗಳಲ್ಲಿ 20 ವಿಕೆಟ್ ಪಡೆದಿದ್ದಾರೆ.

ಜೋಸ್ ಬಟ್ಲರ್ ಬಳಗಕ್ಕೆ ಬೌಲಿಂಗ್ ಸುಧಾರಿಸುವ ಒತ್ತಡ

ಇಂಗ್ಲೆಂಡ್‌ಗೆ ಇಂದು ಆಸ್ಟ್ರೇಲಿಯಾ ಸವಾಲು

ಬ್ರಿಜ್‌ಟೌನ್ (ಬಾರ್ಬಡೋಸ್), (ಪಿಟಿಐ): ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವು, ಸಾಂಪ್ರದಾಯಿಕ ಎದುರಾಳಿ ಆಸ್ಟ್ರೇಲಿಯಾ ತಂಡದ ಎದುರು ಶನಿವಾರ ನಡೆಯಲಿರುವ 'ಬಿ' ಗುಂಪಿನ ಪಂದ್ಯದಲ್ಲಿ ಸುಧಾರಿತ ಬೌಲಿಂಗ್ ಪ್ರದರ್ಶನದ ವಿಶ್ವಾಸದೊಡನೆ ತನ್ನ ಟಿ20 ವಿಶ್ವಕಪ್ ಅಭಿಯಾನವನ್ನು ಮುಂದುವರಿಸಲಿದೆ.

ಸ್ಕಾಟ್ಲೆಂಡ್ ವಿರುದ್ಧ ಇಂಗ್ಲೆಂಡ್‌ನ ಮೊದಲ ಪಂದ್ಯ ಮಳೆಗೆ ಕೊಚ್ಚಿಹೋಗಿತ್ತು. ಆ ಪಂದ್ಯ ಸ್ಥಗಿತಗೊಳ್ಳುವ ಮೊದಲು ಸ್ಕಾಟ್ಲೆಂಡ್ ತಂಡ 10 ಓವರುಗಳಲ್ಲಿ ವಿಕೆಟ್ ಕಳೆದುಕೊಳ್ಳದೇ 90 ರನ್ ಗಳಿಸಿತ್ತು. ಪಂದ್ಯ ರದ್ದಾದ ಕಾರಣ ಉಭಯ ತಂಡಗಳಿಗೆ ತಲಾ ಒಂದು ಪಾಯಿಂಟ್ ದೊರಕಿತ್ತು.



ಡೇವಿಡ್ ವಾರ್ನರ್ ಎಎಫ್‌ಪಿ ಚಿತ್ರ

ಇಂಗ್ಲೆಂಡ್ ದಾಳಿಯನ್ನು ಸ್ಕಾಟ್ಲೆಂಡ್‌ನ ಆರಂಭ ಆಟಗಾರರು (ಜಾರ್ಜ್ ಮುನ್ಸೆ ಮತ್ತು ಮೈಕೆಲ್ ಜೋನ್ಸ್) ಆರಾಮವಾಗಿ ಎದುರಿಸಿ ರನ್‌ಗಳನ್ನು ಪೇರಿಸಿದ್ದರು. ಆಸ್ಟ್ರೇಲಿಯಾದ ಬ್ಯಾಟಿಂಗ್ ಕ್ರಮಾಂಕ ಇನ್ನಷ್ಟು ಪ್ರಬಲವಾಗಿದೆ.

ಒಮಾನ್ ವಿರುದ್ಧ ಪಂದ್ಯದಲ್ಲಿ ಆಸ್ಟ್ರೇಲಿಯಾದ ಮಾರ್ಕಸ್ ಸ್ಟೊಯಿನಿಸ್ ಪರಾಕ್ರಮ ಮೆರೆದಿದ್ದರು. ವಾರ್ನರ್ ಅವರೂ ಅರ್ಧ ಶತಕ ಗಳಿಸಿದ್ದರು.

ಬೌಲರ್‌ಗಳ ಪೈಕಿ ಪುನರಾಗಮನ ಮಾಡುತ್ತಿರುವ ಜೋಫ್ರಾ ಆರ್ಚರ್ ಮೇಲೆಯೆ ಹೆಚ್ಚಿನ ಅವಲಂಬನೆ ಹೊಂದಿದ್ದು ಅವರು 2 ಓವರುಗಳಲ್ಲಿ 12 ರನ್ ನೀಡಿದ್ದರು. ಐಪಿಎಲ್‌ನಲ್ಲಿ ಉತ್ತಮ ಸಾಧನೆ ತೋರಿದ್ದ ನಾಯಕ ಜೋಸ್ ಬಟ್ಲರ್ ಸೇರಿದಂತೆ ಇತರ ಬ್ಯಾಟರ್‌ಗಳು, ಆಸ್ಟ್ರೇಲಿಯಾ ವಿರುದ್ಧ ಉತ್ತಮವಾಗಿ ಆಡಬೇಕಾಗಿದೆ. ಆಸ್ಟ್ರೇಲಿಯಾ ಬೌಲರ್‌ಗಳು ಒಮಾನ್ ಎದುರು ಪರಿಣಾಮಕಾರಿಯಾಗಿದ್ದರು. ಒಮಾನ್ ಎದುರು ಕಮಿನ್ಸ್ ಬದಲು ನಥಾನ್ ಎಲಿಸ್ ಆಡಿದ್ದರು.

ಆದರೆ ಶನಿವಾರ ಪ್ರಬಲ ಎದುರಾಳಿ ವಿರುದ್ಧ ಆಡುವಾಗ ಕಮಿನ್ಸ್ ತಂಡಕ್ಕೆ ಮರಳುವ ಸಾಧ್ಯತೆಯಿದೆ. 2021ರ ಚಾಂಪಿಯನ್ ಆಸ್ಟ್ರೇಲಿಯಾ ಬ್ಯಾಟಿಂಗ್ ಪ್ರಬಲವಾಗಿದೆ. ಗ್ಲೆನ್ ಮ್ಯಾಕ್ಸ್‌ವೆಲ್ ಒಬ್ಬರೇ ಲಯಕಾಣುತ್ತಿಲ್ಲ.

ಒಮಾನ್ ವಿರುದ್ಧವೂ ಅವರು ಸೊನ್ನೆ ಸುತ್ತಿದ್ದರು. ಈಗ ಲಯಕ್ಕೆ ಮರಳಲು ಇಂಗ್ಲೆಂಡ್ ಪಂದ್ಯ ಮತ್ತೊಂದು ಅವಕಾಶ ನೀಡಿದೆ.

ಇಂದಿನ ಪಂದ್ಯಗಳು

ನ್ಯೂಜಿಲೆಂಡ್ Vs ಅಫ್ಘಾನಿಸ್ತಾನ		ಬೆಳಿಗ್ಗೆ 5
ಶ್ರೀಲಂಕಾ Vs ಬಾಂಗ್ಲಾದೇಶ		ಬೆಳಿಗ್ಗೆ 6
ನೆದರ್ಲೆಂಡ್ಸ್ Vs ದಕ್ಷಿಣ ಆಫ್ರಿಕಾ		ರಾತ್ರಿ 8
ಆಸ್ಟ್ರೇಲಿಯಾ Vs ಇಂಗ್ಲೆಂಡ್		ರಾತ್ರಿ 10.30

ಲೈವ್: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್

ದಕ್ಷಿಣ ಆಫ್ರಿಕಾ– ನೆದರ್ಲೆಂಡ್ಸ್ ಪಂದ್ಯ ಇಂದು

ನ್ಯೂಯಾರ್ಕ್: ಶ್ರೀಲಂಕಾ ಸವಾಲನ್ನು ಸುಲಭವಾಗಿ ಮಟ್ಟಹಾಕಿ ವಿಶ್ವಕಪ್ ಅಭಿಯಾನ ಆರಂಭಿಸಿದ ದಕ್ಷಿಣ ಆಫ್ರಿಕಾ ತಂಡವು, ಶನಿವಾರ ನಡೆಯುವ 'ಡಿ' ಗುಂಪಿನ ತನ್ನ ಎರಡನೇ ಪಂದ್ಯದಲ್ಲಿ ಅಪಾಯಕಾರಿ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ.

ಕಳೆದ ವರ್ಷ ಏಕದಿನ ವಿಶ್ವಕಪ್‌ನಲ್ಲಿ ಡಚ್ಚರ ವಿರುದ್ಧದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ 38 ರನ್‌ಗಳಿಂದ ಸೋತಿದ್ದು ಆ ತಂಡದ ಮನದಿಂದ ಇನ್ನೂ ದೂರವಾಗಿಲ್ಲ. ಏಡನ್ ಮರ್ಕರಂ ಬಳಗ ಈ ಬಾರಿ ಮುಯ್ಯಿ ತೀರಿಸಲು ಕಾತರವಾಗಿದೆ. ಮೊದಲ ಪಂದ್ಯದಲ್ಲಿ ಬೌಲರ್ ಆ್ಯನ್ರಿಚ್ ನಾಕಿಯಾ ಅವರ ಪ್ರದರ್ಶನ ಅವರ ವಿಶ್ವಾಸ ವೃದ್ಧಿಸಿದೆ. ನಾಲ್ಕು ವಿಕೆಟ್‌ಗಳನ್ನು 9 ರನ್ನಿಗೆ ಪಡೆದಿದ್ದರು.

ನೆದರ್ಲೆಂಡ್ಸ್ ಮೊದಲ ಪಂದ್ಯದಲ್ಲಿ ನೇಪಾಳ ತಂಡವನ್ನು ಆರು ವಿಕೆಟ್‌ಗಳಿಂದ ಸೋಲಿಸಿತ್ತು. ಬ್ಯಾಟರ್ ಮ್ಯಾಕ್ಸ್ ಒಡೌಡ್ ಅರ್ಧ ಶತಕ ಹೊಡೆದರೆ, ವೇಗದ ಬೌಲರ್‌ಗಳಾದ ಟಿಮ್ ಪ್ರಿಂಗಲ್ ಮತ್ತು ಲೋಗನ್ ವಾನ್ ಬೀಕ್ ತಲಾ ಮೂರು ವಿಕೆಟ್‌ಗಳನ್ನು ಪಡೆದಿದ್ದರು.


ಪಾಕ್ ಮಾಜಿ ಕ್ರಿಕೆಟಿಗರ ಆಕ್ರೋಶ

ಕರಾಚಿ (ಪಿಟಿಐ): ಟಿ20 ವಿಶ್ವಕಪ್‌ಗೆ ಪದಾರ್ಪಣೆ ಮಾಡಿದ ಅಮೆರಿಕ ತಂಡದ ವಿರುದ್ಧ ಪಾಕಿಸ್ತಾನ ತಂಡ ಗುರುವಾರ ನಡೆದ ಪಂದ್ಯದಲ್ಲಿ ಆಘಾತಕಾರಿ ಸೋಲು ಅನುಭವಿಸಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕ್ರಿಕೆಟ್ ಸಮುದಾಯ ಇದು 'ಕರಾಳ ದಿನ' ಎಂದು ಕರೆದಿದೆ. ತಂಡದ ಕಳಪೆ ನಿರ್ವಹಣೆಗೆ ಮಾಜಿ ಆಟಗಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಎ' ಗುಂಪಿನ ಪಂದ್ಯದಲ್ಲಿ ಅಮೆರಿಕ ಸೂಪರ್ ಓವರ್‌ನಲ್ಲಿ ಪಾಕಿಸ್ತಾನ ತಂಡವನ್ನು ಸೋಲಿಸಿ ಎರಡನೇ ಗೆಲುವು ದಾಖಲಿಸಿತ್ತು.

'ಪಾಕಿಸ್ತಾನ ತಂಡವು ನಿರ್ಣಾಯಕ ಘಟ್ಟದಲ್ಲಿ ಕಾರ್ಯತಂತ್ರ ರೂಪಿಸುವಲ್ಲಿ ಪ್ರಮಾದಗಳನ್ನು ಎಸಗಿದೆ. ಸೂಪರ್ ಓವರ್‌ನಲ್ಲಿ ಎಡಗೈ ವೇಗಿ ಸೌರಭ್ ಅವರ ಮೊದಲ ಎಸೆತವನ್ನು ಫಖರ್ ಜಮಾನ್ ಎದುರಿಸಬೇಕಿತ್ತು. ಬಾಬರ್ ಆಜಂ ಮತ್ತು ಇತರ ಆಟಗಾರರು ಈಗ ಪ್ರತಿ ಪಂದ್ಯವನ್ನು ಮಾಡು ಇಲ್ಲವೇ ಮಡಿ ಆಟವೆಂದು ಪರಿಗಣಿಸುತ್ತಾರೆ ಎಂದು ಭಾವಿಸುತ್ತೇನೆ' ಎಂದು ಮಾಜಿ ನಾಯಕ ಯೂನಿಸ್ ಖಾನ್ ಹೇಳಿದ್ದಾರೆ.

ಇನ್ನೊಬ್ಬ ಮಾಜಿ ಆಟಗಾರ ಮೊಹ್ಸಿನ್ ಖಾನ್ ಅವರು ಪಾಕಿಸ್ತಾನ ಕ್ರಿಕೆಟ್‌ನ ಭವಿಷ್ಯದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. 'ಇದು ಪಾಕಿಸ್ತಾನ ಕ್ರಿಕೆಟ್ ಇತಿಹಾಸದಲ್ಲಿ ಕರಾಳ ದಿನ. ಆಟಗಾರರ ಹೋರಾಟದ ಮನೋಭಾವ ಎಲ್ಲಿಗೆ ಹೋಯಿತು' ಎಂದು ಕ್ರಿಕೆಟ್ ವಿಶ್ಲೇಷಕ ಒಮೈರ್ ಅಲ್ವಿ ಪ್ರಶ್ನಿಸಿದ್ದಾರೆ.



ಪಾಕಿಸ್ತಾನ ವಿರುದ್ಧ ಗುರುವಾರ ನಡೆದ ಪಂದ್ಯದಲ್ಲಿ ಸೂಪರ್ ಓವರ್ ಬಳಿಕ ಗೆಲುವಿನ ಸಂಭ್ರಮ ಆಚರಿಸಿದ ಅಮೆರಿಕ ತಂಡದ ಆಟಗಾರರು. ಎಎಫ್‌ಪಿ ಚಿತ್ರ

ಪಾಕಿಸ್ತಾನ ತಂಡದ ಮಾಜಿ ನಾಯಕ ಹಾಗೂ ಕೋಚ್ ಮೊಹಮ್ಮದ್ ಹಫೀಝ್ ಕೂಡ ತಂಡದ ಕಳಪೆ ಪ್ರದರ್ಶನವನ್ನು ಟೀಕಿಸಿದ್ದಾರೆ. ಬಾಬರ್ ಆಜಂ ಮತ್ತು ಮೊಹಮ್ಮದ್ ರಿಜ್ವಾನ್ ಅವರನ್ನು ಆರಂಭ ಆಟಗಾರರಾಗಿ ಮುಂದುವರಿಸುವುದು ಒಂದು ಹೆಜ್ಜೆ ಹಿಂದೆಯಿಟ್ಟಂತೆ ಎಂದಿದ್ದಾರೆ.

ಅಕ್ರಂ ಆಕ್ರೋಶ: ಪಾಕಿಸ್ತಾನ ತಂಡದ ಶೋಚನೀಯ ಪ್ರದರ್ಶನ ಟೀಕಿಸಿರುವ ಮಾಜಿ ವೇಗಿ ವಾಸಿಂ ಅಕ್ರಮ್ ಅವರು ಬಾಬರ್ ಅಜಂ ಬಳಗಕ್ಕೆ ನಾಕೌಟ್ ಹಾದಿ ಕಠಿಣವಾಗಲಿದೆ ಎಂದೂ ಹೇಳಿದ್ದಾರೆ.

'ಪಾಕಿಸ್ತಾನದ್ದು ನಿರಾಶಾದಾಯಕ ಪ್ರದರ್ಶನ. ಸೋಲು– ಗೆಲುವು ಆಟದ ಭಾಗ. ಆದರೆ ಕೊನೆಯ ಎಸೆತದವರೆಗೆ ಹೋರಾಟ ನೀಡಬೇಕಿತ್ತು. ಪಾಕಿಸ್ತಾನ ಕ್ರಿಕೆಟ್‌ಗೆ ಇದು ಕೆಟ್ಟ ದಿನ' ಎಂದು ಡಲ್ಲಾಸ್‌ನಲ್ಲಿ ಸ್ಟಾರ್ ಸ್ಪೋರ್ಟ್ಸ್‌ಗೆ ತಿಳಿಸಿದ್ದಾರೆ.

ಪಾಕ್ ತಂಡದ ಹಾದಿ ಇನ್ನು ಮುಂದೆ ಕಠಿಣವಾಗಲಿದೆ. ಆ ತಂಡವು ಭಾರತ ವಿರುದ್ಧ (ಜೂ. 9) ಆಡಬೇಕಾಗಿದೆ. ನಂತರ ಇನ್ನೆರಡು ಉತ್ತಮ ತಂಡಗಳ (ಐರ್ಲೆಂಡ್, ಕೆನಡಾ) ಜೊತೆಯೂ ಸೆಣಸಬೇಕಿದೆ ಎಂದರು.

'ಅಮೆರಿಕವು, ಪಾಕಿಸ್ತಾನದ ವಿಕೆಟ್‌ಗಳನ್ನು ಆರಂಭದಲ್ಲೇ ಗಳಿಸಿದ್ದು ಪಂದ್ಯಕ್ಕೆ ತಿರುವು ನೀಡಿತು. ಬಾಬರ್ ಮತ್ತು ಶದಾಬ್ ನಡುವೆ ಜೊತೆಯಾಟ ಬಂದರೂ, ಆಮೇಲೆ ಯಾರೂ ಸರಿಯಾಗಿ ಆಡಲಿಲ್ಲ. ಫೀಲ್ಡಿಂಗ್ ಕಳಪೆಯಾಗಿತ್ತು. ಒಟ್ಟಾರೆ ಆಡಿದ ರೀತಿಯೇ ನಿರಾಶಾದಾಯಕವಾಗಿತ್ತು' ಎಂದು ಹೇಳಿದರು. ಅಮೆರಿಕದ ಪ್ರದರ್ಶನವನ್ನು ಅವರು ಶ್ಲಾಘಿಸಿದರು.

ಸ್ಕಾಟ್ಲೆಂಡ್‌ಗೆ ಮಣಿದ ನಮೀಬಿಯಾ

ಬಾರ್ಬೊಡಸ್ (ಎಪಿ): ಮೈಕೆಲ್ ಲೀಸ್ಕ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಸ್ಕಾಟ್ಲೆಂಟ್ ತಂಡವು ಶುಕ್ರವಾರ ನಮೀಬಿಯಾ ತಂಡವನ್ನು ಐದು ವಿಕೆಟ್‌ಗಳಿಂದ ಮಣಿಸಿ 'ಬಿ' ಗುಂಪಿನಲ್ಲಿ ಅಗ್ರಸ್ಥಾನಕ್ಕೆ ಏರಿತು.

ಮೊದಲು ಬ್ಯಾಟಿಂಗ್ ಮಾಡಿದ ನಮೀಬಿಯಾ ತಂಡವು ನಾಯಕ ಗೆರ್ಹಾರ್ಡ್ ಎರಾಸ್ಮಸ್ (52; 31ಎಸೆತ) ಅವರ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 155 ರನ್ ಕಲೆಹಾಕಿತು.

ಬ್ರಾಡ್ ವೀಲ್ ಮತ್ತು ಬ್ರಾಡ್ ಕ್ಯೂರಿ ಕ್ರಮವಾಗಿ ಮೂರು ಮತ್ತು ಎರಡು ವಿಕೆಟ್ ಪಡೆದರು.

ಸ್ಕಾಟ್ಲೆಂಟ್ ತಂಡವು ಇನ್ನೂ 9 ಎಸೆತ ಬಾಕಿ ಇರುವಂತೆ 5 ವಿಕೆಟ್‌ಗೆ 157 ರನ್ ಗಳಿಸಿ ಗುರಿ ತಲುಪಿತು.

ನಾಯಕ ರಿಚಿ ಬೆರಿಂಗ್ಟನ್ (ಔಟಾಗದೇ 47; 35) ಮತ್ತು ಮೈಕೆಲ್ ಲೀಸ್ಕ್ (35;17ಎ) ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ನಮೀಬಿಯಾ ವಿರುದ್ಧದ ನಾಲ್ಕು ಟಿ20 ಪಂದ್ಯಗಳಲ್ಲಿ ಸ್ಕಾಟ್ಲೆಂಡ್‌ಗೆ ಇದು ಮೊದಲ ಜಯವಾಗಿದೆ.



ಸ್ಕಾಟ್ಲೆಂಡ್ ತಂಡದ ಮೈಕೆಲ್ ಲೀಸ್ಕ್ ಮತ್ತು ರಿಚಿ ಬೆರಿಂಗ್ಟನ್ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರ್: ನಮೀಬಿಯಾ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 155 (ಗೆರ್ಹಾರ್ಡ್ ಎರಾಸ್ಮಸ್ 52, ಜೇನ್ ಗ್ರೀನ್ 28; ಬ್ರಾಡ್ ವೀಲ್ 33ಕ್ಕೆ 3, ಬ್ರಾಡ್ ಕ್ಯೂರಿ 16ಕ್ಕೆ 2, ಮೈಕೆಲ್ ಲೀಸ್ಕ್ 16ಕ್ಕೆ 1).
ಸ್ಕಾಟ್ಲೆಂಡ್: 18.3 ಓವರ್‌ಗಳಲ್ಲಿ 5 ವಿಕೆಟ್‌ಗೆ 157 (ಮೈಕೆಲ್ ಜಾನ್ಸ್ 26, ರಿಚಿ ಬೆರಿಂಗ್ಟನ್ ಔಟಾಗದೇ 47, ಮೈಕೆಲ್ ಲೀಸ್ಕ್ 35; ಗೆರ್ಹಾರ್ಡ್ ಎರಾಸ್ಮಸ್ 29ಕ್ಕೆ 2). ಪಂದ್ಯದ ಆಟಗಾರ: ಮೈಕೆಲ್ ಲೀಸ್ಕ್

ಬಾಗಲಕೋಟೆಯಲ್ಲಿ ದಕ್ಷಿಣ ವಲಯ ವುಶು

ನವದೆಹಲಿ (ಪಿಟಿಐ): ಖೇಲೊ ಇಂಡಿಯಾ ಮಹಿಳಾ ಲೀಗ್‌ನ ನಾಲ್ಕನೇ ಆವೃತ್ತಿಯು ದಕ್ಷಿಣ ವಲಯ ವುಶು ಲೀಗ್‌ನೊಂದಿಗೆ ಇದೇ 10ರಂದು ಬಾಗಲಕೋಟೆಯಲ್ಲಿ ಚಾಲನೆ ದೊರೆಯಲಿದೆ.

ಸಬ್ ಜೂನಿಯರ್, ಜೂನಿಯರ್ ಮತ್ತು ಸೀನಿಯರ್ ವಿಭಾಗಗಳಲ್ಲಿ ಸುಮಾರು 300 ಅಥ್ಲೀಟ್‌ಗಳು ಭಾಗವಹಿಸಲಿದ್ದಾರೆ. ಸಾಂಡಾ ಮತ್ತು ತೌಲು ಕೆಟಗರಿಯಲ್ಲಿ ಸ್ಪರ್ಧೆಗಳು ನಡೆಯಲಿವೆ.

ಕರ್ನಾಟಕ, ಅಂಧ್ರಪ್ರದೇಶ, ಪಾಂಡಿಚೇರಿ, ತಮಿಳುನಾಡು, ಕೇರಳ, ತೆಲಂಗಾಣ, ಅಂಡಮಾನ್ ಮತ್ತು ನಿಕೋಬಾರ್, ಲಕ್ಷದ್ವೀಪ ಮತ್ತು ಒಡಿಶಾದ ವುಶು ಆಟಗಾರರಿಗೆ ಮುಕ್ತ ಪ್ರವೇಶವಿದೆ. 2023–24ರ ಆವೃತ್ತಿಯು ಯಶಸ್ವಿಯಾಗಿ ನಡೆದಿದ್ದು, ಒಟ್ಟು 502 ಟೂರ್ನಿಗಳನ್ನು ಆಯೋಜಿಸಲಾಗಿದೆ. 18 ಕ್ರೀಡೆಗಳಲ್ಲಿ ವಿವಿಧ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ 56 ಸಾವಿರ ಮಹಿಳಾ ಅಥ್ಲೀಟ್‌ಗಳು ಪಾಲ್ಗೊಂಡಿದ್ದಾರೆ.

ಐರ್ಲೆಂಡ್‌ಗೆ ಸೋಲುಣಿಸಿದ ಕೆನಡಾ

ನಿಕೋಲಸ್ ಕಿರ್ಟನ್, ಕನ್ನಡಿಗ ಶ್ರೇಯಸ್ ಮೊವ್ವಾ ಉತ್ತಮ ಬ್ಯಾಟಿಂಗ್

ನ್ಯೂಯಾರ್ಕ್ (ಪಿಟಿಐ): ಕೆನಡಾ ತಂಡವು ವಿಶ್ವಕಪ್ 'ಎ' ಗುಂಪಿನ ಅಚ್ಚರಿ ಫಲಿತಾಂಶವೊಂದರಲ್ಲಿ ಐರ್ಲೆಂಡ್ ತಂಡವನ್ನು 12 ರನ್‌ಗಳಿಂದ ಸೋಲಿಸಿತು. ಇದರೊಂದಿಗೆ ಸತತ ಎರಡನೇ ದಿನ ಐಸಿಸಿ ಪೂರ್ಣ ಪ್ರಮಾಣದ ತಂಡವೊಂದು ಸೋತಂತಾಗಿದೆ.

ಶುಕ್ರವಾರ ನಡೆದ ಪಂದ್ಯದಲ್ಲಿ ನಿಕೋಲಸ್ ಕಿರ್ಟನ್ (49;35ಎ) ಮತ್ತು ಕನ್ನಡಿಗ ಶ್ರೇಯಸ್ ಮೊವ್ವಾ (37;36ಎ) ನೆರವಿನಿಂದ ಕೆನಡಾ ತಂಡ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 137 ರನ್‌ಗಳ ಸವಾಲಿನ ಮೊತ್ತ ಗಳಿಸಿತು.

ನ್ಯೂಯಾರ್ಕ್‌ನಲ್ಲಿ ಐದು ಇನ್ನಿಂಗ್ಸ್‌ನಲ್ಲಿ ಇದೇ ಮೊದಲ ಬಾರಿ ತಂಡವೊಂದು ನೂರು ರನ್‌ಗಳ ಗಡಿ ದಾಟಿತು. ಕೆನಡಾ ಬೌಲರ್‌ಗಳು ಉತ್ತಮ ಪ್ರದರ್ಶನ ನೀಡಿ ತಮಗಿಂತ ಪ್ರಬಲ ಐರ್ಲೆಂಡ್ ತಂಡವನ್ನು ನಿಯಂತ್ರಿಸಿದರು.

ಒಂದು ಹಂತದಲ್ಲಿ 13 ಓವರ್‌ಗಳಲ್ಲಿ ಆರು ವಿಕೆಟ್‌ಗೆ 59 ರನ್ ಗಳಿಸಿ ಪರದಾಡುತ್ತಿದ್ದ ಐರ್ಲೆಂಡ್, ಮಾರ್ಕ್ ಅಡೇರ್, ಜಾರ್ಜ್ ಡಾಕ್ರೆಲ್ ಅವರ 62 ರನ್‌ಗಳ 7ನೇ ವಿಕೆಟ್ ಜೊತೆಯಾಟದ ಮೂಲಕ ಹೋರಾಟ ತೋರಿತು.



ಕೆನಡಾ ತಂಡದ ನಿಕೋಲಸ್ ಕಿರ್ಟನ್ –ಪಿಟಿಐ ಚಿತ್ರ

ಆದರೆ, ಜೆರೆಮಿ ಗೊರ್ಡನ್, ದಿಲ್ಲಾನ್ ಹೇಲಿಗರ್ ಅವರು ಬಿಗು ದಾಳಿ ನಡೆಸಿ ಕೆನಡಾ ವಿಜಯಕ್ಕೆ ನೆರವಾದರು.

ಸಂಕ್ಷಿಪ್ತ ಸ್ಕೋರ್: ಕೆನಡಾ: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 137 (ಪ್ರಗತ್ ಸಿಂಗ್ 18, ನಿಕೋಲಸ್ ಕಿರ್ಟನ್ 49, ಶ್ರೇಯಸ್ ಮೊವ್ವಾ 37; ಕ್ರೇಗ್ ಯಂಗ್ 32ಕ್ಕೆ 2, ಬ್ಯಾರಿ ಮೆಕಾರ್ಥಿ 24ಕ್ಕೆ 2, ಮಾರ್ಕ್ ಅಡೇರ್ 23ಕ್ಕೆ 1, ಗರೆಥ್ ಡೆಲಾನಿ 10ಕ್ಕೆ 1)
ಐರ್ಲೆಂಡ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 125 (ಜಾರ್ಜ್ ಡಾಕ್ರೆಲ್ ಅಜೇಯ 30, ಮಾರ್ಕ್ ಅಡೇರ್ 34, ಜೆರೆಮಿ ಗೊರ್ಡನ್ 16ಕ್ಕೆ2, ದಿಲ್ಲಾನ್ ಹೇಲಿಗರ್ 18ಕ್ಕೆ2) ಪಂದ್ಯ ಶ್ರೇಷ್ಠ: ನಿಕೋಲಸ್ ಕಿರ್ಟನ್

ಫ್ರೆಂಚ್ ಓಪನ್: ಫೈನಲ್‌ಗೆ ಅಲ್ಕರಾಜ್

ಪ್ಯಾರಿಸ್ (ಎಎಫ್‌ಪಿ): ಮೂರನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಅವರು ಶುಕ್ರವಾರ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಯಾನಿಕ್ ಸಿನ್ನರ್ ಅವರನ್ನು ಮಣಿಸಿ ಫೈನಲ್‌ಗೆ ಲಗ್ಗೆ ಹಾಕಿದರು.

ಮಾಜಿ ಅಗ್ರಮಾನ್ಯ ಆಟಗಾರನಾಗಿರುವ 21 ವರ್ಷದ ಅಲ್ಕರಾಜ್ ಎರಡು ಗ್ರ್ಯಾನ್‌ಸ್ಲ್ಯಾಮ್ ಟೂರ್ನಿ ಜಯಿಸಿದ್ದಾರೆ.

ಭಾನುವಾರ ನಡೆಯುವ ಫೈನಲ್‌ನಲ್ಲಿ ಅಲೆಕ್ಸಾಂಡರ್ ಜ್ವರೇವ್ ಅಥವಾ ನಾರ್ವೆಯ ಕ್ಯಾಸ್ಪರ್ ರುಡ್ ಅವರನ್ನು ಎದುರಿಸುವರು.

ಅಲ್ಕರಾಜ್ ಅವರು 2–6, 6–3, 3–6, 6–4, 6–3 ಸೆಟ್‌ಗಳಿಂದ ಇಟಲಿಯ ಸಿನ್ನರ್ ವಿರುದ್ಧ ಗೆಲುವು ಸಾಧಿಸಿದರು. ಮೊದಲ ಸೆಟ್ ಅನ್ನು ಸಿನ್ನರ್ ಸುಲಭವಾಗಿ ಗೆದ್ದರು. ಅಲ್ಕರಾಜ್ ಎರಡನೇ ಸೆಟ್ ಗೆದ್ದರು. ನಂತರ ಹಿಡಿತ ಸಾಧಿಸಿ ಮುನ್ನಡೆದರು.

ಮಂಗಳವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಅಲ್ಕರಾಜ್ 6–3, 7–6 (7/3), 6–4 ರಲ್ಲಿ ನೇರ ಸೆಟ್‌ಗಳಿಂದ ಗ್ರೀಸ್‌ನ ಸ್ಟೆಫಾನೊಸ್ ಸಿಸಿಪಾಸ್ ಅವರನ್ನು ಸೋಲಿಸಿದ್ದರು.



ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಎಎಫ್‌ಪಿ ಚಿತ್ರ

'ಯಾನಿಕ್ ಜಾನಿಕ್ ವಿರುದ್ಧ ಈ ರೀತಿಯ ಇನ್ನೂ ಅನೇಕ ಪಂದ್ಯಗಳನ್ನು ಆಡಲು ನಾನು ಆಶಿಸುತ್ತೇನೆ. ಆದರೆ ಇದು ನಾನು ಖಂಡಿತವಾಗಿಯೂ ಆಡಿದ ಕಠಿಣ ಪಂದ್ಯಗಳಲ್ಲಿ ಒಂದಾಗಿದೆ. ನನ್ನ ಆಟದ ಬಗ್ಗೆ ಸಂತೋಷವಾಗಿದೆ. ಈ ಕ್ಷಣಕ್ಕಾಗಿ ಕಾಯುತ್ತಿದ್ದೆ' ಎಂದು ಪಂದ್ಯದ ಬಳಿಕ ಅಲ್ಕರಾಜ್ ಅವರು ಹೇಳಿದರು.

ಶನಿವಾರ ನಡೆಯುವ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್ ಅವರು 12ನೇ ಶ್ರೇಯಾಂಕದ ಇಟಲಿಯ ಜಾಸ್ಮಿನ್ ಪಾವ್ಲೋನಿ ಅವರನ್ನು ಎದುರಿಸುವರು.

ರಾಜ್ಯ ಅಥ್ಲೆಟಿಕ್ ಕೂಟ: ಉಡುಪಿಯ ಸವಿನ್, ಸ್ತುತಿಗೆ 100 ಮೀಟರ್ಸ್ ಓಟದಲ್ಲಿ ಚಿನ್ನದ ಪದಕ

ಸಾದತ್, ದಾನೇಶ್ವರಿ ವೇಗದ ಅಥ್ಲೀಟ್ಸ್

ಪ್ರಜಾವಾಣಿ ವಾರ್ತೆ

ಉಡುಪಿ: ಮಿಂಚಿನ ಓಟ ಪ್ರದರ್ಶಿಸಿದ ತುಮಕೂರಿನ ಮೊಹಮ್ಮದ್ ಸಾದತ್ ಮತ್ತು ಬೆಳಗಾವಿಯ ದಾನೇಶ್ವರಿ ಎ.ಟಿ, ಶುಕ್ರವಾರ ಮುಕ್ತಾಯಗೊಂಡ ರಾಜ್ಯ ಅಥ್ಲೆಟಿಕ್ ಕೂಟದಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ವೇಗದ ಅಥ್ಲೀಟ್ಸ್ ಎನಿಸಿಕೊಂಡರು.

ಕರ್ನಾಟಕ ಅಥ್ಲೆಟಿಕ್ ಸಂಸ್ಥೆ (ಕೆಎಎ) ಮತ್ತು ಜಿಲ್ಲಾ ಅಥ್ಲೆಟಿಕ್ ಸಂಸ್ಥೆಯ ಆಶ್ರಯದಲ್ಲಿ ಅಜ್ಜರಕಾಡು ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ನಡೆದ ಕೂಟದ ಪುರುಷರ 100 ಮೀಟರ್ಸ್ ಓಟದಲ್ಲಿ ಸಾದತ್ 10.44 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರೆ ದಾನೇಶ್ವರಿ ಗುರಿ ತಲುಪಲು 11.80 ಸೆಕೆಂಡು ತೆಗೆದುಕೊಂಡರು.

ಯೂತ್ ಬಾಲಕ ಮತ್ತು ಬಾಲಕಿಯರ ವಿಭಾಗದ 100 ಮೀಟರ್ಸ್ ಓಟದ ಚಿನ್ನ ಉಡುಪಿ ಜಿಲ್ಲೆಯ ಅಥ್ಲೀಟ್‌ಗಳ ಪಾಲಾಯಿತು. ಬಾಲಕರ ವಿಭಾಗದಲ್ಲಿ ಸವಿನ್ ತಿಂಗಳಾಯ, ಬಾಲಕಿಯರ ವಿಭಾಗದಲ್ಲಿ ಸ್ತುತಿ ಪಿ.ಶೆಟ್ಟಿ ಮೊದಲಿಗರಾದರು. ಪುರುಷರ ವಿಭಾಗದಲ್ಲಿ ಉಡುಪಿಯ ಅಭಿನ್ ದೇವಾಡಿಗ, ಮಹಿಳೆಯರ ವಿಭಾಗದಲ್ಲಿ ಬೆಂಗಳೂರಿನ ವಿಜಯಕುಮಾರಿ ಜಿ.ಕೆ, ಬಾಲಕರ ವಿಭಾಗದಲ್ಲಿ ದಕ್ಷಿಣ ಕನ್ನಡದ ಹಶ್ಮಿತ್ ಸಾಲಿಯಾನ್ ಮತ್ತು ಬಾಲಕಿಯರ ವಿಭಾಗಲ್ಲಿ ಉಡುಪಿಯ ಸ್ತುತಿ ಪಿ.ಶೆಟ್ಟಿ ಉತ್ತಮ ಅಥ್ಲೀಟ್‌ಗಳಾಗಿ ಹೊರಹೊಮ್ಮಿದರು.



ಸ್ತುತಿ ಶೆಟ್ಟಿ



ವಿಜಯಕುಮಾರಿ



ಸವಿನ್ ತಿಂಗಳಾಯ (ಸಂಗ್ರಹ ಚಿತ್ರ)

ಎರಡನೇ ದಿನದ ಫಲಿತಾಂಶಗಳು (ಚಿನ್ನ ಮಾತ್ರ): ಪುರುಷರು: 100 ಮೀಟರ್ಸ್ ಓಟ: ಮೊಹಮ್ಮದ್ ಸಾದತ್ (ತುಮಕೂರು) ಕಾಲ: 10.44ಸೆ, 400 ಮೀ: ಬಾಲಕೃಷ್ಣ (ಹಾಸನ) ಕಾಲ: 48.62ಸೆ, 1500 ಮೀ: ವೈಭವ್ ಮಾರುತಿ ಪಾಟೀಲ (ಬೆಳಗಾವಿ) ಕಾಲ: 3ನಿ, 59.6 ಸೆ, 10000 ಮೀ:ಎ.ಆರ್.ರೋಹಿತ್ (ಬೆಳಗಾವಿ) ಕಾಲ: 32ನಿ, 35.1ಸೆ, 400 ಮೀ ಹರ್ಡಲ್ಸ್: ಪ್ರಣಾಮ್ ದೇವೇಂದ್ರ ಶೆಟ್ಟಿ (ಉಡುಪಿ) ಕಾಲ: 54.2 ಸೆ,3000 ಮೀ ಸ್ಟೀಪಲ್ ಚೇಸ್: ನಾಗರಾಜ ವೆಂಟಕೇಶ ದಿವಟೆ (ಧಾರವಾಡ) ಕಾಲ: 8ನಿ 59.71 ಸೆ, ಟ್ರಿಪಲ್ ಜಂಪ್: ರಾಧಾಕೃಷ್ಣ ಆರ್ (ಬೆಂಗಳೂರು) ಅಂತರ: 14.87ಮೀ, ಜಾವೆಲಿನ್ ಥ್ರೋ: ಶಾರೂಖ್ ತಾರಿಹಾಳ (ಬೆಂಗಳೂರು) ದೂರ: 66.83 ಮೀ, ಡಿಸ್ಕಸ್ ಥ್ರೋ: ನಾಗೇಂದ್ರ ಅಣ್ಣಪ್ಪ ನಾಯಕ್ (ಉತ್ತರ ಕನ್ನಡ) ದೂರ: 51.22ಮೀ, ಪೋಲ್ ವಾಲ್ಟ್: ಯದುಕೃಷ್ಣನ್ (ಯಾದಗಿರಿ) ಎತ್ತರ: 4.30ಮೀ. ಡೆಕಾಥ್ಲಾನ್: ಲೋಕೇಶ್ ರಾಥೋಡ್ (ಯಾದಗಿರಿ) ಪಾಯಿಂಟ್ಸ್: 5775.


ಮಹಿಳೆಯರು: 100 ಮೀ: ದಾನೇಶ್ವರಿ ಎ.ಟಿ (ಬೆಳಗಾವಿ) ಕಾಲ: 11.80ಸೆ, 400 ಮೀ: ವಿಜಯಕುಮಾರಿ ಜಿ.ಕೆ (ಬೆಂಗಳೂರು) ಕಾಲ: 54.54ಸೆ, 1500 ಮೀ: ಪ್ರಿಯಾಂಕಾ ಸಿ (ಬೆಂಗಳೂರು) ಕಾಲ: 4 ನಿ 52.7 ಸೆ, 10000 ಮೀ: ಕೆ.ಎಂ.ಲಕ್ಷ್ಮಿ (ದಕ್ಷಿಣ ಕನ್ನಡ) ಕಾಲ: 39ನಿ 34.5 ಸೆ, 400 ಮೀ ಹರ್ಡಲ್ಸ್: ಪ್ರಜ್ಞಾ ಕೆ (ಉಡುಪಿ) ಕಾಲ: 58.9ಸೆ, 3000 ಮೀ ಸ್ಟೀಪಲ್ ಚೇಸ್: ಶ್ರೀರಕ್ಷಾ (ಶಿವಮೊಗ್ಗ) ಕಾಲ: 11:40.12ಸೆ, ಟ್ರಿಪಲ್ ಜಂಪ್: ಪವಿತ್ರಾ ಜಿ (ಉಡುಪಿ) ಅಂತರ: 13.9 ಮೀ, ಡಿಸ್ಕಸ್ ಥ್ರೋ: ಸುಷ್ಮಾ ಬಿ (ದಕ್ಷಿಣ ಕನ್ನಡ) ದೂರ: 39.20 ಮೀ, ಪೋಲ್‌ವಾಲ್ಟ್: ಭವಿತಾ ಶೆಟ್ಟಿ (ದಕ್ಷಿಣ ಕನ್ನಡ) ಎತ್ತರ: 2.90ಮೀ, ಡೆಕಾಥ್ಲಾನ್: ಚಂದ್ರಿಕಾ (ಉಡುಪಿ) ಪಾಯಿಂಟ್ಸ್: 4285.

ಯೂತ್ ಬಾಲಕರು: 100ಮೀ: ಸವಿನ್ ತಿಂಗಳಾಯ (ಉಡುಪಿ) ಕಾಲ: 11ಸೆ, 400ಮೀ: ದಯಾನಂದ ದುಂಪಣ್ಣವರ (ದಕ್ಷಿಣ ಕನ್ನಡ) ಕಾಲ: 49.62ಸೆ, 5 ಕಿಮೀ ವೇಗನಡಿಗೆ: ವಿನಾಯಕ ಗುರುಸಿದ್ಧಪ್ಪ ಕುಬಿಹಾಳ (ದಕ್ಷಿಣ ಕನ್ನಡ) ಕಾಲ: 27ನಿ 4.02ಸೆ, ಡಿಸ್ಕಸ್ ಥ್ರೋ: ಅವಿನಾಶ್ ತಲಕೇರಿ (ಚಾಮರಾಜನಗರ) ದೂರ: 43.90 ಮೀ, ಜಾವೆಲಿನ್ ಥ್ರೋ: ಪುಷ್ಪಕ್ ನೆಲವಡೆ (ಬೀದರ್) ದೂರ: 63.55ಮೀ, ಹೆಪ್ಟಾಥ್ಲಾನ್: ಚಿನ್ಮಯ್ ಕೆ (ಚಾಮರಾಜನಗರ) ಪಾಯಿಂಟ್ಸ್: 3318.

ಯೂತ್ ಬಾಲಕಿಯರು: 100ಮೀ: ಸ್ತುತಿ ಪಿ.ಶೆಟ್ಟಿ (ಉಡುಪಿ) ಕಾಲ: 12.30 ಸೆ, 400 ಮೀ: ರೀತುಶ್ರೀ (ದಕ್ಷಿಣ ಕನ್ನಡ) ಕಾಲ: 58.38 ಸೆ, ಡಿಸ್ಕಸ್ ಥ್ರೋ: ತೇಜಸ್ವಿನಿ ಸಿ (ಮೈಸೂರು) ದೂರ: 36.61 ಮೀ, ಜಾವೆಲಿನ್ ಥ್ರೋ: ದಿಶಾ ನೆಲವಡೆ (ಬೀದರ್) ದೂರ: 38.71 ಮೀ, 3000 ಮೀ ವೇಗ ನಡಿಗೆ: ಅಂಬಿಕಾ ಕೋಳಿ (ದಕ್ಷಿಣ ಕನ್ನಡ) ಕಾಲ: 17ನಿ 12.30ಸೆ.

ಸೆ.5ರಿಂದ ದೇಶೀಯ ಕ್ರಿಕೆಟ್ ಋತು

ದುಲೀಪ್ ಟ್ರೋಫಿಯೊಡನೆ ಆರಂಭ • ವೇಳಾಪಟ್ಟಿ ಪ್ರಕಟಿಸಿದ ಬಿಸಿಸಿಐ



ನವದೆಹಲಿ (ಪಿಟಿಐ): ಸೆಪ್ಟೆಂಬರ್ 5ರಂದು ಅನಂತಪುರದಲ್ಲಿ ದುಲೀಪ್ ಟ್ರೋಫಿ ಟೂರ್ನಿಯ ಆರಂಭದೊಡನೆ, 2024–25ನೇ ಸಾಲಿನ ದೇಶಿ ಕ್ರಿಕೆಟ್ ಋತು ಶುರುವಾಗಲಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಗುರುವಾರ ವೇಳಾಪಟ್ಟಿಯನ್ನು ಪ್ರಕಟಿಸಿತು.

ಸೀನಿಯರ್ ಆಯ್ಕೆ ಸಮಿತಿ ಆಯ್ಕೆ ಮಾಡುವ ನಾಲ್ಕು ತಂಡಗಳು ಸೆ. 5 ರಿಂದ 22ರವರೆಗೆ ನಡೆಯುವ ದುಲೀಪ್ ಟ್ರೋಫಿಯಲ್ಲಿ ಭಾಗವಹಿಸಲಿವೆ.

ಇದರ ನಂತರ ಇರಾನಿ ಕಪ್ ಮತ್ತು ರಣಜಿ ಟ್ರೋಫಿ ಪಂದ್ಯಗಳು ನಡೆಯಲಿವೆ. ಮೊದಲ ಹಂತದಲ್ಲಿ ರಣಜಿ ಟ್ರೋಫಿಯ ಐದು ಲೀಗ್ ಪಂದ್ಯಗಳು ನಡೆಯಲಿವೆ.

ಆಟಗಾರರ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ವೇಳಾಪಟ್ಟಿ ರೂಪಿಸಲಾಗಿದೆ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದರು.

ರಣಜಿ ಟ್ರೋಫಿಯಲ್ಲಿ ಕರ್ನಾಟಕ ಎಲೈಟ್ 'ಸಿ' ಗುಂಪಿನಲ್ಲಿದೆ. ಈ ಮಧ್ಯಪ್ರದೇಶ, ಹರಿಯಾಣ, ಬಂಗಾಳ, ಕೇರಳ, ಉತ್ತರ ಪ್ರದೇಶ, ಪಂಜಾಬ್ ಮತ್ತು ಬಿಹಾರ ಗುಂಪಿನಲ್ಲಿರುವ ಇತರ ತಂಡಗಳು.

ಸೈಯ್ಯದ್ ಮುಷ್ತಾಕ್ ಅಲಿ ಟೂರ್ನಿಯಲ್ಲಿ ಕರ್ನಾಟಕವು 'ಬಿ' ಗುಂಪಿನಲ್ಲಿದೆ. ಬರೋಡ, ಗುಜರಾತ್, ಸೌರಾಷ್ಟ್ರ, ತಮಿಳುನಾಡು, ಉತ್ತರಾಖಂಡ, ತ್ರಿಪುರ, ಸಿಕ್ಕಿಂ 'ಬಿ' ಗುಂಪಿನಲ್ಲಿರುವ ಇತರ ತಂಡಗಳು.

ವಿಜಯ್ ಹಜಾರೆ ಟ್ರೋಫಿಯಲ್ಲಿ ರಾಜ್ಯ ತಂಡ 'ಸಿ' ಗುಂಪಿನಲ್ಲಿದ್ದು, ಮುಂಬೈ, ಹೈದರಾಬಾದ್, ಸೌರಾಷ್ಟ್ರ, ಪಂಜಾಬ್, ಪುದುಚೇರಿ, ಅರುಣಾಚಲ ಪ್ರದೇಶ ಮತ್ತು ನಾಗಾಲ್ಯಾಂಡ್ ಕೂಡ ಈ ಗುಂಪಿನಲ್ಲಿವೆ.

ಸಿ.ಕೆ.ನಾಯ್ಡು ಟ್ರೋಫಿಗೆ ಟಾಸ್ ಇಲ್ಲ: ಮಂಡಳಿಯು ಮಹತ್ವದ ನಿರ್ಧಾರವೊಂದರಲ್ಲಿ ಸಿ.ಕೆ.ನಾಯ್ಡು ಟ್ರೋಫಿ ಪಂದ್ಯಗಳಿಗೆ ಟಾಸ್ ರದ್ದುಗೊಳಿಸಲು ನಿರ್ಧರಿಸಿದೆ. ಇದರ ಬದಲು ಪ್ರವಾಸಿ ತಂಡಗಳಿಗೆ ಮೊದಲು ಬ್ಯಾಟಿಂಗ್ ಅಥವಾ ಬೌಲಿಂಗ್ ಆಯ್ಕೆ ಮಾಡುವ ಅವಕಾಶ ನೀಡಲಾಗುತ್ತದೆ.

ವೇಳಾಪಟ್ಟಿ
ದುಲೀಪ್ ಟ್ರೋಫಿ ಸೆಪ್ಟೆಂಬರ್ 5 ರಿಂದ 22
ಇರಾನಿ ಕಪ್ ಅಕ್ಟೋಬರ್ 1 ರಿಂದ 5.
ರಣಜಿ ಟ್ರೋಫಿ ಅ.11 ರಿಂದ ಫೆ.2, 2025 (ಲೀಗ್ ಹಂತ). ಫೆ.8 ರಿಂದ ಮಾರ್ಚ್ 2 (ನಾಕೌಟ್)
ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ ನ.23 ರಿಂದ ಡಿ.5 (ಗುಂಪು ಹಂತ), ಡಿ.9 ರಿಂದ 15 (ನಾಕೌಟ್)
ವಿಜಯ್ ಹಜಾರೆ ಟ್ರೋಫಿ ಡಿ.21 ರಿಂದ ಜ.5, 2025 (ಗುಂಪು ಹಂತ). ಜ.9 ರಿಂದ 18 (ನಾಕೌಟ್)

ಸೆಮಿಫೈನಲ್‌ಗೆ ನಗಾಲ್

ಹೀಲ್‌ಬ್ರಾನ್, ಜರ್ಮನಿ (ಪಿಟಿಐ): ಭಾರತದ ಅಗ್ರಮಾನ್ಯ ಟೆನಿಸ್ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಇಲ್ಲಿ ನಡೆಯುತ್ತಿರುವ ಎಟಿಪಿ 100 ಚಾಲೆಂಜರ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 95ನೇ ಸ್ಥಾನದಲ್ಲಿರುವ ನಗಾಲ್, ಶುಕ್ರವಾರ ಕ್ವಾರ್ಟರ್ ಫೈನಲ್‌ನಲ್ಲಿ 6-1, 7-6 (7-4) ರಿಂದ ರಷ್ಯಾದ ಇವಾನ್ ಗಕೋವ್ ಅವರನ್ನು ಮಣಿಸಿ ಮುನ್ನಡೆದರು.



ಸುಮಿತ್ ನಗಾಲ್ –ಎಎಫ್‌ಪಿ ಚಿತ್ರ

ಟೆನಿಸ್: ಕೆವಿನ್, ಕರಣ್ ಫೈನಲ್‌ಗೆ

ಬೆಂಗಳೂರು: ಮೂರನೇ ಶ್ರೇಯಾಂಕದ ಕರ್ನಾಟಕದ ಕೆವಿನ್ ಸುರೇಶ್ ಅವರು ಇಲ್ಲಿನ ಟಾಪ್‌ಸ್ಪಿನ್ ಕೋರ್ಟ್‌ನಲ್ಲಿ ನಡೆಯುತ್ತಿರುವ ಟಿ.ಎನ್.ಆರ್. ಸ್ಮಾರಕ ಎಐಟಿಎ ರಾಷ್ಟ್ರೀಯ ಸರಣಿಯ 18 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಬಾಲಕರ ಸಿಂಗಲ್ಸ್‌ನಲ್ಲಿ 7-6(3), 6-4 ಸೆಟ್‌ಗಳಿಂದ ಎರಡನೇ ಶ್ರೇಯಾಂಕದ ಡೇವಿಡ್ ಜೇಸನ್ (ಕರ್ನಾಟಕ) ಅವರನ್ನು ಮಣಿಸಿ ಫೈನಲ್ ಪ್ರವೇಶಿಸಿದರು.

ಶುಕ್ರವಾರ ನಡೆದ ಮತ್ತೊಂದು ಸೆಮಿಫೈನಲ್‌ನಲ್ಲಿ ಕೇರಳದ ಕರಣ್ ಥಾಪಾ 7-5, 6-3 ರಿಂದ ಕರ್ನಾಟಕದ ಶ್ರೀಕರ್ ಡೋಣಿ ಅವರನ್ನು ಮಣಿಸಿದರು. ಬಾಲಕಿಯರ ಸಿಂಗಲ್ಸ್‌ನಲ್ಲಿ ಕರ್ನಾಟಕದ ಅಮೋದಿನಿ ನಾಯಕ್ 7-5,6-4ರಿಂದ ಅಗ್ರ ಶ್ರೇಯಾಂಕದ ಹರ್ಷಿಣಿ ಎನ್. (ಕರ್ನಾಟಕ) ಅವರಿಗೆ ಆಘಾತ ನೀಡಿ ಫೈನಲ್‌ಗೆ ಲಗ್ಗೆ ಹಾಕಿದರು. ಮತ್ತೊಂದು ಸೆಮಿಫೈನಲ್‌ನಲ್ಲಿ ಕರ್ನಾಟಕದ ಸ್ನಿಗ್ಧಾ ಕಾಂತ 7-6(8), 6-0ರಿಂದ ಕಶ್ವಿ ಸುನಿಲ್ (ಕರ್ನಾಟಕ) ಅವರನ್ನು ಮಣಿಸಿ ಮುನ್ನಡೆದರು.

ಕರುವಾನಾಗೆ ಮಣಿದ ಪ್ರಜ್ಞಾನಂದ

ಸ್ಟಾವೆಂಜರ್ (ನಾರ್ವೆ), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ನಾರ್ವೆ ಚೆಸ್ ಟೂರ್ನಿಯ 9ನೇ ಸುತ್ತಿನಲ್ಲಿ ಫ್ಯಾಬಿಯಾನೊ ಕರುವಾನಾ ಎದುರು ಸೋಲನುಭವಿಸಿದರು. ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಇನ್ನೊಂದು ಪಂದ್ಯದಲ್ಲಿ ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಅವರನ್ನು ಸೋಲಿಸಿದರು.

ಕಾರ್ಲ್‌ಸನ್ 16 ಪಾಯಿಂಟ್ಸ್ ಸಂಗ್ರಹಿಸಿದ್ದು, ಎರಡನೇ ಸ್ಥಾನದಲ್ಲಿರುವ ನಕಾಮುರಾ (14.5) ಅವರಿಗಿಂತ ಒಂದೂವರೆ ಪಾಯಿಂಟ್ಸ್ ಮುಂದೆಯಿದ್ದಾರೆ.

ಟೂರ್ನಿಯಲ್ಲಿ ನಿರಾಶಾದಾಯಕ ಆಟವಾಡಿದ್ದ ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ (ಚೀನಾ) ಅವರು ನಕಾಮುರಾ ಅವರಿಗೆ ಸೋಲಿನ ಆಘಾತ ನೀಡಿದರು.

ಕರುವಾನಾ ಅವರಿಗೆ 'ಆರ್ಮ್‌ಗೆಡನ್'ನಲ್ಲಿ ಸೋತರೂ, ಪ್ರಜ್ಞಾನಂದ (13) ಅವರ ಮೂರನೇ ಸ್ಥಾನಕ್ಕೆ ತೊಂದರೆಯಾಗಿಲ್ಲ. ಅಲಿರೇಝಾ (12), ಕರುವಾನಾ (10.5) ಮತ್ತು ಲಿರೆನ್ (6) ಕ್ರಮವಾಗಿ ನಾಲ್ಕರಿಂದ ಆರರವರೆಗಿನ ಸ್ಥಾನ ಪಡೆದಿದ್ದಾರೆ.



ಮ್ಯಾಗ್ನಸ್ ಕಾರ್ಲ್‌ಸನ್ –ಎಎಫ್‌ಪಿ ಚಿತ್ರ

ಮಹಿಳಾ ವಿಭಾಗದಲ್ಲಿ ಆರ್.ವೈಶಾಲಿ ಅವರು ಚೀನಾದ ಟಿಂಗ್ಜೀ ಲೀ ಎದುರು 28 ನಡೆಗಳಲ್ಲಿ ಸೋಲನ್ನು ಕಂಡು ನಾಲ್ಕನೇ ಸ್ಥಾನಕ್ಕೆ ಕುಸಿಯಬೇಕಾಯಿತು. ಭಾರತದ ಇನ್ನೊಬ್ಬ ಆಟಗಾರ್ತಿ ಕೋನೇರು ಹಂಪಿ ಅವರು ಅಗ್ರಸ್ಥಾನದಲ್ಲಿರುವ ಚೀನಾ ಆಟಗಾರ್ತಿ ಜು ವೆನ್‌ಜುನ್ ಅವರಿಗೆ ಮಣಿದರು.

ವೆನ್‌ಜುನ್ 16 ಪಾಯಿಂಟ್ಸ್ ಕಲೆಹಾಕಿ ಮೊದಲ ಸ್ಥಾನದಲ್ಲಿದ್ದಾರೆ. ಟಿಂಗ್ಜಿ ಮತ್ತು ಉಕ್ರೇನ್‌ನ ಅನ್ನಾ ಮುಝಿಚುಕ್ ಇಬ್ಬರೂ ಎರಡನೇ ಸ್ಥಾನ (ತಲಾ 14.5) ಹಂಚಿಕೊಂಡಿದ್ದಾರೆ. ವೈಶಾಲಿ (11.5) ನಾಲ್ಕನೇ ಸ್ಥಾನದಲ್ಲಿದ್ದಾರೆ. ಹಂಪಿ (9) ಮತ್ತು ಸ್ವೀಡನ್‌ನ ಪಿಯಾ ಕ್ರಾಮ್ಲಿಂಗ್ (6.5) ಕೊನೆಯ ಎರಡು ಸ್ಥಾನದಲ್ಲಿದ್ದಾರೆ.

ವೈಶಾಲಿ ಮಾತ್ರ ಕ್ಲಾಸಿಕಲ್ ಪಂದ್ಯದಲ್ಲಿ ಸೋತರು. ಉಳಿದವು ಆರ್ಮ್‌ಗೆಡನ್‌ಗೆ ಬೆಳೆದವು.

ಕ್ರಾಮ್ಲಿಂಗ್, ಅನ್ನಾ ಎದುರು ಸೋಲನುಭವಿಸಿದರು.

ಲಕ್ಷ್ಯ ಸೇನ್ ನಿರ್ಗಮನ

ಜಕಾರ್ತ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಇಂಡೊನೇಷ್ಯಾ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ ನಿರ್ಗಮಿಸುವುದರೊಂದಿಗೆ ಇಲ್ಲಿ ಭಾರತದ ಸವಾಲಿಗೆ ತೆರೆಬಿದ್ದಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ವಿಶ್ವದ 14ನೇ ಕ್ರಮಾಂಕದ ಸೇನ್ 22-24, 18-21 ಗೇಮ್‌ಗಳಿಂದ ವಿಶ್ವದ ಐದನೇ ರ‍್ಯಾಂಕ್‌ನ ಆಂಡರ್ಸ್ ಆಂಟೊನ್‌ಸೆನ್ (ಡೆನ್ಮಾರ್ಕ್) ಅವರಿಗೆ ಮಣಿದರು. ಈ ಮೂಲಕ ಆಂಟೊನ್‌ಸೆನ್, ಸೇನ್ ವಿರುದ್ಧ ಗೆಲುವಿನ ದಾಖಲೆಯನ್ನು 3–2ಕ್ಕೆ ಹೆಚ್ಚಿಸಿಕೊಂಡರು.

ಒಂದು ಗಂಟೆ ಒಂದು ನಿಮಿಷಗಳ ಕಾಲ ನಡೆದ ಹೋರಾಟದಲ್ಲಿ ಸೇನ್ ಉತ್ತಮ ಪೈಪೋಟಿ ನೀಡಿದರು. ಮೊದಲ ಗೇಮ್‌ನಲ್ಲಿ ಆರಂಭದಲ್ಲೇ ಡೆನ್ಮಾರ್ಕ್ ಆಟಗಾರ 4–0 ಮುನ್ನಡೆ ಪಡೆದರು. ಆದರೆ, ಸೇನ್ ಪ್ರತಿರೋಧ ತೋರಿ 5–5 ಸಮಬಲ ಸಾಧಿಸಿದರು. ಒಂದು ಹಂತದಲ್ಲಿ ಮುನ್ನಡೆಯನ್ನು 15–11ಕ್ಕೆ ವಿಸ್ತರಿಸಿದರು. ಆದರೆ, ಅಂತಿಮವಾಗಿ ಆಂಟೊನ್‌ಸೆನ್ ಮೇಲುಗೈ ಸಾಧಿಸಿದರು.



ಭಾರತದ ಲಕ್ಷ್ಯ ಸೇನ್ –ಪಿಟಿಐ ಚಿತ್ರ

ಎರಡನೇ ಗೇಮ್‌ನಲ್ಲೂ ಉಭಯ ಆಟಗಾರರ ಮಧ್ಯೆ ತುರುಸಿನ ಪೈಪೋಟಿ ಮುಂದುವರಿಯಿತು. ಹಲವು ದೀರ್ಘ ರ‍್ಯಾಲಿಗಳಿಗೂ ಪಂದ್ಯ ಸಾಕ್ಷಿಯಾಯಿತು. ಆರಂಭದಲ್ಲಿ 7–2ರ ಮುನ್ನಡೆ ಪಡೆದಿದ್ದ ಸೇನ್, ನಂತರ ಕೆಲ ತಪ್ಪುಗಳನ್ನು ಎಸಗಿದರು. ಅದರ ಲಾಭ ಪಡೆದ ಎದುರಾಳಿ ಆಟಗಾರ ಗೆಲುವಿನೊಂದಿಗೆ ಸೆಮಿಫೈನಲ್‌ಗೆ ಮುನ್ನಡೆದರು.

ಆಂಟೊನ್‌ಸೆನ್ ಸೆಮಿಫೈನಲ್‌ನಲ್ಲಿ ಎಂಟನೇ ಶ್ರೇಯಾಂಕದ ಥಾಯ್ಲೆಂಡ್‌ನ ಕುನ್ಲಾವುಟ್ ವಿಟಿಡ್ಸರ್ನ್ ಅವರನ್ನು ಎದುರಿಸುವರು. ಕುನ್ಲಾವುಟ್ ಅವರು 21–16, 21–17ರಿಂದ ಮಲೇಷ್ಯಾದ ಲೀ ಝಿ ಜಿಯಾ ಅವರನ್ನು ಸೋಲಿಸಿದರು.